
ಲೇಖಕರು
ಎಸ್. ಜಿ. ನರಸಿಂಹಾಚಾರ್ಯ
ಸಂಪಾದಕರು
ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

# ಅಲ್ಲಾವುದೀನ್

## ಮತ್ತು ಅದ್ಭುತದೀಪ



ವಸಂತ ಪ್ರಕಾಶನ

# ಅಲ್ಲಾವುದೀನ್ ಮತ್ತು ಅದ್ಭುತದೀಪ

ಲೇಖಕರು

ಎಸ್. ಜಿ. ನರಸಿಂಹಾಚಾರ್ಯ

ಸಂಪಾದಕರು

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ವಸಂತ ಪ್ರಕಾಶನ

ನಂ. 360, 10 'ಬಿ' ಮೇನ್, ಜಯನಗರ 3ನೇ ಬ್ಲಾಕ್
ಬೆಂಗಳೂರು – 560 011. ದೂರವಾಣಿ: 22443996
*email: vasantha_prakashana@rediffmail.com*

***"Allavudiṇ mattu Adbhutadipa"*** -
(Story of Aladdin and the Wonderful Lamp) in Kannada, Translated by **Sri S. G. Narasimhachar**; Edited by **Dr. T. V. Venkatachala Sastry**, Mysore. Published by ***Vasantha Prakashana,*** # 360, 10th B Main, Jayanagar, 3rdBlock, Bangalore - 560 011
Ph. : 080-22443996

| | |
|---|---|
| ಪ್ರಥಮ ಮುದ್ರಣ (ಸಂಪಾದಿತ) | : 1992 |
| ದ್ವಿತೀಯ ಮುದ್ರಣ | : 2010 |
| ಪುಟಗಳು | : Viii + 88 = 96 |
| ಬೆಲೆ | : ರೂ. 40/- |
| ಉಪಯೋಗಿಸಿದ ಕಾಗದ | : 70 gsm ಮ್ಯಾಪ್ಲಿಥೊ |
| ಮುಖಪುಟ | : ಆರ್ಟ್ ಫೋಕಸ್ |
| ಹಕ್ಕುಗಳು | : ಕಾದಿರಿಸಲಾಗಿದೆ |

ಪ್ರಕಾಶಕರು :
**ವಸಂತ ಪ್ರಕಾಶನ**
**ನಂ.360, 10ನೇ ಬಿ ಮೈನ್, 3ನೇ ಬ್ಲಾಕ್**
**ಜಯನಗರ, ಬೆಂಗಳೂರು - 560 011**
**ದೂರವಾಣಿ : 22443996**

ಅಕ್ಷರ ಜೋಡಣೆ :
**ಶ್ರೀ ಲಕ್ಷ್ಮೀ ಎಂಟರ್‌ಪ್ರೈಸಸ್**
**ದೂರವಾಣಿ : 64555684**

ಮುದ್ರಕರು :
ವಿಶ್ವಾಸ್ ಪ್ರಿಂಟ್ಸ್, ಚಾಮರಾಜಪೇಟೆ, ಬೆಂಗಳೂರು
ದೂರವಾಣಿ: 26606088

# ಅರಿಕೆ

ಶ್ರೀ ಎಸ್.ಜಿ. ನರಸಿಂಹಾಚಾರ್ಯರು ಕನ್ನಡಭಾಷೆಯಲ್ಲಿ ಮಕ್ಕಳ ಸಾಹಿತ್ಯವನ್ನು ಪೋಷಿಸಿದ ಆದ್ಯರಲ್ಲಿ ಒಬ್ಬರು. ಅವರು ಮಕ್ಕಳಿಗಾಗಿ ಬರೆದ ಕಥಾಸಾಹಿತ್ಯದ ಬಹುಭಾಗ ಈಗ ದೊರೆಯುತ್ತಿಲ್ಲ; 'ಗಲಿವರನ ದೇಶಸಂಚಾರ', 'ಈಸೋಪನ ನೀತಿಕಥೆಗಳು', 'ಗಯ್ಯಾಳಿಯನ್ನು ಸಾಧುಮಾಡುವಿಕೆ' ಇವು ಅಂಥವು. ಮುಂದೆ ಎಂದಾದರೂ ಇವು ಸಿಕ್ಕಿ ಪ್ರಕಟಗೊಳ್ಳುವಂತಾದರೆ, ಅದನ್ನು ಮಕ್ಕಳ ಪುಣ್ಯವೆಂದು ತಿಳಿಯಬೇಕು.

ಪ್ರಸ್ತುತ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಇಲ್ಲಿಯ ಪುಸ್ತಕ ಭಂಡಾರದಲ್ಲಿ ಎಸ್. ಜಿ. ನ. ಅವರ 'ಅಲ್ಲಾವುದೀನ್' ಎಂಬ ಮಕ್ಕಳ ಪುಸ್ತಕ ಈಗ ಕೆಲವು ವರ್ಷಗಳ ಹಿಂದೆ ನನ್ನ ಕಣ್ಣಿಗೆ ಬಿದ್ದಿತು. ಅದರಲ್ಲಿ ಮುಖಪುಟವಿರಲಿಲ್ಲ; ಆದರೆ ಕೊನೆಯ ಪುಟದಲ್ಲಿ, ಕಥೆ ಮುಗಿದ ಮೇಲೆ ಹೀಗೆ ಒಂದು ಅಭಿಪ್ರಾಯ ಮುದ್ರಿತವಾಗಿದ್ದುದರಿಂದ ಪುಸ್ತಕ ಅವರದೇ ಎನ್ನುವುದು ದೃಢಪಟ್ಟಿತು:

## OPINION ON THIS BOOK

We are in receipt of an excellent translation in Canarese of the "Story of Aladdin and the Wonderful Lamp" beloning to "Books for the Bairns" series. The translation is by Mr. S.G. Narasimhachary, Librarian, Government Oriental Library, Mysore. The book is written in very simple and chaste Canarese and is very well suited for home reading. It is very neatly printed and the illustrations have come off very well.

**- The Madras Standard**

ಹೀಗಾಗಿ ಈ ಪುಸ್ತಕ ಎಸ್. ಜಿ. ನ. ಅವರ 'ಅಲ್ಲಾವುದ್ದೀನ್ ಮತ್ತು ಅದ್ಭುತದೀಪ'ದ ಎರಡನೆಯ ಮುದ್ರಣವಾಗಿರ ಬಹುದೆಂದುತೋರಿತು. ಪುಟಸಂಖ್ಯೆ, ಚಿತ್ರಗಳ ಸಂಖ್ಯೆ ಇವು 'ವಿದ್ಯಾದಾಯಿನಿ' ಆಗಸ್ಟ್ 1899ರಲ್ಲಿ ಬಂದಿರುವ ವಿಮರ್ಶಾತ್ಮಕ ಟಿಪ್ಪಣಿಯೊಂದಿಗೆ ತಾಳೆಯಾದುವು.

ಪುಸ್ತಕದ ಪ್ರಥಮಮುದ್ರಣ 1899ರಲ್ಲಿ ಎಂದು ತಿಳಿದಿದೆ ; ನನಗೆ ದೊರೆತ ಪುಸ್ತಕದಲ್ಲಿ ಮುಖಪುಟವಿಲ್ಲದ ಕಾರಣ, ಮುದ್ರಣದ ವರ್ಷ ತಿಳಿಯುತ್ತಿಲ್ಲ. ಸದ್ಯದಲ್ಲಿ, ಸುಮಾರು 90 ವರ್ಷಗಳ ಬಳಿಕ ಈ ಪುಸ್ತಕ ಪುನರ್ ಮುದ್ರಣಗೊಳ್ಳುತ್ತಿದೆ ಎಂದು ಬೇಕಾದರೆ ತಿಳಿಯಬಹುದು. ಅಂದು ಪುಟ್ಟ ಮಕ್ಕಳಾಗಿ ಈ ಪುಸ್ತಕವನು ಓದಿದವರು, ಇಂದು ಜೀವಿಸಿದ್ದರೆ, ಮುತ್ತ ಮುದುಕರಾಗಿ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳನ್ನು ಕಂಡವರಾಗಿರುತ್ತಾರೆ!

ನನಗೆ ದೊರೆತ ಪುಸ್ತಕದ ಆಧಾರದ ಮೇಲೆ ಈಗಿನ ಮುದ್ರಣವನ್ನು ಮಾಡಿಸಿದೆ. ಅಲ್ಲಲ್ಲಿ ವಿರಾಮಚಿಹ್ನೆಗಳನ್ನು ಪರಿಷ್ಕರಿಸಿರುವುದು ಹೊರತು, ಕೆಲವು ಚಿತ್ರಗಳನ್ನು ಮಾತ್ರ ಆಯ್ದುಶೀರ್ಷಿಕೆಗಳನ್ನು ಬರೆದಿರುವುದು ಹೊರತು ಬೇರೆ ಯಾವ ಬದಲಾವಣೆಗಳನ್ನೂ ಮಾಡಿಲ್ಲ. ಭಾಷೆಯ ಗತಿಯಲ್ಲಿ ಉಂಟಾಗಿರುವ ಸಹಜವಾದ ದಲಾವಣೆಗಳಿಂದ ಈ ಪುಸ್ತಕದ ಭಾಷೆ ಅಲ್ಲಲ್ಲಿ ಸ್ವಲ್ಪ ಹಳತಾಗಿ, ವಿಲಕ್ಷಣವಾಗಿ ತೋರಬಹುದು; ಆದರೆ ಒಟ್ಟಿನಲ್ಲಿ ಸರಳವೂ ಸುಲಭವೂ ಆದ ಓದಿಗೆ ಇಂದು ಸಹ ಈ ಪುಸ್ತಕ ಒಪ್ಪುವುದೆನ್ನಬೇಕು. ನಮ್ಮ ಕಾಲದ ಮಕ್ಕಳು, ಅವರ ಅಜ್ಜ ಮುತ್ತಜ್ಜಂದಿರು ಓದಿ ಸಂತೋಷಪಟ್ಟ ಹಾಗೆಯೇ, ತಾವು ಸಹ ಈ ಪುಸ್ತಕವನ್ನು ಓದಿ ಸಂತೋಷಗೊಳ್ಳಲಿ ಎಂಬುದಾಗಿ ಹಾರೈಸುತ್ತೇನೆ.

★ ★ ★

ಕನ್ನಡ ಭಾಷೆಯಲ್ಲಿ ಮಕ್ಕಳ ಸಾಹಿತ್ಯವಲಯದ ಮನೋರಂಜಕ ಕಥೆಗಳಲ್ಲಿ 'ಅಲ್ಲಾವುದೀನ್ ಮತ್ತು ಅದ್ಭುತದೀಪದ ಕಥೆ' ಕೂಡ ಒಂದಾಗಿದ್ದು, ಅದಕ್ಕೆ ಇನ್ನೂ ಕುಗ್ಗದ ಆಕರ್ಷಣೆಯಿದೆ. ಬೇರೆ ಬೇರೆ ಕಾಲದ ಕನ್ನಡ ಸಾಹಿತಿಗಳು ತಮ್ಮ ತಮ್ಮ ಕಾಲದ ಭಾಷೆ ಶೈಲಿಗಳಲ್ಲಿ ಈ ಕಥೆಯನ್ನು ಆವರ್ತಿಸುತ್ತ ಬಂದಿದ್ದಾರೆ. ನನಗೆ ತಿಳಿದ ಮಟ್ಟಿಗೆ ಉದ್ದಿ ದಕ್ಷಿಣಾಮೂರ್ತಿ ಶಾಸ್ತ್ರಿ (ಅಲ್ಲಾವುದಿಯ ಅದ್ಭುತ ದೀಪಸ್ತಂಭದ ಕಥೆ : 1890), ಎಸ್. ಜಿ. ನರಸಿಂಹಾಚಾರ್ಯ (ಅಲ್ಲಾವುದೀನ್ ಮತ್ತು ಅದ್ಭುತ ದೀಪ: 1899), ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ (ಅಲ್ಲಾವುದ್ದೀನ ಮತ್ತು ಒಂದು ಸೋಜಿಗದ ಕಥೆ), ಪಂಜೆ ಮಂಗೇಶರಾವ್ (ಅಲ್ಲಾವುದ್ದೀನನ ವಿಚಿತ್ರದೀಪ), ಆರ್.ಎನ್. ಮಳಗಿ (ಅದ್ಭುತದೀಪ), ಎಚ್.ಎಸ್. ಹರಿಶಂಕರ್ (ಅಲ್ಲಾವುದ್ದೀನ್ ಮತ್ತು ಅದ್ಭುತದೀಪ) ಈ ಕೆಲವರು

ಪ್ರಯತ್ನಗಳನ್ನು ನಡಸಿ ಮಕ್ಕಳನ್ನು ರಂಜಿಸಿದವರು. ಈ ಸರಣಿಯಲ್ಲಿ ಮೊದಲಿಬ್ಬರ ರಚನೆಗಳಿಗೆ ನೂರು ವರ್ಷ ದಾಟಿದ ಹಳಮೆಯಿದೆ.

ಎಸ್.ಜಿ.ನ. ಅವರ ಪುಸ್ತಕದ ಈ ಪುನರ್ಮುದ್ರಣ ಬೆಂಗಳೂರಿನ ವಸಂತ ಪ್ರಕಾಶನದ ಮಾನ್ಯಮಿತ್ರರು ಶ್ರೀ ಕೆ. ಎಸ್. ಮುರಳಿ ಅವರ ಸ್ನೇಹಾದರಗಳಿಂದ ಸಾಧ್ಯವಾಗಿದೆ (ಹಿಂದಿನ ಮುದ್ರಣವನ್ನು ಮೈಸೂರಿನ ಕಾವ್ಯಾಲಯದ ಮಾನ್ಯ ಮಿತ್ರರು ಶ್ರೀ ಕೂಡಲಿ ಕೃಷ್ಣಮೂರ್ತಿ ಅವರು 1992ರಲ್ಲಿ ಹೊರತಂದಿದ್ದರು).

ಪುಸ್ತಕ ಸುಂದರವಾಗಿ, ಸಚಿತ್ರವಾಗಿ, ಮಕ್ಕಳು ಸಂತೋಷದಿಂದ ಓದುವ ಹಾಗೆ ಅಚ್ಚಾಗಿರುವುದು ನನಗೆ ತುಂಬ ತೃಪ್ತಿ ಕೊಟ್ಟಿದೆ. ಇದು ಶ್ರೀ ಮುರಳಿಯವರ ಶ್ರೇಷ್ಠ ಕಲಾಭಿರುಚಿಯ ಫಲ. (ಈಚೆಗೆ ದೊರೆತ 'ಗಲಿವರನ ದೇಶಸಂಚಾರ'ವನ್ನು ಅವರೇ 2008ರಲ್ಲಿ ಸುಂದರವಾಗಿ ಪುನರ್ಮುದ್ರಿಸಿರುವುದನ್ನು ನಾನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.) ಇವರಿಗೂ ಸಹಕಾರ ನೀಡಿದ ವಿ. ಸೀ. ಸಂಪದ ವೇದಿಕೆಯ ಮಾನ್ಯಮಿತ್ರರು ಶ್ರೀ ಎಂ.ವಿ.ವೆಂಕಟೇಶಮೂರ್ತಿಯವರಿಗೂ ಮುದ್ರಣದಲ್ಲಿ ನೆರವಾದ ಶ್ರೀ ಎಸ್. ಕಾರ್ತಿಕ್ ಅವರಿಗೂ ನಾನು ತುಂಬ ಕೃತಜ್ಞ.

**ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ**

# ಅಲ್ಲಾವುದೀನ್ ಮತ್ತು ಅದ್ಭುತದೀಪ

ಚೀನಾದೇಶದ ಒಂದು ದೊಡ್ಡ ಪಟ್ಟಣದಲ್ಲಿ ಮುಸ್ತಾಫನೆಂಬ ದರ್ಜಿಯುವನಿದ್ದನು. ಅವನಿಗೆ ಒಬ್ಬ ಹೆಂಡತಿಯೂ ಅಲ್ಲಾವುದೀನನೆಂಬ ಮಗನೂ ಇದ್ದರು. ಮುಸ್ತಾಫನು ಬಲು ಬಡವನಾದುದರಿಂದ ಅಷ್ಟು ಚಿಕ್ಕ ಸಂಸಾರವನ್ನು ಕೂಡ ಕಾಪಾಡಿಕೊಳ್ಳಲಾರದೆ ಪೇಚಾಡುತ್ತಿದ್ದನು. ಅಲ್ಲಾವುದೀನನು ಬುದ್ಧಿಯಿಲ್ಲದವನು; ಅದರ ಮೇಲೆ ಸೋಮಾರಿ; ತಾಯ್ತಂದೆ ಗಳ ಮಾತನ್ನು ಕೇಳುತ್ತಿರಲಿಲ್ಲ. ಬೆಳಗಾದರೆ ಹೊರಗೆ ಹೋಗಿ ಹಗಲೆಲ್ಲಾ ಬೀದಿಗಳಲ್ಲಿ ಆಡುತ್ತಿದ್ದನು. ಹಾಗೆಯೇ ಅವನಿಗೆ ಹತ್ತು ಹನ್ನೆರಡು ವಯಸ್ಸಾಗುವವರೆಗೂ ಕಾಲ ಕಳೆದುಹೋಯಿತು. ಮುಸ್ತಾಫನು ಹುಡುಗನನ್ನು ತನ್ನ ಅಂಗಡಿಗೆ ಕರೆದುಕೊಂಡು ಹೋಗಿ ಹೊಲಿಗೆಯ ಕೆಲಸವನ್ನು ಕಲಿಸಿಕೊಟ್ಟನು. ಆದರೆ ತಾನೇ ಏನು ? ತಂದೆಯ ಕಣ್ಣು ಮರೆಯಾದ ಕೂಡಲೆ ಅವನು ತಲೆ ತಪ್ಪಿಸಿಕೊಂಡು ಓಡಿಹೋಗುತ್ತಿದ್ದನು. ಅದಕ್ಕಾಗಿ ಮುಸ್ತಾಫನು ಮಗನನ್ನು ಆಗಾಗ್ಗೆ ಗದರಿಸಿಕೊಳ್ಳುತ್ತಿದ್ದನು. ಆದರೂ ಏನೂ ಪ್ರಯೋಜನವಿಲ್ಲದೆ

ಹೋಯಿತು. ಅವನ ಬುದ್ಧಿಯನ್ನು ತಿದ್ದುವ ದಕ್ಕೆ ಆಗಲೇ ಇಲ್ಲ. ಈ ಚಿಂತೆಯಿಂದಲೇ ಮುಸ್ತಾಫನು ಕೊರಗಿ, ರೋಗದಲ್ಲಿ ಬಿದ್ದು ನರಳಿ ಸತ್ತುಹೋದನು.

ಬಳಿಕ ಅಲ್ಲಾವುದೀನನ್ನು ಕೇಳುವವರೇ ಇರಲಿಲ್ಲ. ಅವನು ಯಾವ ಕೈಗಾರಿಕೆಯನ್ನು ಕಲಿಯಲಿಕ್ಕೂ ಮನಸ್ಸಿಲ್ಲದೆ, ಇಚ್ಛೆ ಬಂದಹಾಗೆ ಆಟವಾಡುತ್ತ ಕಾಲವನು ಕಳೆಯುತ್ತಿದ್ದನು. ಅವನಿಗೆ



ಹದಿನೈದು ವಯಸ್ಸಾಯಿತು. ಹೀಗಿರಲು ಒಂದು ದಿವಸ ಅವನು ತನ್ನ ಕೆಟ್ಟ ಜತೆಗಾರರೊಡನೆ ಬೀದಿಯಲ್ಲಿ ಆಡುತ್ತಿರಲು, ಆ ಮಾರ್ಗವಾಗಿ ಒಬ್ಬ ಪರದೇಶದವನು ಬಂದನು.

ಆ ವಿದೇಶಿ ಒಬ್ಬ ಮಂತ್ರವಾದಿ; ಅವನನ್ನು ಆಫ್ರಿಕಾ ದೇಶದ ಮಂತ್ರವಾದಿಯೆಂದು ಕರೆಯುತ್ತಿದ್ದರು. ಅವನು ಅಲ್ಲಾವುದೀನನ ಮುಖವನ್ನು ಚೆನ್ನಾಗಿ ಕುರಿತು ನೋಡಿ, ಆ ಹುಡುಗನು ತನ್ನ ಕೆಲಸಕ್ಕೆ ಸರಿಯಾದವನೆಂದು ಗೊತ್ತುಮಾಡಿ ಕೊಂಡನು. ಕೂಡಲೆ ಅವನ ಹೆಸರೇ ಮೊದಲಾದ ತನಗೆ ಬೇಕಾದ ಸಂಗತಿಗಳನ್ನು ತಿಳಿದುಕೊಂಡು, ಅವನ ಬಳಿಗೆ ಹೋಗಿ, ಕೈಹಿಡಿದುಕೊಂಡು ಅವನನ್ನು ಒಂದು ಕಡೆಗೆ ಕರೆದುಕೊಂಡು ಹೋಗಿ, ''ಮಗು ! ನೀನು ದರ್ಜಿ ಮುಸ್ತಾಫನ ಮಗನಲ್ಲವೆ ?'' ಎಂದು ಕೇಳಿದನು.

''ಅಹುದು ಸ್ವಾಮಿ, ನಾನು ಮುಸ್ತಾಫನ ಮಗನು, ನಮ್ಮ ತಂದೆ ಸತ್ತುಹೋಗಿ ಬಹಳ ದಿವಸವಾಯಿತು'' ಎಂದು ಅಲ್ಲಾವುದೀನನು ಉತ್ತರ ಕೊಟ್ಟನು.

ಆ ಮಾತನ್ನು ಕೇಳಿ ಮಂತ್ರವಾದಿಯು ಅಲ್ಲಾವುದೀನನ ಕೊರಲನ್ನು ಅಪ್ಪಿಕೊಂಡು ಮುದ್ದಿಸಿ, ಕಣ್ಣೀರು ಹಾಕುತ್ತ, ''ಅಪ್ಪಾ ! ನಾನು ನಿನಗೆ ಚಿಕ್ಕಪ್ಪನಾಗಬೇಕು. ನಿನ್ನ ತಂದೆ ನನಗೆ ಸ್ವಂತ ಅಣ್ಣ ನಾಗಬೇಕು. ನಿನ್ನನ್ನು ನೋಡುತ್ತಲೇ ನೀನು ಇಂಥವನೆಂದು ನನಗೆ ಗೊತ್ತಾಯಿತು. ನೀನು ನಮ್ಮಣ್ಣನ ಹಾಗೆಯೇ ಇದ್ದೀಯೆ'' ಎಂದು

ಹೇಳಿ, ಅವನ ಕೈಯಲ್ಲಿ ಒಂದು ಹಿಡಿ ವರಹವನ್ನಿಟ್ಟು , ''ನೀನು ಮನೆಗೆ ಹೋಗು, ನಾನು ನಾಳೆ ನಿಮ್ಮ ಮನೆಗೆ ಬರುತ್ತೇನೆಂದು ನಿಮ್ಮ ಅಮ್ಮನಿಗೆ ತಿಳಿಸು'' ಎಂದು ಹೇಳಿ ಕಳುಹಿಸಿದನು.

ಆ ವರಹಗಳನ್ನು ತೆಗೆದುಕೊಂಡು ಅಲ್ಲಾವುದೀನನು ಸಂತೋಷದಿಂದ ತಮ್ಮ ತಾಯಿಯ ಬಳಿಗೆ ಓಡಿಹೋಗಿ, ''ಅಮ್ಮಾ! ಅಮ್ಮಾ ! ನನಗೆ ಒಬ್ಬ ಚಿಕ್ಕಪ್ಪನಿದ್ದಾನೆಯೆ ?'' ಎಂದು ಕೇಳಿದನು. ''ಇಲ್ಲ, ಅಪ್ಪ ! ನಿನಗೆ ಚಿಕ್ಕಪ್ಪಂದಿರು ಯಾರೂ ಇಲ್ಲ'' ಎಂದು ಅವಳು ಹೇಳಿದಳು.

''ಇಲ್ಲ, ಅಮ್ಮ, ಈಗ ತಾನೆ ಒಬ್ಬನು ಬಂದಿದ್ದನು. ಅವನು ನನ್ನ ಚಿಕ್ಕಪ್ಪನಂತೆ. ನಮ್ಮ ಅಪ್ಪನಿಗೆ ಸ್ವಂತ ತಮ್ಮನಂತೆ. ನಮ್ಮಪ್ಪ ಸತ್ತುಹೋದನೆಂದು ಕೇಳಿದ ಕೂಡಲೆ ಅವನು ಕಣ್ಣು ನೀರು ಹಾಕಿ, ನನ್ನನ್ನು ಮುದ್ದಿಸಿ, ಈ ವರಹಗಳನ್ನು ಕೊಟ್ಟು, 'ನಾಳೆ ಬಂದು ನಿಮ್ಮಮ್ಮನನ್ನು ಕಾಣುತ್ತೇನೆ' ಎಂದು ಹೇಳಿದನು'' ಎಂದನು.

''ಇಲ್ಲ, ಮಗು! ಇಲ್ಲ. ನಿಮ್ಮ ತಂದೆಗೆ ಅಣ್ಣ ತಮ್ಮಂದಿರೂ ಇಲ್ಲ ನಿನಗೆ ದೊಡ್ಡಪ್ಪ ಚಿಕ್ಕಪ್ಪಂದಿರೂ ಇಲ್ಲ'' ಎಂದು ಅವಳು ಹೇಳಿದಳು.

ಮರುದಿವಸ ಅಲ್ಲಾವುದೀನನು ಇನ್ನೊಂದು ಬೀದಿಯಲ್ಲಿ ಆಡುತ್ತಿದ್ದನು. ಅಲ್ಲಿಗೆ ಮಂತ್ರವಾದಿ ಬಂದು ಹಿಂದಿನಂತೆ ಅವನನ್ನು ತಬ್ಬಿಕೊಂಡು ಮುದ್ದಿಟ್ಟು, ಕೈಯಲ್ಲಿ ಎರಡು ವರಹಗಳನ್ನಿಟ್ಟು, ''ಇದನ್ನು ತೆಗೆದುಕೊಂಡು ಹೋಗಿ ನಿಮ್ಮ ತಾಯಿಗೆ ಕೊಡು. ನಾನು

ಈ ದಿನ ರಾತ್ರಿ ಬಂದು ಆಕೆಯನ್ನು ಕಾಣುತ್ತೇನೆ. ಅಲ್ಲೆ ಊಟಕ್ಕೆ ಅಣಿಮಾಡಿರಹೇಳು. ಈಗ ನಿಮ್ಮ ಮನೆಯನ್ನು ಮಾತ್ರ ತೋರಿಸು'' ಎಂದನು.

ಅಲ್ಲಾವುದೀನನು ಅವನಿಗೆ ತಮ್ಮ ಮನೆಯನ್ನು ತೋರಿಸಿ, ಆ ವರಹಗಳನ್ನು ತೆಗೆದುಕೊಂಡುಹೋಗಿ ತನ್ನ ತಾಯಿಗೆ ಕೊಟ್ಟನು. ಅವಳು ರಾತ್ರಿಯ ಅಡಿಗೆಗೆ ಬೇಕಾದ ಸರಕುಗಳನ್ನು ತರಿಸಿ ಅಣಿಮಾಡಿಕೊಳ್ಳುತ್ತಿದ್ದಳು.

ರಾತ್ರಿಯಾದ ಕೂಡಲೆ ಮಂತ್ರವಾದಿಯು ಒಳ್ಳೆಯ ಮದ್ಯವನ್ನೂ ನಾನಾ ವಿಧವಾದ ಹಣ್ಣು ಹಂಪಲುಗಳನ್ನೂ ತೆಗೆದುಕೊಂಡು ಬಂದು ಮನೆಯ ಬಾಗಿಲನ್ನು ತಟ್ಟಿದನು. ಅಲ್ಲಾವುದೀನನು ಕದವನ್ನು ತೆರೆದನು. ಮಂತ್ರವಾದಿಯು ಒಳಗೆ ಹೋಗಿ ತಾನು ತಂದ ಹಣ್ಣುಹಂಪಲವೇ ಮುಂತಾದವನ್ನು ಅಲ್ಲಾವುದೀನನ ಕೈಗೆ ಕೊಟ್ಟು, ಅವನ ತಾಯಿಗೆ ನಮಸ್ಕಾರ ಮಾಡಿದನು. ಆ ಬಳಿಕ ತಮ್ಮ ಅಣ್ಣನಾದ ಮುಸ್ತಾಫನು ಕುಳಿತು ಆಸೆಯುಂಟಾಯಿತು. ಆದುದರಿಂದ ಇಲ್ಲಿಗೆ ಬಂದೆನು. ಇಲ್ಲಿ ಕೊಳ್ಳುತ್ತಿದ್ದ ಕಾಲುಮಣೆಯನ್ನು ತೋರಿಸಬೇಕೆಂದು ಕೇಳಲು, ಅವಳು ಅವನನ್ನು ಕರೆದುಕೊಂಡು ಹೋಗಿ ಕಾಲುಮಣೆಯನ್ನು ತೋರಿಸಿದಳು. ಕೂಡಲೆ ಮಂತ್ರವಾದಿಯು ಅದರ ಮುಂದೆ ಅಡ್ಡಬಿದ್ದು, ಕಣ್ಣೀರು ಬಿಡುತ್ತ ಗಟ್ಟಿಯಾಗಿ ಅತ್ತು, ''ಅಯ್ಯೊ, ಅಣ್ಣಾ!

ನಾನು ಎಂಥ ಅದೃಷ್ಟಹೀನನು! ಕಡೆಗಾಲದಲ್ಲಿ ಬಂದು ನಿನ್ನನ್ನು ಒಂದು ಸಲವಾದರೂ ಆಲಿಂಗಿಸಿಕೊಳ್ಳದೆ ಹೋದೆನಲ್ಲಾ'' ಎಂದು ಗೋಳಾಡಿದನು.

ಸ್ವಲ್ಪಹೊತ್ತಿಗೆ ಹಾಗೆಯೆ ದುಃಖವನ್ನು ಸಮಾಧಾನಮಾಡಿ ಕೊಂಡು, ಬಂದು ಮಣೆಯ ಮೇಲೆ ಕುಳಿತುಕೊಂಡು, ಅತ್ತಿಗೆಯ ಸಂಗಡ ಹೀಗೆ ಹೇಳಿದನು: ''ಅತ್ತಿಗೆ, ನೀವು ನಮ್ಮಣ್ಣನನ್ನು ಮದುವೆಯಾದಂದಿನಿಂದ ಇದುವರೆಗೂ ನನ್ನನ್ನು ಕಾಣದೆ ಇದ್ದುದು ಬಹಳ ಆಶ್ಚರ್ಯವಾಗಿ ತೋರಬಹುದು. ಹಾಗೆ ಕಾಣದೆ ಇದ್ದುದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳಿ. ನಾನು ಈ ದೇಶವನ್ನು ಬಿಟ್ಟು ನಾಲ್ವತ್ತು ವರ್ಷವಾಯಿತು. ನಾನು ಇಂಡಿಯಾ, ಪರ್ಷಿಯಾ, ಅರೇಬಿಯಾ, ಸಿರಿಯಾ, ಈಜಿಪ್ಟ್ ಮೊದಲಾದ ಪ್ರದೇಶಗಳಲ್ಲಿ ಸುತ್ತುತ್ತಿದ್ದು , ಕೊನೆಗೆ ಆಫ್ರಿಕಾಖಂಡಕ್ಕೆ ಹೋಗಿ, ಅಲ್ಲಿ ಬಹುಕಾಲ ವಾಸಮಾಡಿಕೊಂಡಿದ್ದೆನು. ಕಡೆಗೆ ನಮ್ಮ ದೇಶವನ್ನು ತಿರುಗಿ ನೋಡಬೇಕೆಂದು ಎಲ್ಲರಂತೆ ನನಗೂ ನಮ್ಮಣ್ಣನು ಸತ್ತುಹೋದ ಸಮಾಚಾರವನ್ನು ಕೇಳಿದೆನು. ನನಗೆ ತಾಳಲಾರದಷ್ಟು ದುಃಖವಾಯಿತು.''

ಈ ಮಾತುಗಳನ್ನು ಕೇಳಿ ಆಕೆ ತನ್ನ ಗಂಡನನ್ನು ನೆನೆದು ಕೊಂಡು ಕಣ್ಣೀರನ್ನು ಸುರಿಸುತ್ತಿದ್ದಳು. ಅದನ್ನು ಕಂಡು ಮಂತ್ರ ವಾದಿಯು ಅಲ್ಲಾವುದೀನನ ಕಡೆ ತಿರುಗಿಕೊಂಡು, ''ಅಪ್ಪ ! ಈಗ ನೀನು ಹೇಗೆ ಜೀವನಮಾಡಿಕೊಂಡಿದ್ದೀಯೆ?'' ಎಂದು ಕೇಳಿದನು. ಅದಕ್ಕೆ

ಅಲ್ಲಾವುದೀನನು ಯಾವ ಉತ್ತರವನ್ನೂ ಕೊಡದೆ ತಲೆಬಾಗಿಸಿ ಕೊಂಡು ಸುಮ್ಮನೆ ಕುಳಿತಿರಲು, ಆಗ ಅವನ ತಾಯಿ ಹೀಗೆಂದು ಹೇಳಿದಳು: "ಅಲ್ಲಾವುದೀನನು ಸೋಮಾರಿ ಹುಡುಗ. ಇವನ ತಂದೆಯವರು ಜೀವಂತರಾಗಿದ್ದಾಗ ಇವನಿಗೆ ನಮ್ಮ ಜಾತಿಯ ಜೀವಿಕೆಯನ್ನು ಕಲಿಸಿಕೊಡಬೇಕೆಂದು ಎಷ್ಟೋ ಸಾಹಸಗಳನ್ನು ಮಾಡಿದರು. ಏನೂ ಪ್ರಯೋಜನವಿಲ್ಲದೆ ಹೋಯಿತು. ಆ ದುಃಖದಲ್ಲೇ ಅವರು ಸ್ವರ್ಗಸ್ಥರಾದರು. ಅಂದಿನಿಂದ ಈಚೆಗೆ ನಾನೂ ಇವನಿಗೆ ಎಷ್ಟೋ ಸಲ ಬುದ್ಧಿ ಹೇಳಿದೆನು. ಅದನ್ನು ಇವನು ಕಿವಿಯ ಮೇಲೆ ಹಾಕಿಕೊಳ್ಳದೆ ಎಂದಿನಂತೆ ಬೀದಿಯಲ್ಲಿ ಆಟವಾಡುತ್ತ ಕಾಲ ಕಳೆಯುತ್ತಿದ್ದಾನೆ. ನಾನು ಆವುದೋ ಒಂದು ದಿವಸ ಇವನನ್ನು ಮನೆಯಿಂದ ಅಟ್ಟಿಬಿಡಬೇಕೆಂದು ಗೊತ್ತುಮಾಡಿಕೊಂಡಿದ್ದೇನೆ. ಆಮೇಲೆ ಕೂಲಿಯೊ ನಾಲಿಯೊ ಮಾಡಿಕೊಂಡು ತನ್ನ ಹೊಟ್ಟೆಯನ್ನು ಹೊರೆದುಕೊಳ್ಳಲಿ." ಎಂದು ಕೊಂಡಳು. ಆದುದರಿಂದ ತನ್ನ ಮಗನಿಗೆ ಅವನು ಮಾಡುವ ಉಪಕಾರಕ್ಕಾಗಿ ಆವನನ್ನು ಶ್ಲಾಘಿಸಿ, ಅಲ್ಲಾವುದೀನನ್ನು ಕುರಿತು, "ನೀನು ನಿಮ್ಮ ಚಿಕ್ಕಪ್ಪನವರ ಪ್ರೇಮಕ್ಕೆ ಹೇಳುತ್ತ ದುಃಖವು ಉಕ್ಕಿಬರಲು, ಸಹಿಸಲಾರದೆ ಗಟ್ಟಿಯಾಗಿ ಅಳಲಾರಂಭಿಸಿದಳು. ಆಗ ಮಂತ್ರವಾದಿಯು ಅಲ್ಲಾವುದೀನನ್ನು ಕುರಿತು, "ಅಲ್ಲಾವುದೀನ್, ಇದೇನೋ ಚೆನ್ನಾಗಿಲ್ಲ . ಇನ್ನು ನೀನು ಜೀವನವನ್ನು ಸಂಪಾದಿಸಿಕೊಳ್ಳುವ ಯೋಚನೆ ಮಾಡಬೇಕು. ಆವುದಾದರೂ ಒಂದು ಕೈಗಾರಿಕೆಯನ್ನು ಕಲಿತುಕೊ. ಅದಕ್ಕೆ ನಿನಗೆ

ಮನಸ್ಸಿಲ್ಲದಿದ್ದರೆ ಹೇಳು. ನಾನು ಒಂದು ಅಂಗಡಿಯನ್ನು ಮಾಡಿ ಅದರಲ್ಲಿ ಬೇಕಾದ ಹಾಗೆ ಜವಳಿಯನ್ನು ತಂದು ತುಂಬುತ್ತೇನೆ. ಅವುಗಳನ್ನು ಲಾಭಕ್ಕೆ ಮಾರು. ಬಂದ ಹಣಕ್ಕೆ ಹೊಸ ಸರಕುಗಳನ್ನು ತರಿಸಿಕೊಂಡು ವ್ಯಾಪಾರಮಾಡಿ ಗೌರವವಾಗಿ ಬದುಕು'' ಎಂದನು.

ಕೆಲಸಗಳ್ಳನಾದ ಅಲ್ಲಾವುದೀನನ ಮನಸ್ಸಿಗೆ ಈ ಏರ್ಪಾಡು ಒಪ್ಪಿತು. ಅವನು ''ನನಗೆ ವ್ಯಾಪಾರಕ್ಕಿಂತಲೂ ಇಷ್ಟವಾದುದು ಬೇರೆ ಯಾವುದೂ ಇಲ್ಲ'' ಎಂದು ಹೇಳಿದನು. ''ಒಳ್ಳೆಯದು; ಹಾಗಾದರೆ ಹಾಗೆಯೇ ಮಾಡು. ನಾಳೆ ನಿನ್ನನ್ನು ಕರೆದುಕೊಂಡು ಹೋಗಿ ದೊಡ್ಡದೊಡ್ಡ ವರ್ತಕರು ಹಾಕಿಕೊಳ್ಳುವ ಭಾರಿಯ ಉಡುಪುಗಳನ್ನು ಕೊಡಿಸಿಕೊಡುತ್ತೇನೆ. ಆಮೇಲೆ ನಾವು ಒಂದು ಅಂಗಡಿಯನ್ನು ಇಡೋಣ'' ಎಂದು ಮಂತ್ರವಾದಿ ಹೇಳಿದನು.

ಆ ಮಾತುಗಳನ್ನು ಕೇಳಿದ ಕೂಡಲೆ ಅಲ್ಲಾವುದೀನನ ಮನಸ್ಸಿನ ಸಂಶಯವು ಪರಿಹಾರವಾಯಿತು. ಅವನ ತಾಯಿಯು ಆ ಮಂತ್ರವಾದಿ ನಿಜವಾಗಿ ತನ್ನ ಮೈದುನನೆಂದು ತಿಳಿದು ಪಾತ್ರನಾಗುವಂತೆ ಬುದ್ಧಿಯನ್ನು ಕಲಿತುಕೊ'' ಎಂದು ಅವರಿಗೆ ಎಲೆಹಾಕಿ ಬಡಿಸಿದಳು. ಊಟವಾದ ಮೇಲೆ ಮಂತ್ರವಾದಿ ತನ್ನ ಬಿಡಾರಕ್ಕೆ ಹೊರಟುಹೋದನು.

ಬಳಿಕ ಮರುದಿನ ಬೆಳಗ್ಗೆ ಅವನು, ಕಳೆದ ರಾತ್ರಿ ತಾನು ಮಾತುಕೊಟ್ಟಿದ್ದಂತೆ, ಅಲ್ಲಾವುದೀನನ ಮನೆಗೆ ಹೋಗಿ, ಅವನನ್ನು

ಒಂದು ದೊಡ್ಡ ಜವಳಿಯ ಅಂಗಡಿಗೆ ಕರೆದುಕೊಂಡು ಹೋದನು. ಅಲ್ಲಿ ಎಲ್ಲಾ ವಿಧವಾದ ಉಡುಪುಗಳೂ ಸೊಗಸಾದ ಒಲ್ಲಿಯೇ ಮೊದಲಾದ ಎಲ್ಲಾ ತರದ ಬಟ್ಟೆಗಳೂ ಕ್ರಯಕ್ಕೆ ಸಿದ್ಧವಾಗಿದ್ದವು. ಮಂತ್ರವಾದಿಯು ಅವುಗಳನ್ನು ತೋರಿಸಿ, "ಇವುಗಳಲ್ಲಿ ನಿನಗೆ ಬೇಕಾದವುಗಳನ್ನು ಆರಿಸಿಕೊ" ಎಂದು ಹೇಳಿದನು.

ಅಲ್ಲಾವುದೀನನು ತನಗೆ ಬೇಕಾದ ಉಡುಪುಗಳನ್ನೂ ಒಲ್ಲಿಗಳನ್ನೂ ಆರಿಸಿ, ಸೊಗಸಾಗಿ ಅಲಂಕರಿಸಿಕೊಂಡು, ಚಿಕ್ಕಪ್ಪನಿಗೆ ನಮಸ್ಕರಿಸಿದನು. ಆಗ ಮಂತ್ರವಾದಿಯು ಅವನನ್ನು ನೋಡಿ, "ನೀನೂ ಕ್ಷಿಪ್ರದಲ್ಲಿಯೇ ವರ್ತಕನಾಗುವೆಯಾದುದರಿಂದ ಈ ಅಂಗಡಿಗಳಿಗೆ ಆಗಾಗ ಹೋಗುತ ಬರುತ ಇದ್ದು ಇವುಗಳ ವಿದ್ಯಮಾನವನ್ನು ತಿಳಿದುಕೊಂಡರೆ ನಿನಗೇ ಒಳ್ಳೆಯದು" ಎಂದು ಹೇಳಿ, ಅವನನ್ನು ದೊಡ್ಡ ದೊಡ್ಡ ಮಶೀತಿಗಳಿಗೂ, ಭಾರಿಯ ವರ್ತಕರೂ ಪ್ರಯಾಣಿಕರೂ ಇರುವ ದೊಡ್ಡ ದೊಡ್ಡ ಚತ್ರಗಳಿಗೂ ಕರೆದುಕೊಂಡುಹೋಗಿ ತೋರಿಸಿ, ಅಲ್ಲಿಂದ ತನ್ನ ಬಿಡಾರಕ್ಕೆ ಕರೆದುಕೊಂಡುಹೋದನು.

ಅಲ್ಲಿಯೇ ರಾತ್ರಿಯ ವರೆಗೂ ನಿಲಿಸಿಕೊಂಡಿದ್ದು, ಬಳಿಕ ರಾತ್ರಿಯಲ್ಲಿ ಅವನೊಬ್ಬನನ್ನೇ ಬೀದಿಯಲ್ಲಿ ಕಳುಹಿಸುವುದಕ್ಕೆ ಒಡಂಬಡದೆ ತಾನೇ ಜತೆಯಾಗಿ ಕರೆದುಕೊಂಡುಹೋಗಿ, ಅವನ ತಾಯಿಯ ವಶಕ್ಕೆ ಒಪ್ಪಿಸಿಬಿಟ್ಟು ಬಂದನು.

ಮಾರನೆಯ ದಿನ ಬೆಳಗ್ಗೆ ಹೊತ್ತಿನಂತೆ ಅಲ್ಲಾವುದ್ದೀನನ ಮನೆಗೆ ಹೋಗಿ ಕೂಗಿದನು. ಅಲ್ಲಾವುದೀನನು ಎದ್ದು ಬಂದನು. ಬರುತ್ತಲೂ, ''ಈವೊತ್ತು ಹಳ್ಳಿಯ ಕಡೆ ಹೋಗಿ ಬರೋಣ. ನಾಳೆ ಅಂಗಡಿಯನ್ನು ಕೊಂಡುಕೊಳ್ಳೋಣ'' ಎಂದನು. ಅಲ್ಲಾವುದೀನನು 'ಹಾಗೆಯೆ ಆಗಲಿ' ಎಂದು ಒಪ್ಪಿಕೊಂಡನು. ಬಳಿಕ ಇಬ್ಬರೂ ಹೊರಟು, ಕೋಟೆಯ ಹೊರಬಾಗಿಲಿಂದ ಊರ ಹೊರಕ್ಕೆ ಹೊರಟು, ದಿವ್ಯವಾದ ಅರಮನೆಗಳಲ್ಲಿಯೂ ಸೊಗಸಾದ ತೋಟಗಳಲ್ಲಿಯೂ ಸ್ವಲ್ಪ ಹೊತ್ತು ವಿನೋದವಾಗಿ ತಿರುಗಾಡುತ್ತಿದ್ದರು. ಬಳಿಕ ಮಂತ್ರವಾದಿಯು ಅವನನ್ನು ಕರೆದುಕೊಂಡು ತೋಟದಿಂದ ತೋಟಕ್ಕೆ ಹೋಗುತ, ಊರ ಹೊರಗಿನ ಬಯಲನ್ನು ಕಳೆದು ಮೆಲ್ಲಮೆಲ್ಲಗೆ ದೂರದಲ್ಲಿರುವ ಬೆಟ್ಟಗಳ ಬಳಿಗೆ ಹೋಗಿ ಸೇರಿದನು.

ಅಲ್ಲಿ ಎರಡು ಗುಡ್ಡಗಳಿದ್ದುವು. ಅವುಗಳ ನಡುವೆ ಒಂದು ಚಿಕ್ಕ ಬಯಲಿತ್ತು. ಅಲ್ಲಿಯೇ ಮಂತ್ರವಾದಿಗೆ ಕೆಲಸವಿದ್ದಿತು. ಅದಕ್ಕಾಗಿಯೇ ಅವನು ಅರೇಬಿಯಾದಿಂದ ಚೀನಾವಿಗೆ ಬಂದಿದ್ದನು. ಆದುದರಿಂದ ಆ ಬಯಲಿಗೆ ಬಂದಾಗ, ಅವನು ಅಲ್ಲಾವುದೀನನ್ನು ನೋಡಿ, ''ನಾವು ಇನ್ನು ಮುಂದಕ್ಕೆ ಹೋಗಬೇಕಾದ ಪ್ರಕೃತವಿಲ್ಲ. ಇಲ್ಲಿಯೇ ನಿಲ್ಲೋಣ. ಇಲ್ಲಿ ಒಂದದ್ಭುತ ವ್ಯಾಪಾರವನ್ನು ತೋರಿಸುತ್ತೇನೆ. ನಾನು ಚಕ್ಕುಮುಕ್ಕಿಯನ್ನು ಹೊಡೆದು ಬೆಂಕಿ ಮಾಡುವುದರೊಳಗಾಗಿ ನೀನು ಸ್ವಲ್ಪ ತರಗನ್ನೂ ಪುಳ್ಳಿಯನ್ನೂ ಕೂಡಿಹಾಕು'' ಎಂದನು. ಅಲ್ಲಿ ತರಗೂ

ಪುಳ್ಳಿಯೂ ಬೇಕಾದ ಹಾಗೆ ಬಿದ್ದಿದ್ದವು. ಅಲ್ಲಾವುದೀನನು ಅವುಗಳನ್ನು ಗುಡಿಸಿ ಒಂದು ಕಡೆ ದೊಡ್ಡ ಗುಪ್ಪೆ ಮಾಡಿದನು. ಬಳಿಕ ಮಂತ್ರವಾದಿಯು ಅದಕ್ಕೆ ಬೆಂಕಿ ಹೊತ್ತಿಸಿದನು. ಅದು ಹೊತ್ತಿಕೊಂಡು ಉರಿಯಲಾರಂಭಿಸಿತು. ಹಾಗೆ ಹೊತ್ತಿಕೊಂಡು ಧಗಧಗನೆ ಉರಿಯುತ್ತಿದ್ದಾಗ ಅವನು ಅದರಲ್ಲಿ ಸ್ವಲ್ಪ ಧೂಪವನ್ನು ಹಾಕಿದನು.

ಧೂಪವನ್ನು ಹಾಕಿದನೋ ಇಲ್ಲವೋ ಎನ್ನುವಷ್ಟರಲ್ಲೇ, ಅವನ ಮುಂದೆ ಭೂಮಿ ಇಬ್ಭಾಗವಾಗಿ ಸೀಳಿ ಬಿರಿಕುಬಿಟ್ಟಿತು. ಆ ಬಿರಿಕಿನಲ್ಲಿ ಹಿತ್ತಳೆಯ ಬಳೆ ಹಾಕಿದ್ದ ಒಂದು ಕಲ್ಲುಮುಚ್ಚಳವು ಕಂಡಿತು.



ಇಷ್ಟನ್ನೂ ಕಂಡು ಅಲ್ಲಾವುದೀನನು ಗಾಬರಿಬಿದ್ದು ಓಡಿ ಹೋಗುವದರಲ್ಲಿದ್ದನು. ಅಷ್ಟರಲ್ಲೆ ಮಂತ್ರವಾದಿಯು ಅವನನ್ನು ಬಟ್ಟೆ ಹಿಡಿದು ನಿಲ್ಲಿಸಿ ನೆಲದ ಮೇಲೆ ಮುದುರಿಕೊಂಡು ಬೀಳುವಂತೆ ಕಪಾಲಶುದ್ಧಿ ಮಾಡಿದನು. ಆ ಪೆಟ್ಟಿಗೆ ಅಲ್ಲಾವುದೀನನು ನೆಲಕ್ಕೆ ಬಿದ್ದು, ಗಡಗಡನೆ ನಡುಗುತ್ತ, ಮೆಲ್ಲಗೆ ಕೈಯೂರಿ ಕೊಂಡು ಎದ್ದು ಅಳುತ್ತ, ತಾನು ಮಾಡಿದ ತಪ್ಪೇನೆಂದು ಕೇಳಿದನು.

"ನೀನು ಹೆದರಿಕೊಳ್ಳಬೇಡ. ನಿನ್ನನ್ನು ನಾನು ಇನ್ನೇನೂ ಕೇಳುವುದಿಲ್ಲ. ನಾನು ಹೇಳಿದ ಹಾಗೆ ಮಾತ್ರ ನಡೆ. ಇಗೋ ನೋಡು. ಈ ಕಲ್ಲಿನ ಕೆಳಗೆ ಒಂದು ನಿಕ್ಷಿ ಇದೆ. ಅದು ನಿನಗೆ ದೊರಕುತ್ತದೆ. ನೀನು ಪ್ರಪಂಚದಲ್ಲಿರುವ ರಾಜ್ಯಾಕ್ಷಿರಾಜರೆಲ್ಲರಿಗಿಂತಲೂ ಹಣಗಾರನಾಗುತ್ತೀಯೆ. ನೀನು ಹೊರತು ಇನ್ನಾರಿಗೂ ಈ ಕಲ್ಲನ್ನು ಎತ್ತಲೂ ಆಗುವುದಿಲ್ಲ; ಈ ಗವಿಯೊಳಗೆ ಹೋಗಲೂ ಆಗುವುದಿಲ್ಲ. ಆದಕಾರಣ ನಾನು ಹೇಳಿದ ಹಾಗೆ ಮಾಡು. ಹಾಗೆ ಮಾಡುವುದರಿಂದ ನಮ್ಮಿಬ್ಬರಿಗೂ ಬಹಳ ಪ್ರಯೋಜನ ಉಂಟು. ಬಳೆಯನ್ನು ಹಿಡಿದುಕೊಂಡು ಕಲ್ಲನ್ನು ಎತ್ತು" ಎಂದು ಹೇಳಿದನು.

"ಅಯ್ಯೊ ! ಅಯ್ಯೊ ! ಇದನ್ನು ನಾನು ಎತ್ತಬಲ್ಲೆನೆ ? ನೀನೂ ಸ್ವಲ್ಪ ಕೈಹಾಕಿ ಸಾಹಾಯ್ಯ ಮಾಡಬೇಕು" ಎಂದು ಅಲ್ಲಾವುದೀನನು ಕೇಳಿಕೊಂಡನು.

"ನನ್ನ ಒತ್ತಾಸೆಯೇನೂ ಬೇಡ. ನಾನು ಕೈಯಿಟ್ಟರೆ ನಮಗೆ ಏನೂ ಪ್ರಯೋಜನವಾಗದೆ ಹೋಗುತ್ತದೆ. ಬಳೆಯನ್ನು ಹಿಡಿದು ಜಗ್ಗಿಸಿ ಎತ್ತು; ಸರಾಗವಾಗಿ ಬಂದುಬಿಡುತ್ತದೆ" ಎಂದು ಮಂತ್ರವಾದಿಯು ಹೇಳಿದನು. ಅದೇ ರೀತಿಯಾಗಿ ಅಲ್ಲಾವುದೀನನು ಕಲ್ಲನ್ನು ಹಿಡಿದೆತ್ತಿ, ಒಂದು ಕಡೆಗೆ ಇರಿಸಿದನು. ಆಗ ಅದರ ಕೆಳಗೆ ಒಂದು ಹಂತವು ಕಾಣಿಸಿತು.

"ಈ ಹಂತದಿಂದ ಇಳಿದುಹೋಗು. ಆ ಬಾಗಿಲನ್ನು ತೆರೆ ; ಒಳಗೆ ಹೋಗು; ಅಲ್ಲಿ ಒಂದು ಅರಮನೆಯಿದೆ. ಅದರಲ್ಲಿ ಮೂರು ದೊಡ್ಡ ದೊಡ್ಡ ಕೊಟಡಿಗಳಿವೆ. ಆ ಕೊಟಡಿಗಳಲ್ಲಿ ದೊಡ್ಡ ಹಿತ್ತಾಳೆ ಗಂಗಾಳಗಳಲ್ಲಿ ಚಿನ್ನದ, ಬೆಳ್ಳಿಯ ನಾಣ್ಯಗಳು ತುಂಬಿಟ್ಟಿವೆ. ಅವುಗಳನ್ನು ಎಲ್ಲಿಯಾದರೂ ಮುಟ್ಟೀಯೆ. ಅವುಗಳ ಗೋಜಿಗೆ ಹೋಗಬೇಡ. ಮೊದಲು ಕೊಟಡಿಯೊಳಗೆ ಹೋಗುವುದಕ್ಕೆ ಮುಂಚೆ ನಿನ್ನ ಬಟ್ಟೆಯನ್ನೆಲ್ಲಾ ಚೆನ್ನಾಗಿ ಎತ್ತಿ ಕಟ್ಟಿಕೊ. ಆಮೇಲೆ ಒಳಗೆ ಹೋಗು. ಎಲ್ಲಿಯೂ ನಿಲ್ಲದೆ ಎರಡನೆಯ ಕೊಟಡಿಯ ಮಾರ್ಗವಾಗಿ ಮೂರನೆಯ ಕೊಟಡಿಗೆ ಹೋಗು. ಮುಖ್ಯವಾಗಿ ಇದು ಮಾತ್ರ ನೆನಪಿನಲ್ಲಿರಲಿ: ಮರೆತೂ ಗೋಡೆಗಳನ್ನು ಸೋಕಬೇಡ; ಎಚ್ಚರದಿಂದಿರು. ಏನಾದರೂ ಸೋಕಿದೆಯೋ ಆಗಲೇ ಸತ್ತುಹೋಗುತೀಯೆ. ಮೂರನೆಯ ಕೊಟಡಿಯ ಕೊನೆಯಲ್ಲಿ ಒಂದು ಬಾಗಿಲಿದೆ. ಅದು ತೋಟದ ಬಾಗಿಲು. ಅದನ್ನು ತೆರೆದು ತೋಟಕ್ಕೆ ಹೋಗು. ಅಲ್ಲಿ ಮರಗಳಲ್ಲೆಲ್ಲಾ ಹಣ್ಣುಗಳು ಕುಲುಕುತ್ತಿವೆ.

ಅಲ್ಲಿ ನಿಲ್ಲದೆ ನೆಟ್ಟಗೆ ಇದಿರುಕಡೆಗೆ ಹೋಗು. ಆ ಕಡೆಯ ಗೋಡೆಯಲ್ಲಿ ಒಂದು ದೀಪದ ಗೂಡಿದೆ. ಅದರಲ್ಲಿ ಒಂದು ದೀಪವು ಉರಿಯುತ್ತಿದೆ. ದೀಪವನ್ನು ನಂದಿಸಿ ಅದನ್ನು ಇಲ್ಲಿಗೆ ತೆಗೆದುಕೊಂಡು ಬಾ''- ಎಂದು ಹೇಳಿ, ತನ್ನ ಬೆರಳಿಂದ ಒಂದು ಉಂಗುರವನ್ನು ತೆಗೆದು ಅಲ್ಲಾವುದೀನನ ಬೆರಳಿಗಿಟ್ಟು, ''ಇದು ಒಂದು ಯಂತ್ರವು; ಇದರ ಮಹಿಮೆಯಿಂದ ನಿನಗೆ ಆವ ಭಯವೂ ಉಂಟಾಗುವದಿಲ್ಲ. ನೀನು ನನ್ನ ಮಾತು ಕೇಳುವ ವರೆಗೂ ಇದು ನಿನಗೆ ವಶವಾಗಿರುತ್ತದೆ. ನೀನು ಧೈರ್ಯವಾಗಿ ಹೋಗು. ನಾನು ಹೇಳಿದ ಹಾಗೆ ನಾವಿಬ್ಬರೂ ಎಂದೆಂದಿಗೂ ಐಶ್ವರ್ಯವಂತರಾಗಿರಬಹುದು'' ಎಂದನು.

''ಹಾಗೆಯೇ ಆಗಲಿ'' ಎಂದು ಅಲ್ಲಾವುದೀನನು ಹಂತವನ್ನು ಇಳಿದುಹೋಗಿ ನೋಡಿದನು. ಮಂತ್ರವಾದಿ ಹೇಳಿದ ಹಾಗೆಯೇ ಅಲ್ಲಿ ಒಂದು ಅರಮನೆ ಇದ್ದಿತು. ಅಲ್ಲಿ ಅವನು ತನ್ನ ಬಟ್ಟೆಯನ್ನು ಚೆನ್ನಾಗಿ ಮುದುರಿ ಹಿಡಿದುಕೊಂಡು ಒಳಹೊಕ್ಕು, ತೋಟವನ್ನು ಪ್ರವೇಶಿಸಿ, ಎಲ್ಲಿಯೂ ನಿಲ್ಲದೆ ಗೋಡೆಯ ಬಳಿಗೆ ಹೋಗಿ, ಗೂಡಿನಲ್ಲಿದ್ದ ದೀಪವನ್ನು ತೆಗೆದುಕೊಂಡನು. ಆದರೆ, ಅಲ್ಲಿಂದ ಹಿಂತಿರುಗಿ ಬರುವಾಗ ಮಾತ್ರ, ತೋಟದಲ್ಲಿದ್ದ ಮರಗಳ ಸೊಗಸನ್ನು ನೋಡುತ್ತ ಸ್ವಲ್ಪ ಹೊತ್ತು ನಿಂತುಕೊಂಡನು. ಅಲ್ಲಿ ಒಂದೊಂದು ಮರದಲ್ಲಿ ಒಂದೊಂದು ಬಣ್ಣದ ಹಣ್ಣುಗಳಿದ್ದುವು. ಕೆಲವುಗಳಲ್ಲಿ ಹಣ್ಣುಗಳು ಬೆಳ್ಳಿಯ ಹಾಗೆ ಬೆಳ್ಳಗೂ, ಬೇರೆ ಕೆಲವುಗಳಲ್ಲಿ ಸುಟಿಕದ

ಹಾಗೆ ನಿರ್ಮಲವಾಗಿ ಪಾರದರ್ಶಕಗಳಾಗಿಯೂ, ಇನ್ನು ಕೆಲವುಗಳಲ್ಲಿ ಎಳಗೆಂಪಾಗಿಯೂ, ಮತ್ತೆ ಕೆಲವುಗಳಲ್ಲಿ ಅಚ್ಚಗೆಂಪಾಗಿಯೂ, ಬೇರೆ ಕೆಲವುಗಳಲ್ಲಿ ಹಸಿರು ನೀಲಿ ಕುಸುಂಬೆ ಹಳದಿ ಬಣ್ಣವುಳ್ಳವುಗಳಾಗಿಯೂ ಇದ್ದುವು. ಹೆಚ್ಚು ಮಾತೇನು ? ಅಲ್ಲಿ ಎಲ್ಲಾ ಬಣ್ಣದ ಹಣ್ಣುಗಳೂ ಕುಲುಕುತ್ತಿದ್ದುವು.

ಹಾಗೆ ಬೆಳ್ಳಗಿದ್ದುವೇ ಮುತ್ತುಗಳು; ನಿರ್ಮಲವಾಗಿ ಪಾರ ದರ್ಶಕಗಳಾಗಿದ್ದುವೇ ವಜ್ರಗಳು; ಅಚ್ಚಗೆಂಪಾಗಿದ್ದುವೇ ಕೆಂಪು ಗಳು, ಎಳಗೆಂಪಾಗಿದ್ದುವೇ ಹವಳಗಳು; ಹಸಿರಾಗಿದ್ದುವೇ ಪಚ್ಚೆಗಳು; ನೀಲಿಯಾಗಿದ್ದುವೇ ನೀಲಗಳು. ಉಳಿದುವೇ ಗೋಮೇಧಿಕಗಳೂ ಪುಷ್ಯರಾಗಗಳೂ. ಆ ಮೇರೆ ತುಂಬಿದ್ದ ಅನರ್ಘವಾದ ಹಣ್ಣುಗಳ ಬೆಲೆಯನ್ನು ಅಲ್ಲಾವುದೀನನು ಕಾಣನು. ಅವುಗಳಿಗೆ ಪ್ರತಿಯಾಗಿ ಅತ್ತಿಯ ಹಣ್ಣುಗಳಾಗಲಿ ದ್ರಾಕ್ಷಿಯ ಹಣ್ಣುಗಳಾಗಲಿ ಸಿಕ್ಕಿದ್ದರೆ ಅವುಗಳನ್ನೇ ಕೊಯ್ದುಕೊಳ್ಳುತ್ತಿದ್ದನು. ಆದರೆ ಅವನ ಅದೃಷ್ಟಕ್ಕೆ ಅವುಗಳಲ್ಲಿ ಯಾವುದೂ ಅಲ್ಲಿರಲಿಲ್ಲ. ಆದುದರಿಂದ ಅಲ್ಲಿದ್ದುದರಲ್ಲಿ ಒಂದೊಂದು ಜಾತಿಯಲ್ಲಿಯೂ ಅಷ್ಟಷ್ಟು ಹಣ್ಣು ಗಳನ್ನು ಕೊಯ್ದುಕೊಂಡನು. ಒಂದು ದೊಡ್ಡ ಹೊರೆಯಾಯಿತು. ಅದನ್ನೂ ಹೊತ್ತುಕೊಂಡು, ದೀಪವನ್ನೂ ತೆಗೆದುಕೊಂಡು, ಮೊದಲಿನಂತೆಯೇ ಮೂರು ದೊಡ್ಡ ಕೊಟಡಿಗಳನ್ನೂ ದಾಟಿ, ಗುಹೆಯ ಬಾಗಿಲಿಗೆ ಬಂದನು. ಆಫ್ರಿಕಾ ಮಂತ್ರವಾದಿಯು ಅವನ ಮಾರ್ಗವನ್ನೇ

ಇದಿರುನೋಡುತ್ತ ಅಲ್ಲಿಯೇ ಕಾದುಕೊಂಡಿದ್ದನು. ಅವನನ್ನು ಕಂಡಕೂಡಲೆ ಅಲ್ಲಾವುದೀನನು "ಚಿಕ್ಕಪ್ಪ! ನನ್ನ ಕೈಹಿಡಿದುಕೊಂಡು ಸ್ವಲ್ಪ ಮೇಲಕ್ಕೆ ಎಳೆದುಕೊ" ಎಂದು ಹೇಳಿದನು.

"ಮೊದಲು ದೀಪವನ್ನು ನನ್ನ ಕೈಗೆ ತಾ, ಆಮೇಲೆ ಸರಾಗ ವಾಗುವುದು" ಎಂದು ಮಂತ್ರವಾದಿ ಹೇಳಿದನು. ಅಲ್ಲಾವುದೀನನು ಕೊಡುವುದಿಲ್ಲವೆಂದನು. ಮಂತ್ರವಾದಿಗೆ ಬಹಳ ಕೋಪ ಬಂದಿತು. ಕೂಡಲೆ ಅವನು ಬೆಂಕಿಗೆ ಯಾವುದೋ ಒಂದು ಬಗೆಯ ಧೂಪವನ್ನು ಹಾಕಿ, ಏನೋ ಮಂತ್ರವನ್ನು ಹೇಳಿದನು. ಒಡನೆ ಮಗ್ಗುಲಲ್ಲಿದ್ದ ಕಲ್ಲು ಉರುಳಿ ಎಂದಿನಂತೆಯೇ ಗವಿಯ ಬಾಗಿಲನ್ನು ಮುಚ್ಚಿಕೊಂಡುಬಿಟ್ಟಿತು; ಅಲ್ಲಾವುದೀನನು ಒಳಗೆ ಸಿಕ್ಕಿಹೋದನು.

ಹೀಗೆ ಆಗಿಹೋದಮೇಲೆ ಮಂತ್ರವಾದಿ ತನ್ನ ಚಿಕ್ಕಪ್ಪನಲ್ಲ ವೆಂದೂ ತನ್ನನ್ನು ಮೋಸಮಾಡುವುದಕ್ಕೆ ಬಂದವನೆಂದೂ ಅಲ್ಲಾವುದೀನನಿಗೆ ಗೊತ್ತಾಯಿತು. ನಿಜವಾದ ಸಂಗತಿಯೂ ಹಾಗೆಯೇ ಇದ್ದಿತು. ಆ ಮಂತ್ರವಾದಿ ಮಂತ್ರದ ಪುಸ್ತಕಗಳನ್ನು ಓದಿ ಆ ಅದ್ಭುತವಾದ ದೀಪದ ಗುಟ್ಟನ್ನೂ ಅದರ ಪ್ರಯೋಜನ ಗಳನ್ನೂ ತಿಳಿದುಕೊಂಡಿದ್ದನು. ಅದನ್ನು ಪಡೆದುಕೊಂಡವನು ರಾಜ್ಯಾಕ್ಷಿ ರಾಜರಿಗಿಂತ ಧನಿ ಕನಾಗುವನೆಂಬುದೂ ಅವನಿಗೆ ಗೊತ್ತಿದ್ದಿತು. ಅವನು ಚೀನಾದೇಶಕ್ಕೆ ಬಂದುದೂ ಅದನ್ನು ಸಂಪಾದಿಸಿ ಕೊಳ್ಳುವುದಕ್ಕಾಗಿಯೇ. ಆದರೂ ಆ ದೀಪವನ್ನು ತಾನೇ ತೆಗೆದು



ಕೊಳ್ಳದೆ ಮತ್ತೊಬ್ಬರ ಕೈಯಿಂದಲೇ ತೆಗೆಯಿಸಿ ಕೊಳ್ಳಬೇಕಾಗಿದ್ದಿತು. ಇಲ್ಲದಿದ್ದರೆ ಅದು ಅವನಿಗೆ ಸಿದ್ಧಿಸುತ್ತಿರಲಿಲ್ಲ. ಅದಕ್ಕಾಗಿಯೇ ಅವನು ಅಲ್ಲಾವುದೀನನನ್ನು ತನ್ನ ಕೈಕೆಳಗೆ ಇಟ್ಟುಕೊಂಡನು. ಆಗ ಅಲ್ಲಾವುದೀನನು ದೀಪವನ್ನು ಕೊಡದೆ ತನ್ನ ಕೆಲಸವು ಕೈಗೂಡದೆ ಹೋಗಲು, ಅವನು ಆಫ್ರಿಕಾವಿಗೆ ಪಯಣಮಾಡಿ ಹೊರಟು ಹೋದನು.

ಅಲ್ಲಾವುದೀನನು ಗುಹೆಯೊಳಗೆ ಸಿಕ್ಕಿಕೊಂಡು, ''ನಾನು ದೀಪವನ್ನು ಕೊಡುತ್ತೇನೆ. ನನ್ನನ್ನು ಮಾತ್ರ ಮೇಲಕ್ಕೆ ಕರೆದುಕೊ. ನಿನ್ನ ಕಾಲಿಗೆ ಬೀಳುತ್ತೇನೆ'' ಎಂದು ಕೂಗಿಕೊಳ್ಳುತ್ತಿದ್ದನು. ಪ್ರಯೋಜನವೇನು? ಅವನ ಮಾತನ್ನು ಕೇಳುವವರಾರು? ಹಾಗೆ ಅಲ್ಲಿ ನಿಷ್ಫಲವಾಗಿ ಸ್ವಲ್ಪಹೊತ್ತು ಅತ್ತು, ಆನಂತರ ಕೆಳಗಿಳಿದು ಹೋಗಿ, ಅಲ್ಲಿ ಇನ್ನೂ ಗಟ್ಟಿಯಾಗಿ ಅಳತೊಡಗಿದನು.

ಹೀಗೆ ಬಹಳ ಹೊತ್ತು ಅತ್ತು, ಕೊನೆಗೆ, ''ದೀನರಕ್ಷಕನಾದವನು ಭಗವಂತನೊಬ್ಬನೇ''-ಎಂದು ಯೋಚಿಸಿ, ಭಗವಂತನಿಗೆ ಮೊರೆಯಿಡುವುದಕ್ಕಾಗಿ ತನ್ನ ಎರಡು ಕೈಗಳನ್ನೂ ಜೋಡಿಸಿದನು. ಆ ಕಾಲದಲ್ಲಿ, ಅವನ ಬೆರಳಲ್ಲಿ ಮಂತ್ರವಾದಿಯಿಟ್ಟಿದ್ದ ಉಂಗುರವು ಸ್ವಲ್ಪ ಅಲುಗಿತು. ಒಡನೆಯೇ ಕರಾಳಾಕೃತಿಯಾದ ಒಂದು ಭೂತವು ಎದ್ದುನಿಂತು, ''ನಿನಗೆ ಏನು ಬೇಕು? ನಿನ್ನ ಮಾತನ್ನು ತಲೆಯ ಮೇಲಿಟ್ಟುಕೊಂಡು ನಡೆಯಿಸುವೆನು. ನಾನೂ ನನ್ನಂಥವರು ಇನ್ನೂ ನೂರಾರು ಮಂದಿಗಳೂ ಈ ಉಂಗುರಕ್ಕೆ ದಾಸರಾಗಿದ್ದೇವೆ. ಇದು ಆರ ಕೈಯಲ್ಲಿದೆಯೋ ಅವರಿಗೆ ನಾವು ಕಿಂಕರರಾಗಿರುತ್ತೇವೆ'' ಎಂದು ಗರ್ಜಿಸಿತು.

ಆ ಘೋರಾಕಾರವನ್ನು ಬೇರೆ ಯಾವಾಗಲಾದರೂ ನೋಡಿದ್ದರೆ, ಅಲ್ಲಾವುದೀನನು ಬೆದರಿಕೊಂಡು ಓಡಿಹೋಗುತ್ತಿದ್ದನು. ಈಗ ಅವನ ಕಷ್ಟವೇ ಅವನಿಗೆ ಧೈರ್ಯವನ್ನು ಉಂಟು ಮಾಡಿತು.

ಆದುದರಿಂದ ಅವನು ಆ ಭೂತವನ್ನು ನೋಡಿ, ''ನೀನು ಆರಾದರೂ ಆಗು. ನನ್ನನ್ನು ಮಾತ್ರ ಹೊರಗೆ ಕರೆದು ಕೊಂಡುಹೋಗಿ ಬಿಡು''-ಎಂದನು. ಹಾಗೆ ಹೇಳಿದನೊ ಇಲ್ಲವೊ, ಆಗಲೆ ಭೂತವು ಅವನನ್ನು ಹೊರಗೆ ತಂದು ಇಳಿಸಿತು. ಅಲ್ಲಿ ನೋಡಿದರೆ ಗವಿಯ ಗುರುತಾಗಲಿ ಅಗೆದ ಗಾಯವಾಗಲಿ ಇರಲಿಲ್ಲ. ಅಲ್ಲಾವುದೀನನು ಅದನ್ನು ನೋಡಿ ಆಶ್ಚರ್ಯಪಡುತ್ತ, ತನ್ನನ್ನು ಬಿಡುಗಡೆ ಮಾಡಿಸಿದುದಕ್ಕಾಗಿ ಭಗವಂತನನ್ನು ಹೊಗಳುತ್ತ, ಬೇಗಬೇಗ ನಡೆದು, ತನ್ನ ಮನೆಗೆ ಹೋಗಿ ಸೇರಿ, ಸಂಗತಿಯನ್ನೆಲ್ಲಾ ತನ್ನ ತಾಯಿಗೆ ತಿಳಿಸಿದನು. ಆ ಬಳಿಕ ಮಲಗಿಕೊಂಡು ಮರುದಿನ ಬೆಳಗ್ಗೆ ಬಹಳ ಹೊತ್ತಿನವರೆಗೂ ಚೆನ್ನಾಗಿ ನಿದ್ದೆಹೋದನು. ಆಮೇಲೆ ಹಾಸಿಗೆಯನ್ನು ಬಿಟ್ಟು ಎದ್ದು ಕೈಕಾಲು ಮುಖವನ್ನು ತೊಳೆದುಕೊಂಡು, ''ಅಮ್ಮಾ, ನನಗೆ ಮೊದಲು ಏನಾದರೂ ತಿನ್ನುವುದಕ್ಕೆ ಕೊಡು; ನನಗೆ ಹಸಿವಾಗುತ್ತಿದೆ'' ಎಂದು ಕೇಳಿದನು. ಅದಕ್ಕೆ ಅವಳು, ''ಅಯ್ಯೊ, ಮಗು ! ನಾನು ಏನು ಕೊಡಲಿ ? ನನ್ನಲ್ಲಿ ಒಂದು ಚೂರು ರೊಟ್ಟಿ ಕೂಡ ಇಲ್ಲವಲ್ಲಾ'' ಎಂದಳು. ''ಹಾಗಾದರೆ ನೆನ್ನೆ ತಂದ ದೀಪವನ್ನು ಕೊಡು. ನಾನು ಹೋಗಿ ಅದನ್ನು ಮಾರಿಬಿಟ್ಟು ಬಂದ ದುಡ್ಡಿಗೆ ಬೇಕಾದ ಪದಾರ್ಥಗಳನ್ನು ತರುತ್ತೇನೆ. ಅವು ಈಗಿನ ಫಲಾಹಾರಕ್ಕೂ ಮಧ್ಯಾಹ್ನದ ಊಟಕ್ಕೂ ಸಾಕಾಗುತ್ತವೆ. ಒಂದು ವೇಳೆ ರಾತ್ರಿಗೆ ಮಿಕ್ಕರೂ ಮಿಗಬಹುದು'' ಎಂದು ಹೇಳಿದನು.

ಹಾಗೆ ಹೇಳಲು ಅವಳು ದೀಪವನ್ನು ತೆಗೆದುಕೊಂಡು ಬಂದು, ''ಇಗೋ, ನಿನ್ನ ದೀಪವನ್ನು ಹಿಡಿ'' ಎಂದು ಕೊಡುವುದಕ್ಕೆ ಹೋದಳು. ಅದು ಕೊಳೆಯಾಗಿತ್ತು; ಆದುದರಿಂದ ಬೆಳಗಿ ಕೊಡಬೇಕೆಂದು ಯೋಚಿಸಿ ಅದನ್ನು ತಿಕ್ಕಿದಳು. ತಿಕ್ಕುವುದಕ್ಕೆ ಮೊದಲು ಮಾಡಿದ ಒಡನೆಯೇ ಒಂದು ಭಯಂಕರವಾದ ಭೂತವು ಅವಳಿದಿರಿಗೆ ಬಂದು ನಿಂತುಕೊಂಡು, ''ನಿನಗೆ ಏನು ಬೇಕು? ನಾನು ನಿನ್ನ ದಾಸನಾಗಿ ನಿನ್ನ ಮಾತುಗಳನ್ನು ನಡೆಸುವೆನು. ಈ ದೀಪವು ಆರಾರ ಕೈಯಲ್ಲಿದೆಯೋ ಅವರಿಗೆಲ್ಲಾ ನಾನು ದಾಸನಾಗಿದ್ದೇನೆ''- ಎಂದು ಗುಡುಗಿನಂತೆ ಅರ್ಭಟಿಸಿ ಹೇಳಿತು.

ಆ ಭಯಂಕರವಾದ ಆಕೃತಿಯನ್ನು ನೋಡಿದ ಕೂಡಲೆ ಅವಳು ಗಡಗಡನೆ ನಡುಗಿ ಮೈಮರೆತಳು. ಅಲ್ಲಾವುದೀನನು ಧೈರ್ಯಗುಂದದೆ ಫಕ್ಕನೆ ಅವಳ ಕೈಯಿಂದ ದೀಪವನ್ನು ತೆಗೆದು ಕೊಂಡು ಭೂತವನ್ನು ನೋಡಿ, ''ನನಗೆ ಹಸಿವಾಗುತ್ತಿದೆ; ತಿನ್ನುವುದಕ್ಕೆ ಏನಾದರೂ ತಂದುಕೊಡು'' ಎಂದನು.

ಕೂಡಲೆ ಭೂತವು ಕಣ್ಮರೆಯಾಗಿ ಹೋಗಿ ಒಂದು ಕ್ಷಣ ಮಾತ್ರದಲ್ಲಿ ಒಂದು ದೊಡ್ಡ ಬೆಳ್ಳಿಯ ತಾಂಬಾಳದಲ್ಲಿ ಹನ್ನೆರಡು ಬೆಳ್ಳಿಯ ಬಟ್ಟಲು ತುಂಬ ಮೃಷ್ಟಾನ್ನವನ್ನೂ ಇನ್ನೆರಡು ಬೆಳ್ಳಿಯ ತಟ್ಟೆಗಳಲ್ಲಿ ರೊಟ್ಟಿಗಳನ್ನೂ ತಂದಿಕ್ಕಿತು. ಇಷ್ಟೂ ಅಲ್ಲಾವುದೀನನ ತಾಯಿ ಎಚ್ಚತ್ತುಕೊಳ್ಳುವುದರಲ್ಲಿಯೇ ನಡೆಯಿತು. ಆದುದರಿಂದ

ಅವಳು ಮೂರ್ಛೆ ತಿಳಿದು ಕಣ್ಣು ತೆರೆದಾಗ ಅಷ್ಟೊಂದು ಪದಾರ್ಥಗಳನ್ನೂ ನೋಡಿ ಆಶ್ಚರ್ಯಪಟ್ಟಳು. ಕೂಡಲೇ ತಾಯಿಯೂ ಮಗನೂ ಫಲಾಹಾರಕ್ಕೆ ಕುಳಿತುಕೊಂಡರು. ಫಲಾಹಾರಕ್ಕೆ ಕುಳಿತವರು ಮಧ್ಯಾಹ್ನದ ಊಟದ ಹೊತ್ತಿನ ವರೆಗೂ ಅದೇ ಕೆಲಸದಲ್ಲೇ ಇದ್ದು, ತರುವಾಯ ಎರಡೂಟವನ್ನು ಒಂದೇ ಬಾರಿ ಮಾಡಬೇಕೆಂದು ಆಲೋಚಿಸಿ, ಹಾಗೆಯೇ ಮಧ್ಯಾಹ್ನದ



ಭೋಜನವನ್ನೂ ಪೂರೈಸಿದರು. ಇಷ್ಟಾದರೂ ಆ ಪದಾರ್ಥಗಳು ಮುಗಿಯಲಿಲ್ಲ; ಆ ರಾತ್ರಿಯ ಭೋಜನಕ್ಕೂ ಮರುದಿವಸ ಎರಡು ವೇಳೆಯ ಊಟಕ್ಕೂ ಸಾಕಾಗುವಷ್ಟು ಮಿಕ್ಕಿದ್ದುವು.

ಮೂರನೆಯ ದಿವಸ ರಾತ್ರಿಯೂ ಅವುಗಳನ್ನೇ ಊಟ ಮಾಡಿದರು. ಆಗ ಅವುಗಳೆಲ್ಲವು ಮುಗಿದುಹೋದುವು. ಬಳಿಕ ನಾಳೆ ಏನು ಮಾಡಬೇಕೆಂದು ಅಲ್ಲಾವುದೀನನು ಬಹಳ ಹೊತ್ತು ಚಿಂತಿಸಿ, ಕಡೆಗೆ ಒಂದು ಬೆಳ್ಳಿಯ ಬಟ್ಟಲನ್ನು ಮಾರಿ, ಬಂದ ದುಡ್ಡಿಗೆ ಸರಕುಗಳನ್ನು ತರಬೇಕೆಂದು ಗೊತ್ತುಮಾಡಿಕೊಂಡನು. ಅದೇ ರೀತಿಯಾಗಿ ಮಾರನೆಯ ದಿನ ಬೆಳಗ್ಗೆ ಒಂದು ಬಟ್ಟಲನ್ನು ತೆಗೆದು ತನ್ನ ಅಂಗಿಯಲ್ಲಿ ಮುಚ್ಚಿಕೊಂಡು ವರ್ತಕರ ಕಟ್ಟೆಗೆ ಹೊರಟನು. ಮಾರ್ಗದಲ್ಲಿ ಒಬ್ಬ ಯಹೂದ್ಯರ ಜಾತಿಯ ವರ್ತಕನು ಸಿಕ್ಕಿದನು. ಅವನಿಗೆ ತನ್ನ ಬೆಳ್ಳಿಯ ಬಟ್ಟಲನ್ನು ತೋರಿಸಿ, ''ಸೆಟ್ಟರೇ, ಇದನ್ನು ಕೊಂಡುಕೊಳ್ಳುತ್ತೀರಾ'' ಎಂದು ಕೇಳಿದನು. ಆ ತಂತ್ರಗಾರನಾದ ಸೆಟ್ಟಿ ಅದನ್ನು ಚೆನ್ನಾಗಿ ನೋಡಿ, ಅದು ಚೊಕ್ಕಬೆಳ್ಳಿಯೆಂದು ತಿಳಿದಮೇಲೆ ಅದನ್ನು ಇಟ್ಟು ಕೊಂಡು, ತನ್ನ ಚೀಲದಿಂದ ಒಂದು ವರಹವನ್ನು ತೆಗೆದು ಅಲ್ಲಾವುದೀನನ ಕೈಯಲ್ಲಿಟ್ಟನು. ವರ್ತಕನು ಕೊಟ್ಟ ಹಣವು ಬಟ್ಟಲಿನ ನಿಜವಾದ ಕ್ರಯದ ಅರುವತ್ತರಲ್ಲಿ ಒಂದು ಪಾಲಾಗಿದ್ದಿತು. ಆದರೂ ಆ ಹಣಕ್ಕೇ ಅಲ್ಲಾವುದೀನನು ಹಿಗ್ಗಿಹೋಗಿ ಅದನ್ನು ತೆಗೆದುಕೊಂಡು ಮನೆಗೆ ಓಡುತ್ತ, ದಾರಿಯಲ್ಲಿ ಒಂದು ರೊಟ್ಟಿಯಂಗಡಿಯಲ್ಲಿ ಕೆಲವು ರೊಟ್ಟಿಗಳನ್ನು ಕೊಂಡುಕೊಂಡು, ತನ್ನ

ವರಹವನ್ನು ಮುರಿಸಿ ರೊಟ್ಟಿಯ ಕ್ರಯವನ್ನು ಕೊಟ್ಟು, ನಿಂತ ಚಿಲ್ಲರೆಯನ್ನು ತಮ್ಮ ತಾಯಿಯ ಕೈಯಲ್ಲಿ ಇರಿಸಿದನು. ಅವಳು ದಿನಸಿಯ ಅಂಗಡಿಗೆ ಹೋಗಿ ಬೇಕಾದ ಸರಕುಗಳನ್ನು ತಂದಳು. ಅವು ಅವರಿಗೆ ಕೆಲವು ದಿನದ ಕಾಲಕ್ಷೇಪಕ್ಕೆ ಸಾಕಾದುವು. ಅವೂ ಮುಗಿದುಹೋದ ಮೇಲೆ ಪುನಃ ಇನ್ನೊಂದು ಬಟ್ಟಲನ್ನು ಮಾರಿದರು. ಹೀಗೆಯೇ ಆವಶ್ಯಕ ಬಿದ್ದಾಗಲೆಲ್ಲಾ ಒಂದೊಂದು ಬಟ್ಟಲ ಮೇರೆಗೆ ಹನ್ನೆರಡು ಬಟ್ಟಲುಗಳನ್ನೂ ಆ ಸೆಟ್ಟಿಗೆ ಮಾರಿಬಿಟ್ಟರು. ಕೊನೆಗೆ ದೊಡ್ಡ ತಾಂಬಾಳವೊಂದುಳಿಯಿತು. ಅದನ್ನೂ ಮಾರಿದರು. ಅದು ಬಟ್ಟಲಿಗಿಂತ ಹತ್ತರಷ್ಟು ಹೆಚ್ಚು ತೂಕವಾಗಿದ್ದುದರಿಂದ ಅವನು ಅದಕ್ಕೆ ಹತ್ತು ವರಹಗಳನ್ನು ಕೊಟ್ಟನು.

ಆ ಹಣವೂ ವೆಚ್ಚವಾಗಿಹೋಯಿತು. ಅಲ್ಲಾವುದೀನನು ಪುನಃ ತನ್ನ ದೀಪವನ್ನು ನೆನಪಿಗೆ ತಂದುಕೊಂಡು, ಕೂಡಲೆ ಅದನ್ನು ಕೈಗೆ ತೆಗೆದುಕೊಂಡು ಹಿಂದೆ ತಮ್ಮ ತಾಯಿ ಮರಳಿಂದ ತಿಕ್ಕಿದ್ದ ಕಡೆಯಲ್ಲಿಯೇ ತಾನೂ ತಿಕ್ಕಿದನು. ಎಂದಿನಂತೆಯೇ ಭೂತವು ಇದಿರಿಗೆ ಕಾಣಿಸಿಕೊಂಡು, ''ನಿನಗೆ ಏನು ಬೇಕು ? ನಿನ್ನ ದಾಸನಾಗಿ ನಿನ್ನ ಮಾತನ್ನು ನಡೆಸುವೆನು''- ಎಂದಿತು.

''ನನಗೆ ಹಸಿವಾಗುತ್ತದೆ. ತಿನ್ನುವುದಕ್ಕೆ ಏನಾದರೂ ತಂದುಕೊಡು''- ಎಂದು ಹೇಳಿದನು.

ಕೂಡಲೆ ಭೂತವು ಕಣ್ಣುಮರೆಯಾಗಿ ಒಂದು ಕ್ಷಣದಲ್ಲಿಯೇ ಹಿಂದಿನಂತೆ ಬೆಳ್ಳಿಯ ತಾಂಬಾಳದಲ್ಲಿ ಊಟದ ಪದಾರ್ಥಗಳನ್ನೆಲಾ ತಂದಿಟ್ಟು ಅದೃಶ್ಯವಾಯಿತು.

ಆ ಪದಾರ್ಥಗಳೆಲ್ಲಾ ತೀರಿಹೋದ ಕೂಡಲೆ ಅಲ್ಲಾವುದೀನು ಮತ್ತೆ ಒಂದು ಬೆಳ್ಳಿಯ ಬಟ್ಟಲನ್ನು ತೆಗೆದು ಕೊಂಡು ಯಥಾಪ್ರಕಾರ ಸೆಟ್ಟಿಯ ಬಳಿಗೆ ಹೋಗುತ್ತಿದ್ದನು. ಅದನ್ನು ಕಂಡು ಆ ಮಾರ್ಗದಲ್ಲಿದ್ದ ಒಬ್ಬ ಅಕ್ಕಸಾಲೆ ಅಲ್ಲಾವುದೀನನ್ನು ಕೂಗಿ, "ಎಲೋ ಅಣ್ಣಾ ! ಇಲ್ಲಿ ಬಾ. ನೀನು ಆಗಾಗ ಈ ಯಹೂದ್ಯನ ಬಳಿಗೆ ಬರುತ್ತಿದ್ದೀಯೆ. ಅದನ್ನು ನೋಡಿದರೆ ನೀನು ಇವನಿಗೆ ಏನೋ ಮಾರುವ ಹಾಗೆ ಕಾಣುತ್ತದೆ. ಇವನು ಮೋಸಗಾರನೆಂಬುದು ನಿನಗೆ ಗೊತ್ತಿಲ್ಲವೊ ಏನೊ! ನೀನು ಮಾರುವ ಒಡವೆಯನ್ನು ನನಗೆ ಕೊಡು. ನಾನು ಅದಕ್ಕೆ ಸರಿಯಾದ ಬೆಲೆಯನ್ನು ಕೊಡುತ್ತೇನೆ. ಇಲ್ಲದಿದ್ದರೆ, ಒಳ್ಳೆ ಪ್ರಾಮಾಣಿಕರಾದ ವರ್ತಕರ ಹತ್ತಿರ ಕಳುಹಿಸಿಕೊಡುತ್ತೇನೆ. ಅವರಲ್ಲಿಗೆ ಹೋಗು. ಅವರು ಎಂದಿಗೂ ಮೋಸ ಮಾಡುವುದಿಲ್ಲ"- ಎಂದನು.

ಆ ಮಾತನ್ನು ಕೇಳಿ ಅಲ್ಲಾವುದೀನನು ಅದಕ್ಕೆ ಒಡಂಬಟ್ಟು ಗಂಟುಬಿಚ್ಚಿ ಬೆಳ್ಳಿಯ ಬಟ್ಟಲನ್ನು ಅಕ್ಕಸಾಲೆಯ ಕೈಗೆ ಕೊಟ್ಟನು. ಅಕ್ಕಸಾಲೆಯು ಅದನ್ನು ತ್ರಾಸಿನಲ್ಲಿಟ್ಟು ತೂಕಮಾಡಿ ನೋಡಿ ಅರುವತ್ತು ವರಹ ಬೆಲೆ ಬಾಳುವುದೆಂದು ಹೇಳಿ ಹಣವನ್ನು ಆಗಲೇ

ಸಂದಾಯಮಾಡಿದನು. ಅಲ್ಲಾವುದೀನನು ಈ ನ್ಯಾಯವಾದ ವ್ಯಾಪಾರಕ್ಕೆ ಮೆಚ್ಚಿ, ಅಕ್ಕಸಾಲೆಯನ್ನು ಕೊಂಡಾಡಿ, ಅಂದಿನ ಮೊದಲು ಬೇರೆ ಕಡೆ ಮಾರುವುದಕ್ಕೆ ಹೋಗುವುದನ್ನೇ ಬಿಟ್ಟುಬಿಟ್ಟನು.

ಅಲ್ಲಾವುದೀನನೂ ಅವನ ತಾಯಿಯೂ ಆ ದೀಪದಿಂದ ತಮಗೆ ಬೇಕಾದಾಗ ಬೇಕಾದಹಾಗೆ ಹಣವನ್ನು ಸಂಪಾದಿಸಿಕೊಳ್ಳ ಬಹುದಾಗಿದ್ದರೂ ದುಂದುಮಾಡದೆ ಎಂದಿನಂತೆ ಮಿತವಾಗಿರುತ್ತಿದ್ದರು. ಅಲ್ಲಾವುದೀನನು ಬೇಸರಿಕೆಯಾದಾಗ ಭಾರಿ ವರ್ತಕರ ಕೋಟಿಗಳಿಗೂ ರತ್ನಪಡಿ ವ್ಯಾಪಾರದ ಕಟ್ಟೆಗಳಿಗೂ ಆಗಾಗ್ಗೆ ಹೋಗಿ, ಅಲ್ಲಿ ವರ್ತಕರೊಂದಿಗೆ ಮಾತುಕತೆಗಳನ್ನು ಆಡಿಕೊಂಡು ಬರುತ್ತಿದ್ದನು.

ಅದರಿಂದ ಅವನಿಗೆ ಸ್ವಲ್ಪ ತಿಳಿವಳಿಕೆ ಉಂಟಾಗಿ ಅವರಂತೆ ತಾನೂ ಒಳ್ಳೆಯ ಸ್ಥಿತಿಯಲ್ಲಿ ಬದುಕಿ ಬಾಳಬೇಕೆಂಬ ಆಸೆ ಹುಟ್ಟಿತು. ಆ ವೇಳೆಗೆ ಅವನಿಗೆ ರತ್ನಪಡಿ ನಗಗಳ ಬೆಲೆ ಗೊತ್ತಾಗಿದ್ದುದರಿಂದ ತಾನು ದೀಪದೊಂದಿಗೆ ನೆಲಮಾಳಿಗೆಯಿಂದ ತಂದಿದ್ದ ಹಣ್ಣುಗಳೆಲ್ಲಾ ನಿಜವಾಗಿಯೂ ಅನರ್ಘ್ಯವಾದ ರತ್ನಗಳೆಂದು ಗೊತ್ತಾಯಿತು. ಆದರೂ ಅವನು ಆ ಗುಟ್ಟನ್ನು ಆರಿಗೂ ತಿಳಿಯಪಡಿಸದೆ ಇದ್ದನು.

ಹೀಗಿರುತ್ತಿರಲು ಒಂದು ದಿವಸ ಅವನು ಬೀದಿಯಲ್ಲಿ ಹೋಗುತ್ತಿರುವಾಗ, ''ರಾಜಕುಮಾರ್ತೆಯವರು ಈ ದಿನ ಸ್ನಾನಕ್ಕೆ

ಹೋಗಿಬರುತ್ತಾರೆ. ಅಂಗಡಿಗಳನ್ನೆಲ್ಲಾ ಮುಚ್ಚಿಬಿಡಬೇಕು. ಎಲ್ಲರೂ ಕದಗಳನ್ನು ಹಾಕಿಕೊಂಡು ಮನೆಯೊಳಗೇ ಇರಬೇಕು''-ಎಂದು ಡಂಗುರವನ್ನು ಹಾಕುತ್ತಿದ್ದರು.

ಅದನ್ನು ಕೇಳಿ, ಹೇಗಾದರೂ ಮಾಡಿ ರಾಜಪುತ್ರಿಯನ್ನು ನೋಡಬೇಕೆಂದು ಅವನಿಗೆ ಆಸೆಯುಂಟಾಯಿತು. ಆದಕಾರಣ, ಅವನು ಅವಳ ಸವಾರಿ ಹೊರಡುವುದಕ್ಕೆ ಮುಂಚೆಯೆ ಬಂದು, ಬಚ್ಚಲುಮನೆಯ ಬಾಗಿಲ ಹಿಂದೆ ನಿಂತು ಆಕೆಯ ಮುಖವನ್ನು ನೋಡಬೇಕೆಂದು ಕಾದಿದ್ದನು.

ಬಳಿಕ ಸ್ವಲ್ಪ ಹೊತ್ತಿಗೆ ಆಕೆ ನೂರಾರು ಮಂದಿ ಸಖಿಯರೊಡನೆ ಆ ಬಳಿಗೆ ಬಂದಳು. ಅಲ್ಲಿಗೆ ಬಂದ ಕೂಡಲೆ ಮುಖದ ಮುಸುಕನ್ನು ತೆಗೆದುಬಿಟ್ಟಳು. ಇದರಿಂದ ಅಲ್ಲಾವುದೀನನು ಅವಳ ಮುಖವನ್ನು ಚೆನ್ನಾಗಿ ನೋಡಲಿಕ್ಕೆ ಅನುಕೂಲಿಸಿತು.

ಆ ರಾಜಪುತ್ರಿ ಬಹುಸುಂದರಿಯೆಂದು ಪ್ರಖ್ಯಾತಳಾಗಿದ್ದಳು. ಅವಳ ವಿಶಾಲವಾದ ನೇತ್ರಗಳು ಚಂಚಲವಾಗಿ ತಳತಳಿಸುತ್ತಿದ್ದುವು. ಅವಳ ನಗು ಮೋಹನ ಕರವಾಗಿದ್ದಿತು. ಆದುದರಿಂದ ನೋಡಿದ ಕೂಡಲೆ ಅಲ್ಲಾವುದೀನನು ಅವಳ ಸೌಂದರ್ಯಕ್ಕೆ ಬೆರಗಾಗಿಹೋದನು. ಹಾಗೆ ವಿಸ್ಮಿತವಾಗಿ ಮೋಹಿತನಾದುದರಲ್ಲಿ ಆಶ್ಚರ್ಯವೇನು? ಆ ರೂಪಕ್ಕೆ ಮೋಹಿಸದವರೂ ಉಂಟೆ ?



ರಾಜಪುತ್ರಿ ಬಚ್ಚಲುಮನೆಗೆ ಹೋದಳು. ಬಳಿಕ ಅಲ್ಲಾವುದೀನನು ತಾನು ಅವಿತುಕೊಂಡಿದ್ದ ಸ್ಥಳದಿಂದ ಹೊರಟು ತನ್ನ ಮನೆಗೆ ಹೋಗಿ ಸೇರಿಕೊಂಡನು. ರಾಜಪುತ್ರಿಯನ್ನು ಕಂಡ ಗಳಿಗೆಯಿಂದ ಅಲ್ಲಾವುದೀನನ ಮನಸ್ಸು ಅವಳಲ್ಲಿ ನಟ್ಟು ಹೋಯಿತು. ಅವನು ಎಂದಿನಂತಿರದೆ ಚಿಂತಾಕ್ರಾಂತನಾದನು. ಅದನ್ನು ನೋಡಿ, ಅವನ ತಾಯಿ "ಅಲ್ಲಾವುದೀನ್! ನೀನು ಏಕೆ ಹೇಗೋ ಇದ್ದೀಯೆ ನಿನಗೆ ಮೈ ಚೆನ್ನಾಗಿದೆಯೋ ಇಲ್ಲವೋ?" ಎಂದು ಕೇಳಿದಳು. ಅದಕ್ಕೆ ಅವನು ಆ ದಿನ ನಡೆದ ಸಂಗತಿಯನ್ನೆಲ್ಲಾ ಅವಳೊಂದಿಗೆ ವಿಸ್ತಾರವಾಗಿ ಹೇಳಿ, "ನನಗೆ ರಾಜಪುತ್ರಿಯನ್ನು ಮದುವೆಯಾಗಬೇಕೆಂದು ಅಭಿಲಾಷೆ ಯುಂಟಾಗಿದೆ. ಅವಳನ್ನು ನನಗೆ ಮದುವೆ ಮಾಡಿಕೊಡುವ ಹಾಗೆ ಸುಲ್ತಾನನನ್ನು ಕೇಳಿಕೊಳ್ಳಬೇಕೆಂದು ನಿಶ್ಚಯಮಾಡಿ ಕೊಂಡಿದ್ದೇನೆ" -ಎಂದನು.

ಅದನ್ನೆಲ್ಲಾ ಕೇಳಿ ಅವನ ತಾಯಿಗೆ ಬಹಳ ನಗು ಬಂದಿತು. ಮೆಲ್ಲಗೆ ಅದನ್ನು ತಡೆದುಕೊಂಡು ಕೊನೆಯವರೆಗೂ ಕೇಳಿದಳು. ಕಡೆಗೆ ಅವನು ಅರಸುಮಗಳನ್ನು ಮದುವೆಮಾಡಿಕೊಡುವಂತೆ ಸುಲ್ತಾನನನ್ನು ಕೇಳಬೇಕೆಂದಾಗ, ತಡೆಯಲಾರದೆ ಗೊಳ್ಳೆಂದು ಗಟ್ಟಿಯಾಗಿ ನಕ್ಕು, "ನಿನಗೆ ಎಲ್ಲೋ ಹುಚ್ಚು ಹಿಡಿದಿದೆ" ಎಂದು ಹೇಳಿದಳು.

‘‘ಇಲ್ಲ; ಅಮ್ಮ! ನೀನು ಹಾಗೆ ಹೇಳಬೇಡ. ನನಗೇನೂ ಹುಚ್ಚುಗಿಚ್ಚು ಹಿಡಿದಿಲ್ಲ. ನನ್ನ ಬುದ್ಧಿ ನೆಟ್ಟಗೆ ಇದೆ. ಅವಳನ್ನು ನನಗೆ ಮದುವೆ ಮಾಡಿಕೊಡುವಂತೆ ಸುಲ್ತಾನನನ್ನು ಕೇಳುತ್ತೇನೆ. ನನ್ನ ಇಷ್ಟಾರ್ಥವು ಕೈಸೇರುವುದೆಂಬ ಭರವಸೆಯೂ ಇದೆ. ನೀನು ನಮ್ಮ ದೀಪದ ದಾಸರನ್ನೂ ಉಂಗುರದ ದಾಸರನ್ನೂ ಮರೆತುಬಿಟ್ಟಂತೆ ಇದೆ. ಅವರಿಂದ ನಮಗಾಗುವ ಒತ್ತಾಸೆ ಎಷ್ಟು ಪ್ರಬಲವಾದುದು ಎಂಬುದನ್ನು ನೀನೇ ಕಂಡಿದ್ದೀಯೆ. ನಿನಗೆ ಇನ್ನೂ ಒಂದು ಗುಟ್ಟು ಹೇಳುತ್ತೇನೆ, ಕೇಳು. ನಾನು ಆ ನೆಲಮಾಳಿಗೆಯ ತೋಟದಿಂದ ತಂದ ಗಾಜಿನ ಚೂರುಗಳೆಲ್ಲಾ ಅಮೌಲ್ಯವಾದ ರತ್ನಗಳು. ಬಾಗ್ದಾದಿನ ರತ್ನಪಡಿ ವರ್ತಕರಲ್ಲಿರುವ ರತ್ನಗಳು ಗಾತ್ರದಲ್ಲಾಗಲಿ ಬಣ್ಣದಲ್ಲಾಗಲಿ ನಮ್ಮ ರತ್ನಗಳಿಗೆ ಸರಿಯಾಗಲಾರವು. ಅವುಗಳನ್ನು ಸುಲ್ತಾನನಿಗೆ ಒಪ್ಪಿಸಿದರೆ, ಅವನು ಮದುವೆಗೆ ಒಪ್ಪದಿರಲಾರನು. ಅವುಗಳನ್ನು ಇರಿಸುವುದಕ್ಕೆ ನಮ್ಮ ಮನೆಯಲ್ಲಿ ಒಂದು ಒಳ್ಳೆಯ ತಟ್ಟೆಯೂ ಇದೆ. ಅದನ್ನು ತೆಗೆದುಕೊಂಡು ಬಾ. ಅದರಲ್ಲಿ ರತ್ನಗಳನ್ನೆಲ್ಲಾ ವಿಂಗಡಿಸಿ ಇರಿಸಿ, ಹೇಗೆ ಕಾಣುತ್ತವೆಯೋ ನೋಡೋಣ’’-ಎಂದು ಹೇಳಿದನು.

ಕೂಡಲೆ ಅವಳು ತಟ್ಟೆಯನ್ನು ತಂದಿಟ್ಟಳು. ಅಲ್ಲಾವುದೀನನು ಎರಡು ಚೀಲಗಳಲ್ಲಿ ತುಂಬಿಟ್ಟಿದ್ದ ರತ್ನಗಳನ್ನೂ ತೆಗೆದುಕೊಂಡು ತಟ್ಟೆಯಲ್ಲಿ ತನಗೆ ಒಪ್ಪುವಂತೆ ಅಂದವಾಗಿ ಇರಿಸಿದನು. ಅತಿರಮ್ಯವಾದ ಆ ರತ್ನಗಳನ್ನು ನೋಡಿ ಸುಲ್ತಾನನು ಒಂದು ವೇಳೆ

ಮಗಳನ್ನು ಕೊಡುವುದಕ್ಕೆ ಒಪ್ಪಿಕೊಂಡರೂ ಒಪ್ಪಿಕೊಂಡಾನು ಎಂದು ಅವಳಿಗೂ ಮನಸ್ಸಿನಲ್ಲಿ ಸ್ವಲ್ಪ ಧೈರ್ಯವುಂಟಾಯಿತು. ಅದೂ ಅಲ್ಲದೆ ಅವನ ಮಾತನ್ನು ಕೇಳದಿದ್ದರೆ ಅವನು ಅದಕ್ಕಿಂತಲೂ ಮಿತಿಮೀರಿದ ಹುಚ್ಚು ಯೋಚನೆಗಳನ್ನು ಮಾಡಬಹುದೆಂಬ ಶಂಕೆಯೂ ಇದ್ದಿತು. ಆದುದರಿಂದ ಅವಳು ಮರುದಿವಸ ರತ್ನಗಳನ್ನು ತೆಗೆದುಕೊಂಡು ಅರಮನೆಗೆ ಸುಲ್ತಾನನ ಸಮ್ಮುಖಕ್ಕೆ ಹೋಗುವುದಾಗಿ ಮಾತು ಕೊಟ್ಟಳು.

ಮರುದಿವಸ ಅಲ್ಲಾವುದೀನನು ಕೋಳಿ ಕೂಗುವ ಹೊತ್ತಿಗೆ ಎದ್ದು, ತನ್ನ ತಾಯಿಯನ್ನು ಎಬ್ಬಿಸಿ, ''ಅರಮನೆಗೆ ಹೋಗು. ಅನುಕೂಲವಾದರೆ ಮಂತ್ರಿಯೇ ಮೊದಲಾದ ದೊಡ್ಡ ಅಧಿಕಾರಿಗಳು ಬಂದು ಸೇರುವುದಕ್ಕೆ ಮುಂಚೆಯೇ ಆಸ್ಥಾನಕ್ಕೆ ಹೋಗಿ ಸುಲ್ತಾನನನ್ನು ಕಾಣಿಸಿಕೊಂಡರೆ ಉತ್ತಮ''–ಎಂದು ಹೇಳಿದನು.

ಒಡನೆ ಅವಳು ಆ ರತ್ನದ ತಟ್ಟೆಯನ್ನು ತೆಗೆದುಕೊಂಡು ಅರಮನೆಯ ಒಳಗೆ ಹೋದಳು. ಅಲ್ಲಿ ಗುಂಪು ಬಲವಾಗಿತ್ತು. ಆದರೂ ಮೆಲ್ಲಗೆ ದಾರಿಮಾಡಿಕೊಂಡು ನ್ಯಾಯಾಸ್ಥಾನಕ್ಕೆ ಹೋಗಿ ಸೇರಿದಳು. ಆ ಆಸ್ಥಾನವು ವಿಸ್ತಾರವಾಗಿದ್ದಿತು; ಅದರ ಬಾಗಿಲುಗಳು ಬಹು ಮನೋಹರವಾಗಿ ಒಪ್ಪುತ್ತಿದ್ದುವು. ಅವಳು ಒಳಗೆ ಪ್ರವೇಶಿಸಿದಳು. ನಡುವೆ ಸುಲ್ತಾನನೂ ಅವನ ಎರಡು ಕಡೆಯಲ್ಲಿಯೂ ದೊಡ್ಡ ಅಧಿಕಾರಿಗಳೂ ಸಭೆಸೇರಿ ಕುಳಿತಿದ್ದರು.

ಅವರ ಇದಿರಿಗೆ ಅವಳು ಹೋಗಿ ನಿಂತುಕೊಂಡಳು. ಅಲ್ಲಿ ಅನೇಕ ವ್ಯಾಜ್ಯಗಳನ್ನು ಕ್ರಮವಾಗಿ ವಿಚಾರಣೆಮಾಡಿ ಸರಿಯಾಗಿ ತೀರುಮಾನ ಮಾಡುತ್ತಿದ್ದರು. ಹೀಗೆ ಹಲವು ವ್ಯಾಜ್ಯಗಳನ್ನು ತೀರ್ಪುಮಾಡಿ ಅಂದಿನ ಕೆಲಸಗಳನ್ನು ಮುಗಿಸಿಕೊಂಡು ಸುಲ್ತಾನನೂ ಅಧಿಕಾರಿಗಳೂ ಎದ್ದು ಬೇರೆ ಕಡೆಗೆ ಹೊರಟು ಹೋದರು.

ಸುಲ್ತಾನನು ಹೊರಟುಹೋದ ಬಳಿಕ ಜನಗಳೂ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಅದನ್ನು ನೋಡಿ ಇನ್ನು ಸುಲ್ತಾನನು ಮರಳಿ ಆಸ್ಥಾನಕ್ಕೆ ಬರುವುದಿಲ್ಲವೆಂದು ತಿಳಿದು ಕೊಂಡು ಅಲ್ಲಾವುದೀನನ ತಾಯಿಯೂ ತಮ್ಮ ಮನೆಗೆ ಹೊರಟುಹೋದಳು. ಅಲ್ಲಿ ಅಲ್ಲಾವುದೀನನು ಅವಳನ್ನೇ ಇದಿರು ನೋಡುತ್ತ ಕಾದುಕೊಂಡಿದ್ದನು. ಮನೆಗೆ ಬಂದ ಕೂಡಲೆ ಅವಳು "ಮಗು! ನಾನು ಸುಲ್ತಾನನನ್ನು ಕಂಡೆನು. ಅವನ ಸುತ್ತು ಮುತ್ತಲೂ ನೂರಾರು ಜನ ತುಂಬಿಕೊಂಡಿದ್ದರು. ಅವರ ವಿಚಾರಣೆಯಲ್ಲಿ ಬಹಳ ಹೊತ್ತು ಕಳೆದುಹೋಯಿತು. ಆತನ ಶ್ರಮವನ್ನು ನೋಡಿ ನನಗೇ ಸಂಕಟವಾಯಿತು. ಅವನ ತಾಳ್ಮೆಯನ್ನು ಎಷ್ಟು ಕೊಂಡಾಡಿದರೂ ತೀರದು. ಆದರೂ ಆ ವೇಳೆಗೆ ಆತನಿಗೂ ಸಾಕಾಗಿ ಹೋಗಿರಬೇಕೆಂದು ತೋರುತ್ತದೆ. ಅಲ್ಲಿ ತಮ್ಮತಮ್ಮ ವ್ಯಾಜ್ಯಗಳನ್ನು ಹೇಳಿಕೊಳ್ಳುವುದಕ್ಕೆ ಸಿದ್ಧರಾಗಿ ಇನ್ನೂ ಅನೇಕರು ನಿಂತಿದ್ದರು. ಅವರನ್ನು ವಿಚಾರಿಸದೆ ಹಾಗೆಯೇ ಎದ್ದು ಹೊರಟುಹೋದನು.

ಆ ವೇಳೆಗೆ ನಿಂತುನಿಂತು ಕಾಲು ಸೋತುಹೋಗಿ ನನಗೂ ಸಾಕಾಗಿ ಹೋಗಿದ್ದಿತು. ಈ ದಿನ ನಿನ್ನ ಕೆಲಸವೇನೂ ಅನುಕೂಲಿಸಲಿಲ್ಲ. ಆದರೂ ಏನೂ ಬಾಧಕವಿಲ್ಲ. ನಾಳೆ ಪುನಃ ಸುಲ್ತಾನನ ಬಳಿ ಹೋಗುತ್ತೇನೆ. ನಾಳೆ ಒಂದು ವೇಳೆ ಆತನಿಗೆ ಬಿಡುವಾದರೂ ಆಗಬಹುದು'' ಎಂದು ಹೇಳಿದಳು.

ಹಾಗೆಯೇ ಮರುದಿವಸವೂ ಹೋಗಿ ಸುಲ್ತಾನನ ಇದಿರಿಗೆ ನಿಂತಿದ್ದಳು. ಆ ದಿವಸವೂ ಸಮಯವಾಗಲಿಲ್ಲ. ಅದೇ ಮೇರೆ ಆರು ದಿವಸಗಳ ವರೆಗೂ ಹೋಗಿ ಬರುತ್ತಿದ್ದರೂ ಅವಳಿಗೆ ಸಮಯವು ದೊರಕಲೇ ಇಲ್ಲ. ಆದರೆ ಆರನೆಯ ದಿವಸ ಸುಲ್ತಾನನು ಸಜ್ಜೆಗೆ ಹೋದಾಗ ಮಂತ್ರಿಯನ್ನು ನೋಡಿ, ''ಈಗ ಕೆಲವು ದಿವಸದಿಂದ ಅವಳೊ ಒಬ್ಬ ಹೆಂಗಸು ಒಂದು ತಟ್ಟೆಯಲ್ಲಿ ಏನನ್ನೊ ಇಟ್ಟುಕೊಂಡು ಒಂದು ವಸ್ತ್ರವನ್ನು ಮುಚ್ಚಿ ಹಿಡಿದುಕೊಂಡು ನಿತ್ಯವೂ ಧರ್ಮಾಸ್ಥಾನಕ್ಕೆ ಬಂದು ನಿಂತಿರುತ್ತಾಳೆ. ಅವಳೇನಾದರೂ ನಾಳೆ ಬಂದರೆ ತಪ್ಪದೆ ಅವಳನ್ನು ಕರೆ. ಅವಳ ಸಂಗತಿಯನ್ನು ವಿಚಾರಿಸುತ್ತೇನೆ'' ಎಂದು ಹೇಳಿದನು.

ಮರುದಿವಸ ಅವಳು ಅರಮನೆಗೆ ಹೋಗಿ ಎಂದಿನಂತೆ ಸುಲ್ತಾನನ ಇದಿರಿಗೆ ನಿಂತುಕೊಂಡಳು. ಅದನ್ನು ನೋಡಿ ಮಂತ್ರಿಯು ಒಬ್ಬ ಕಟ್ಟಿಗೆಯವನನ್ನು ಕರೆದು ಅವಳನ್ನು ಸುಲ್ತಾನನ ಇದಿರಿಗೆ ಕರೆತಂದು ನಿಲ್ಲಿಸುವಂತೆ ಅಪ್ಪಣೆಮಾಡಿದನು. ಅವಳು ಕಟ್ಟಿಗೆಯವನ

ಹಿಂದೆಯೇ ಹೊರಟು ಸುಲ್ತಾನನ ಬಳಿಗೆ ಹೋದಳು. ಆಗ ಸುಲ್ತಾನನು ಅವಳನ್ನು ಕುರಿತು, "ಅಮ್ಮಾ! ನೀನು ಯಾರು? ನೀನು ಅನೇಕ ದಿವಸಗಳಿಂದ ಬೆಳಗ್ಗೆ ಮೊದಲುಗೊಂಡು ಸಭೆ ತೀರುವ ವರೆಗೂ ಇಲ್ಲಿಯೇ ನಿಂತಿರುತ್ತೀಯಲ್ಲ; ಅದು ಏತಕ್ಕೆ? ನೀನು ಯಾವ ಕೆಲಸಕ್ಕಾಗಿ ಇಲ್ಲಿಗೆ ಬರುತ್ತೀಯೆ?" ಎಂದು ಕೇಳಿದನು.

ಆ ಮಾತುಗಳನ್ನು ಕೇಳಿದ ಕೂಡಲೆ ಅವಳು ಸುಲ್ತಾನನಿಗೆ ನಮಸ್ಕಾರಮಾಡಿ ಎದ್ದುನಿಂತುಕೊಂಡು, "ರಾಜಾಧಿರಾಜ! ಮಹಾಪ್ರಭೂ! ಹೀಗೆ ಪ್ರಾರ್ಥಿಸಿಕೊಳ್ಳುವ ಸೇವಕಳ ಧಾರ್ಷ್ಟ್ಯವನ್ನು ಕ್ಷಮಿಸಬೇಕು. ನನಗೆ ಅಭಯವನ್ನು ಕೊಟ್ಟರೆ ವಿಜ್ಞಾಪಿಸುತ್ತೇನೆ" ಎಂದು ಹೇಳಿದಳು. "ಒಳ್ಳೆಯದು. ನೀನು ಭಯಪಡದೆ ಏನಿದ್ದರೂ ಕೇಳಿಕೋ. ನಿನಗೆ ಯಾವ ಅಪಾಯವೂ ಇಲ್ಲ"- ಎಂದು ಸುಲ್ತಾನನು ಅಪ್ಪಣೆ ಕೊಡಿಸಿದನು.

ಸುಲ್ತಾನನಿಗೆ ಕೋಪವು ಬಾರದಂತೆ ಹೀಗೆ ಭರವಸೆಯನ್ನು ಪಡೆದುಕೊಂಡ ಬಳಿಕ ಅವಳು ಸ್ವಲ್ಪವೂ ಮರೆಮಾಚದೆ ತಾನು ಬಂದ ಸಮಾಚಾರವನ್ನು ಅರಿಕೆಮಾಡಿದಳು. ಸುಲ್ತಾನನು ಸ್ವಲ್ಪವೂ ಸಿಟ್ಟುಮಾಡಿಕೊಳ್ಳದೆ ಕೊನೆಯವರೆಗೂ ಕೇಳಿದನು. ತರುವಾಯ ಅವ ಉತ್ತರವನ್ನೂ ಕೊಡದೆ, "ಆ ತಟ್ಟೆಯಲ್ಲಿ ಏನಿದೆ ?" ಎಂದು ಕೇಳಿದನು. ಅವಳು ತಟ್ಟೆಯನ್ನು ತೆಗೆದುಕೊಂಡು ಅದರ ಮುಸುಕನ್ನು ತೆಗೆದುಹಾಕಿ ಸುಲ್ತಾನನಿಗೆ ಕಾಣಿಕೆಯಾಗಿ ಒಪ್ಪಿಸಿದಳು. ಅಷ್ಟೊಂದು ಸೊಗಸಾದ, ಅಮೂಲ್ಯವಾದ ಆ ರತ್ನಗಳನ್ನು ನೋಡಿ ಸುಲ್ತಾನನು



ಬೆರಗಾಗಿಹೋದನು. ಹಾಗೆಯೆ ಸ್ವಲ್ಪ ಹೊತ್ತಿಗೆ ಎಚ್ಚೆತ್ತುಕೊಂಡು, "ಓಹೋಹೋ! ಏನು ರತ್ನಗಳು! ಎಂಥ ರತ್ನಗಳು! ಎಷ್ಟು ಮನೋಹರವಾಗಿವೆ!" ಎಂದು ಹೊಗಳುತ್ತ, ಅವುಗಳನ್ನು ತೆಗೆದುಕೊಂಡನು. ಬಳಿಕ ಅವುಗಳನ್ನು ಒಂದೊಂದಾಗಿ ಕೈಯಲ್ಲಿ ತೆಗೆದುಕೊಂಡು ನೋಡಿ, ಅವುಗಳ ಅಂದಕ್ಕೆ ಆಶ್ಚರ್ಯಪಡುತ್ತ, ಮಂತ್ರಿಯನ್ನು ಕುರಿತು "ನೀವು ಹಿಂದೆ ಎಂದಾದರೂ ಇಷ್ಟು ಸೊಗಸಾದ ರತ್ನಗಳನ್ನು ನೋಡಿದ್ದೀರಾ?" ಎಂದು ಅವನ ಕೈಗೆ ಕೊಟ್ಟನು. ಅವುಗಳನ್ನು ನೋಡಿ ಅವನಿಗೂ ಅತ್ಯಾಶ್ಚರ್ಯವಾಯಿತು. "ಏನು ? ಈ ಕಾಣಿಕೆಗೆ ಏನು ಹೇಳುತ್ತೀರಿ? ಇವು ನಮ್ಮ ಕುಮಾರ್ತೆಗೆ ಯೋಗ್ಯವಾಗಿಲ್ಲವೆ? ಇಷ್ಟು ಶ್ಲಾಘ್ಯವಾದ ರತ್ನಗಳನ್ನು ಕೊಡುವ ವನಿಗೆ ಅವಳನ್ನು ಕೊಟ್ಟು ಮದುವೆ ಮಾಡಕೂಡದೆ ?" ಎಂದು ಕೇಳಿದನು.

"ಇವು ರಾಜಕುಮಾರ್ತೆಯರಿಗೆ ತಕ್ಕುವೆಂಬ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಇರಲಾರದು. ಆದರೂ ಪರಿಚ್ಛೇದಿಸಿ ಉತ್ತರಕೊಡುವುದಕ್ಕಾಗಿ ಮೂರು ತಿಂಗಳ ಗಡುವನ್ನು ಬೇಡಿ ಕೊಳ್ಳುತ್ತೇನೆ. ಆ ವೇಳೆಗೆ ಮಹಾಸ್ವಾಮಿಯವರ ಕೃಪಾಕಟಾಕ್ಷಕ್ಕೆ ಪಾತ್ರನಾದ ನನ್ನ ಮಗನು, ಸುತರಾಂ ಅಪರಿಚಿತನಾದ ಈ ಅಲ್ಲಾವುದೀನನು ಒಪ್ಪಿಸಿದ ಕಾಣಿಕೆಗಿಂತಲೂ ಉತ್ತಮವಾದ ಕಾಣಿಕೆಯನ್ನು ಮಹಾಸ್ವಾಮಿಯವರಿಗೆ ಒಪ್ಪಿಸುವನೆಂಬುದಾಗಿ ನನಗೆ ನಂಬಿಕೆಯುಂಟು"– ಎಂದು ವಿಜ್ಞಾಪಿಸಿಕೊಂಡನು.

ಸುಲ್ತಾನನು ಅವನ ಪ್ರಾರ್ಥನೆಗೆ ಒಡಂಬಟ್ಟು ಅಲ್ಲಾವುದೀನನ ತಾಯಿಯನ್ನು ನೋಡಿ, "ನಿನ್ನ ಪ್ರಾರ್ಥನೆಯನ್ನು ನಾವು ಅಂಗೀಕರಿಸಿದೆವೆಂದು ನಿನ್ನ ಮಗನಿಗೆ ತಿಳಿಸು. ಆದರೆ ನಮ್ಮ ಕುಮಾರ್ತೆಗೆ ಇನ್ನು ಮೂರು ತಿಂಗಳ ವರೆಗೂ ಮದುವೆ ಮಾಡಲಾಗುವುದಿಲ್ಲ; ಮೂರು ತಿಂಗಳಾದ ಬಳಿಕ ನೀನು ಇಲ್ಲಿಗೆ ಬಾ" ಎಂದು ಅಪ್ಪಣೆಕೊಟ್ಟನು. ಆ ಮಾತಿಗೆ ಸಂತುಷ್ಟಳಾಗಿ ಅವಳು ಮನೆಗೆ ಬಂದು ತನ್ನ ಮಗನೊಡನೆ ಸುಲ್ತಾನನು ತಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿದುದನ್ನೂ ಮೂರು ತಿಂಗಳಾದ ಬಳಿಕ ಬರಹೇಳಿದುದನ್ನೂ ತಿಳಿಸಿದಳು.

ಅದನ್ನೆಲ್ಲಾ ಅಲ್ಲಾವುದೀನನು ಕೇಳಿ, ಈ ಪ್ರಪಂಚದಲ್ಲಿ ತನ್ನಷ್ಟು ಸುಖಿಗಳು ಇಲ್ಲವೆಂದು ಭಾವಿಸಿಕೊಂಡು ಆನಂದಸಾಗರದಲ್ಲಿ ಮುಳುಗಾಡುತ್ತಿದ್ದನು. ತನಗೆ ಅಷ್ಟೊಂದು ಉಪಕಾರವನ್ನು ಮಾಡಿದುದಕ್ಕಾಗಿ ತನ್ನ ತಾಯಿಗೆ ನೂರಾರು ಸಲ ತನ್ನ ಕೃತಜ್ಞತೆಯನ್ನು ಹೇಳಿದನು. ತನ್ನ ಆಸೆ ಯಾವಾಗ ಕೈಗೂಡುವುದೊ ಎಂದು ಯೋಚಿಸುತ್ತಾ ಗಳಿಗೆಗಳನ್ನೂ ದಿನಗಳನ್ನೂ ವಾರಗಳನ್ನೂ ಲೆಕ್ಕ ಮಾಡುತ್ತಿದ್ದನು. ಹಾಗೆಯೇ ಮೂರು ತಿಂಗಳು ಕಳೆಯುತ್ತ ಬಂದಿತು. ಆಗ ಒಂದು ದಿವಸ ಅಲ್ಲಾವುದೀನನ ತಾಯಿ ಮನೆಯಲ್ಲಿ ಎಣ್ಣೆಯಿಲ್ಲದಿದ್ದುದರಿಂದ ಕೊಂಡುಕೊಂಡು ಬರುವುದಕ್ಕಾಗಿ ಅಂಗಡಿಯ ಬೀದಿಗೆ ಹೋದಳು. ಬೀದಿಯಲ್ಲಿ ಎಲ್ಲಿ ನೋಡಿದರೂ ಶೃಂಗಾರವಾಗಿತ್ತು. ಮನೆ ಮನೆಯ ಬಾಗಿಲಿಗೂ ತೋರಣಗಳನ್ನು

ಕಟ್ಟಿದ್ದರು. ಆವ ಮನೆಯ ಮೇಲೆ ನೋಡಿದರೂ ನೂರಾರು ಧ್ವಜಪಟಗಳನ್ನು ನಿಲ್ಲಿಸಿದ್ದರು. ಮನೆಗಳ ಮುಂದುಗಡೆಯಲ್ಲಿ ಚಪ್ಪರಗಳನ್ನು ಹಾಕಿ ಜಂಬುಖಾನೆಗಳನ್ನು ಹಾಸಿದ್ದರು. ಪ್ರತಿ ಮನುಷ್ಯನೂ ತನ್ನ ಕೈಯಲ್ಲಾದ ಮಟ್ಟಿಗೂ ತನ್ನ ಸಂತೋಷವನ್ನು ತೋರ್ಪಡಿಸುವ ಪ್ರಯತ್ನದಲ್ಲಿದ್ದನು. ಕುದುರೆಯನ್ನು ಹತ್ತಿದ್ದ ನೂರಾರು ಮಂದಿ ಅಕ್ಷಿಕಾರಿಗಳೂ ಅವರ ಊಳಿಗದವರೂ ಬೀದಿಯಲ್ಲೆಲ್ಲಾ ತುಂಬಿಕೊಂಡಿದ್ದರು. ಆದನ್ನೆಲ್ಲಾ ನೋಡಿ ಅವಳು, ''ಜನಗಳ ಈ ಸಂತೋಷಕ್ಕೆ ಕಾರಣವೇನು?'' ಎಂದು ಅಂಗಡಿಯವನನ್ನು ಕೇಳಿದಳು.

"ನೀನು ಯಾವ ಊರಮ್ಮಾ! ಈ ರಾತ್ರಿ ನಮ್ಮ ಮಂತ್ರಿಯ ಮಗನಿಗೆ ಸುಲ್ತಾನರವರ ಮಗಳನ್ನು ಕೊಟ್ಟು ಮದುವೆ ಮಾಡುತ್ತಾರೆಂದು ನಿನಗೆ ಗೊತ್ತಿಲ್ಲವೇ? ಈ ಸವಾರರೆಲ್ಲರೂ ಗಂಡನ್ನು ಅರಮನೆಗೆ ಕರೆದುಕೊಂಡುಹೋಗುತ್ತಾರೆ. ಅರಮನೆ ಯಲ್ಲಿಯೇ ಲಗ್ನವು ಬೆಳೆಯುತ್ತದೆ'' ಎಂದು ಹೇಳಿದನು:

ಆ ಸಮಾಚಾರವನ್ನು ಕೇಳಿ ಅವಳು ಮನೆಗೆ ಬೇಗ ಹೋಗಿ, ''ಮಗು, ನೀನು ಕೆಟ್ಟುಹೋದೆ. ಸುಲ್ತಾನನು ಕೊಟ್ಟ ಮಾತುಗಳೆಲ್ಲ ಬರಿಯ ಸುಳ್ಳುಮಾತುಗಳು. ಈ ರಾತ್ರಿ ಮಂತ್ರಿಯ ಮಗನಿಗೂ ಸುಲ್ತಾನನ ಮಗಳಿಗೂ ಮದುವೆ ನಡೆಯುತ್ತದೆಯಂತೆ''-ಎಂದಳು.

ಅದನ್ನು ಕೇಳಿ ಅಲ್ಲಾವುದೀನನು ಸಿಡಿಲು ಹೊಡೆದವನಂತೆ ಮರವಾಗಿ ಹೋದನು. ಹಾಗೆಯೇ ಮೆಲ್ಲಗೆ ಸ್ವಲ್ಪಹೊತ್ತಿಗೆ ಚೇತರಿಸಿಕೊಂಡು ಈ ಮದುವೆಯನ್ನು ನಿಲ್ಲಿಸಿಬಿಡುವ ಬಗೆ ಹೇಗೆಂದು ಆಲೋಚಿಸುತ್ತ, ತನ್ನ ದೀಪವನ್ನೂ ಭೂತವನ್ನೂ ನೆನೆದುಕೊಂಡನು. "ಇನ್ನು ಸುಮ್ಮನೆ ಸುಲ್ತಾನನನ್ನೂ ಅವನ ಮಂತ್ರಿಯನ್ನೂ ಮಂತ್ರಿಯ ಮಗನನ್ನೂ ಬೈದು ಫಲವೇನು? ನನ್ನ ಕೈಯಲ್ಲಾದರೆ ಈ ಮದುವೆಯನ್ನು ತಪ್ಪಿಸಿಬಿಡುವೆನು" ಎಂದು ನಿಶ್ಚಯಿಸಿಕೊಂಡನು.

ಹಾಗೆ ನಿಶ್ಚಯಮಾಡಿಕೊಂಡು ಕೂಡಲೆ ಎದ್ದು ತನ್ನ ಕೊಟಡಿಗೆ ಹೋಗಿ, ದೀಪವನ್ನು ತೆಗೆದುಕೊಂಡು, ಹಿಂದೆ ಉಜ್ಜಿದ್ದ ಕಡೆಯಲ್ಲಿಯೇ ಉಜ್ಜಿದನು. ಆಗಲೆ ಭೂತವು ಇದಿರಿಗೆ ಬಂದು ನಿಂತುಕೊಂಡು, "ಏನಪ್ಪಣೆ? ನಾನೂ ನನ್ನ ಜತೆಗಾರರೂ ನಿಮ್ಮ ದಾಸರಾಗಿ ನಿಮ್ಮ ಅಪ್ಪಣೆಯನ್ನು ನೆರವೇರಿಸುತ್ತೇವೆ" ಎಂದಿತು.

ಅಲ್ಲಾವುದೀನನು "ಇಗೋ! ಕೇಳು, ಸುಲ್ತಾನನು ತನ್ನ ಮಗಳನ್ನು ನನಗೆ ಮದುವೆ ಮಾಡಿಕೊಡುತ್ತೇನೆಂದು ಮಾತು ಕೊಟ್ಟಿದ್ದನು. ಆದರೆ ಈ ರಾತ್ರಿ ಅವಳನ್ನು ಮಂತ್ರಿಯ ಮಗನಿಗೆ ಕೊಟ್ಟು ಮದುವೆ ಮಾಡುತ್ತಾನಂತೆ. ಮದುವೆಯಾದ ಒಡನೆ ವಧೂವರರಿಬ್ಬರನ್ನೂ ಇಲ್ಲಿಗೆ ಎತ್ತಿಕೊಂಡು ಬಾ" ಎಂದನು.

"ಅಪ್ಪಣೆಯ ಮೇರೆ ನಡೆಯುತ್ತೇನೆ" ಎಂದು ಹೇಳಿ ಭೂತವು ಅದೃಶ್ಯವಾಯಿತು.

ಅಲ್ಲಾವುದೀನನು ಬಳಿಕ ಎಂದಿನಂತೆ ತನ್ನ ತಾಯಿಯೊಡನೆ ಕುಳಿತುಕೊಂಡು ಊಟಮಾಡಿ, ತನ್ನ ಕೊಟಡಿಗೆ ಹೋಗಿ ಭೂತವು ಬರುವ ಹಾದಿಯನ್ನೇ ಇದಿರುನೋಡುತ್ತ ಕುಳಿತಿದ್ದನು.

ಈ ನಡುವೆ ಅರಮನೆಯಲ್ಲಿ ವಿವಾಹಪ್ರಸ್ತುತವು ಬಹಳ ವಿಜೃಂಭಣೆಯಾಗಿ ನಡೆಯಿತು. ಹೆಣ್ಣನ್ನೂ ಗಂಡನ್ನೂ ಮಲಗುವ ಮನೆಗೆ ಬಿಟ್ಟರು. ಅವರು ಒಳಗೆ ಹೋಗಿ ತಮ್ಮ ತಮ್ಮ ಪರಿಜನ ಗಳನ್ನು ಹೊರಗೆ ಕಳುಹಿಸಿಕೊಟ್ಟರು. ಹಾಗೆ ಪರಿಜನಗಳನ್ನು ಕಳುಹಿಸಿಕೊಟ್ಟರೋ ಇಲ್ಲವೋ, ಆಗಲೆ ಭೂತವು ಅವರಿಬ್ಬರನ್ನೂ ಎತ್ತಿಕೊಂಡು ಕಣ್ಣಿಗೆ ಗೋಚರವಾಗದೆ ತಂದು ಅಲ್ಲಾವುದೀನನ ಕೊಟಡಿಯಲ್ಲಿ ಬಿಟ್ಟಿತು. ಅದನ್ನು ನೋಡಿ ಅವರಿಬ್ಬರೂ ಭಯ ದಿಂದಲೂ ಆಶ್ಚರ್ಯದಿಂದಲೂ ಬೆರಗಾಗಿ ಹೋದರು.

ಅಷ್ಟರಲ್ಲೇ ಅಲ್ಲಾವುದೀನನು, "ಈ ವರನನ್ನು ಎತ್ತಿ ಕೊಂಡು ಹೋಗಿ ಬೆಳಗಿನವರೆಗೂ ಸೆರೆಯಲ್ಲಿಟ್ಟಿದ್ದು, ಬೆಳಗ್ಗೆ ಹೊತ್ತಿನಂತೆ ಇಲ್ಲಿಗೆ ಎತ್ತಿಕೊಂಡು ಬಾ" ಎಂದು ಭೂತಕ್ಕೆ ಆಜ್ಞಾಪಿಸಿದನು. ಅದು ಎತ್ತಿಕೊಂಡು ಹೊರಟುಹೋಯಿತು. ಬಳಿಕ ಅಲ್ಲಾವುದೀನನು ಮೆಲ್ಲಗೆ ರಾಜಪುತ್ರಿಯ ಬಳಿಗೆ ಸೇರಿ, ಮೃದುವಚನಗಳಿಂದ ಅವಳ ಭಯವನ್ನು ಹೋಗಲಾಡಿಸಿ, "ಸುಲ್ತಾನನು ನಿನ್ನನ್ನು ನನಗೆ



ಮದುವೆಮಾಡಿಕೊಡುವುದಾಗಿ ಮಾತುಕೊಟ್ಟು ಹೀಗೆ ದ್ರೋಹವನ್ನು ಮಾಡಿದ್ದಾನೆ; ಆದರೂ ಬಾಧೆಯಿಲ್ಲ. ನಿನ್ನನ್ನು ನಾನು ಗೌರವವಾಗಿಯೇ ಕಾಣುವೆನು''- ಎಂದು ಹೇಳಿ ಅವಳನ್ನು ಸಮಾಧಾನಪಡಿಸಿದನು.

ರಾತ್ರಿ ಕಳೆದು ಅರುಣೋದಯವಾಯಿತು. ಆ ವೇಳೆಗೆ ಸರಿಯಾಗಿ ಭೂತವು ಮದುವಣಿಗನನ್ನು ಅಲ್ಲಿಗೆ ಎತ್ತಿಕೊಂಡು ಬಂದಿತು. ಕೂಡಲೆ ಅಲ್ಲಾವುದೀನನ ಅಪ್ಪಣೆಯಂತೆ ಮದುವಣಿಗನನ್ನೂ ಮದುವಣಿಗಿತ್ತಿಯನ್ನೂ ಎತ್ತಿಕೊಂಡುಹೋಗಿ ಅರಮನೆಯಲ್ಲಿ ಅವರು ಮಲಗುವ ಮನೆಯಲ್ಲಿ ಇಳಿಸಿತು.

ಮಾರನೆಯ ರಾತ್ರಿಯೂ ಹೀಗೆಯೇ ನಡೆಯಿತು. ಅವರು ರಾತ್ರಿಯಲ್ಲೆಲ್ಲಾ ಹಿಂದಿನಂತೆಯೇ ಶ್ರಮಪಟ್ಟರು. ಬೆಳಗಿನ ಜಾವದ ಹೊತ್ತಿಗೆ ಮತ್ತೆ ತಮ್ಮ ಮಲಗುವ ಮನೆಯಲ್ಲಿ ತಂದಿಡಲ್ಪಟ್ಟರು. ಆ ದಿವಸ ಅವರು ಅಲ್ಲಿಗೆ ಸೇರಿದ ಕಾಲಕ್ಕೆ ಸರಿಯಾಗಿ ಸುಲ್ತಾನನು ಮಗಳನ್ನು ಆಶೀರ್ವದಿಸುವುದಕ್ಕೆ ಬಂದನು. ಆಗ ರಾಜಪುತ್ರಿಯು ಹಿಂದಿನ ರಾತ್ರಿಗಳಲ್ಲಿ ನಡೆದ ಸಂಗತಿಗಳನ್ನೆಲ್ಲಾ ತಂದೆಗೆ ತಿಳಿಸಿದಳು. ಆ ಆಶ್ಚರ್ಯಕರವಾದ ಸಮಾಚಾರವನ್ನು ಕೇಳಿ, ಸುಲ್ತಾನನು ಮನಸ್ಸಿನಲ್ಲಿ ನೊಂದುಕೊಂಡು, ಇದಕ್ಕೆ ಏನು ಮಾಡಬೇಕೆಂದು ಮಂತ್ರಿಯೊಡನೆ ಆಲೋಚಿಸಿದನು. ರಾಜಪುತ್ರಿಗಿಂತಲೂ ಮಂತ್ರಿಯ ಮಗನಿಗೆ ಹೆಚ್ಚಾಗಿ ಬಾಧೆಯಾಗುತ್ತಿದ್ದಿತೆಂದು ಮಂತ್ರಿ ತಿಳಿಸಿದನು. ಅದನ್ನು ಕೇಳಿ ಸುಲ್ತಾನನು ಆ ಮದುವೆಯನ್ನೇ ತಪ್ಪಿಸಿಬಿಡಬೇಕೆಂದು ನಿಶ್ಚಯಿಸಿಕೊಂಡು, ಅಲ್ಲಿಂದ ಮುಂದೆ ನಡೆಯಬೇಕಾದ ಮದುವೆಯ ಮಹೋತ್ಸವಗಳನ್ನೆಲ್ಲಾ ನಿಲ್ಲಿಸಿ ಬಿಡುವಂತೆ ಆಜ್ಞಾಪಿಸಿದನು.

ಹೀಗೆ ಹಠಾತ್ತಾಗಿ ಮದುವೆಯನ್ನು ನಿಲ್ಲಿಸಿಬಿಡಬೇಕೆಂದು ಸುಲ್ತಾನನ ಆಜ್ಞೆಯಾಯಿತೆಂದು ಕೇಳಿ ಜನಗಳು ನಾನಾವಿಧವಾಗಿ

ಆಡಿಕೊಂಡರು. ಆದರೂ ಅದಕ್ಕೆ ನಿಜವಾದ ಕಾರಣವು ಇಂಥದೆಂದು ಆರಿಗೂ ಗೊತ್ತಾಗಿರಲಿಲ್ಲ. ಅಲ್ಲಾವುದೀನನು ಮಾತ್ರ ತಿಳಿದಿದ್ದನು. ಆವನು ಅದನ್ನು ಒಬ್ಬರಿಗೂ ತಿಳಿಸದೆ ಗುಟ್ಟಾಗಿಟ್ಟಿದ್ದನು. ಹೀಗೆ ಕೆಲವು ಕಾಲ ಕಳೆದುಹೋಯಿತು. ಆ ವೇಳೆಗೆ ಸುಲ್ತಾನನೂ ಮಂತ್ರಿಯೂ ಅಲ್ಲಾವುದೀನನ ಸಂಗತಿ ಯನ್ನೇ ಮರೆತುಬಿಟ್ಟಿದ್ದರು. ಆದುದರಿಂದ ಅವನು ಮದುವಣಿಗರನ್ನು ತೊಂದರೆಪಡಿಸುತ್ತಿದ್ದ ನೆಂಬ ಅಂಶವು ಅವರ ಮನಸ್ಸಿಗೆ ಹೊಳೆಯದೆ ಹೋಯಿತು.

ಆ ವೇಳೆಗೆ ಮೂರು ತಿಂಗಳ ಗಡುವೂ ತೀರಿತು. ಆ ಮರು ದಿವಸವೇ ಅಲ್ಲಾವುದೀನನ ತಾಯಿ ಅರಮನೆಗೆ ಹೋಗಿ ಆಸ್ಥಾನದಲ್ಲಿ ಸುಲ್ತಾನನ ಇದಿರಿಗೆ ಎಂದಿನಂತೆ ನಿಂತುಕೊಂಡಳು. ಸುಲ್ತಾನನು ಅವಳ ಗುರುತನ್ನು ಬಲ್ಲನಾದುದರಿಂದ ಅವಳನ್ನು ತನ್ನ ಬಳಿಗೆ ಕರೆದುಕೊಂಡು ಬರುವಂತೆ ಮಂತ್ರಿಗೆ ಆಜ್ಞಾಪಿಸಿದನು. ಅವಳನ್ನು ಸಮೀಪಕ್ಕೆ ಕರೆದುಕೊಂಡುಹೋದರು. ಕೂಡಲೆ ಅವಳು ಸುಲ್ತಾನನಿಗೆ ನಮಸ್ಕಾರಮಾಡಿ, ‘‘ಮಹಾಪ್ರಭುವೆ! ಮೂರು ತಿಂಗಳಾಯಿತು. ಅಪ್ಪಣೆಯ ಪ್ರಕಾರ ಬಂದಿದ್ದೇನೆ. ಹಿಂದೆ ಮಹಾ ಸ್ವಾಮಿಯವರು ಮಾತು ಕೊಟ್ಟಿದ್ದಂತೆ ನಡೆಯಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ’’ ಎಂದಳು. ಹಾಗೆ ಅಲ್ಲಾವುದೀನನ ತಾಯಿ ತನ್ನ ಮಗನಿಗೆ ರಾಜಪುತ್ರಿಯನ್ನು ಕೊಡುವಂತೆ ನಿಜವಾಗಿಯೂ ಕೇಳಿದಳೆಂದಾಗಲಿ ಪುನಃ ಆ ಪ್ರಸ್ತಾಪವನ್ನು ಎತ್ತುವಳೆಂದಾಗಲಿ ಸುಲ್ತಾನನು ಕನಸಿನಲ್ಲಿಯೂ ನೆನೆದಿರಲಿಲ್ಲ. ಆದುದರಿಂದ ಅವನು

ಮಂತ್ರಿಯೊಡನೆ ಆ ವಿಷಯವಾಗಿ ಆಲೋಚನೆ ಮಾಡಿದನು. ಅದಕ್ಕೆ ಮಂತ್ರಿಯು, "ಅಲ್ಲಾವುದೀನನು ಬಡವನು. ಅವನಿಗೆ ಸಾಧ್ಯವಲ್ಲದ ಕೆಲವು ಕಾರ್ಯಗಳನ್ನು ಹೇಳಿ, ಇವುಗಳನ್ನು ಮಾಡಿದ ಪಕ್ಷದಲ್ಲಿ ಮದುವೆ ಮಾಡಿಕೊಡುತ್ತೇವೆಂದು ಹೇಳಿಬಿಟ್ಟರೆ ಈ ಸುದ್ದಿಯೇ ನಿಂತು ಹೋಗುವುದು" ಎಂದನು. ಆ ತರುವಾಯ ಸುಲ್ತಾನನು ಅವಳನ್ನು ಕುರಿತು ಇಂತೆಂದನು: "ಸುಲ್ತಾನರವರು ತಮ್ಮ ಮಾತನ್ನು ನಡೆಸಿ ಕೊಡಬೇಕೆಂಬುದೇನೋ ನಿಜ; ನಾವು ನಮ್ಮ ಮಗಳನ್ನು ನಿನ್ನ ಮಗನಿಗೆ ಮದುವೆಮಾಡಿಕೊಟ್ಟು ಅವನನ್ನು ಸಂತೋಷ ಪಡಿಸುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ನಿನ್ನ ಮಗನು ನಮ್ಮ ಮಗಳನ್ನು ರಾಜಪುತ್ರಿಯ ಗೌರವಕ್ಕೆ ತಕ್ಕಂತೆ ಕಾಪಾಡ ಬಲ್ಲನೋ ಇಲ್ಲವೋ ತಿಳಿಯದು. ಆದುದರಿಂದ ನಿನ್ನ ಮಗನೊಂದಿಗೆ ಹೀಗೆ ಹೇಳು: "ಹಿಂದೆ ನೀನು ನಮಗೆ ಕಾಣಿಕೆಯಾಗಿ ಕೊಟ್ಟ ರತ್ನಗಳಂಥ ರತ್ನಗಳನ್ನು ನಾಲ್ವತ್ತು ಚಿನ್ನದ ತಟ್ಟೆಗಳಲ್ಲಿ ತುಂಬಿ ನಾಲ್ವತ್ತು ಜನ ಆಳುಗಳ ತಲೆಯ ಮೇಲೆ ಹೊರಿಸಿ ಕಳುಹಿಸಿಕೊಡಬೇಕು. ಆ ಆಳುಗಳೊಬ್ಬೊಬ್ಬರ ಪಕ್ಕದಲ್ಲಿಯೂ ಒಳ್ಳೆಯ ಉಡುಪುಗಳನ್ನು ಹಾಕಿಕೊಂಡು ಚೆಲುವುಳ್ಳ ಹುಡುಗರೊಬ್ಬೊಬ್ಬರಿರಬೇಕು. ಈ ರೀತಿಯಾಗಿ ನಮಗೆ ಕಾಣಿಕೆಯನ್ನು ಕಳುಹಿಸಿಕೊಟ್ಟರೆ ನಮ್ಮ ಮಗಳನ್ನು ಮದುವೆ ಮಾಡಿಕೊಡುತ್ತೇವೆ."-ಇದನ್ನು ತಿಳಿಸಿ ನಿನ್ನ ಮಗನ ಪ್ರತ್ಯುತ್ತರವನ್ನು ತೆಗೆದು ಕೊಂಡು ಬಾ. ಅದುವರೆಗೂ ನಾವು ಇಲ್ಲಿಯೇ ಇರುತ್ತೇವೆ."

ಆ ಮಾತುಗಳನ್ನು ಕೇಳಿ ಅಲ್ಲಾವುದೀನನ ತಾಯಿಯು ಹೊರಟುಹೋದಳು. ಹೋಗುತ ಹೋಗುತ ತನ್ನ ಮಗನ ಹುಚ್ಚುತನಕ್ಕೆ ತಾನೇ ಮನಸ್ಸಿನಲ್ಲಿ ನಗುತ್ತಿದ್ದಳು. "ನಮ್ಮ ಹುಡುಗನು ನಾಲ್ವತ್ತು ಚಿನ್ನದ ತಟ್ಟೆಗಳನ್ನು ಎಲ್ಲಿಂದ ತರಬಲ್ಲನು? ಅವುಗಳಲ್ಲಿ ತುಂಬುವುದಕ್ಕೆ ರತ್ನಗಳೆಲ್ಲಿವೆ? ಇದು ಸುತರಾಂ ಅಸಾಧ್ಯವಾದ ಕೆಲಸವು"–ಎಂದು ತನ್ನಲ್ಲೇ ತಾನು ಎಂದು ಕೊಳ್ಳುತ ಮನೆಗೆ ಹೋಗಿ ಸೇರಿದಳು. ಸೇರಿದವಳಾಗಿ, ಮಗನನ್ನು ಕಂಡು ಸುಲ್ತಾನನು ಹೇಳಿದ ಸಂಗತಿಗಳನ್ನೆಲ್ಲಾ ತಿಳಿಸಿ, "ಸುಲ್ತಾನನು ನಿನ್ನ ಉತ್ತರವನ್ನು ನಿರೀಕ್ಷಿಸುತ್ತಿದ್ದಾನೆ. ಅವನು ಹಾಗೆಯೇ ನಿರೀಕ್ಷಿಸುತ್ತ ಕುಳಿತಿರಬಹುದೋ ಇಲ್ಲವೆ ಏನಾದರೂ ಉತ್ತರವುಂಟೋ?" ಎಂದು ಕೇಳಿದಳು. "ಅವನೇನೂ ಬಹಳಕಾಲ ನಿರೀಕ್ಷಿಸಿ ಕೊಂಡಿರಬೇಕಾದ ಆವಶ್ಯಕತೆ ಇಲ್ಲ. ಈಗ ಅವನು ಕೇಳಿರುವುದೇನೂ ಬಲು ದೊಡ್ಡದಲ್ಲ. ನೋಡು, ಇನ್ನೊಂದು ನಿಮಿಷದಲ್ಲಿ ಎಲ್ಲವನ್ನೂ ಸಿದ್ಧಪಡಿಸುತ್ತೇನೆ"–ಎಂದು ಹೇಳುತ್ತ ಅಲ್ಲಾವುದೀನನು ತನ್ನ ಕೊಟಡಿಗೆ ಹೋಗಿ ದೀಪವನ್ನು ಉಜ್ಜಿ ಭೂತವನ್ನು ಕರೆದು, ಸುಲ್ತಾನನು ಕೇಳಿದುದನ್ನೆಲ್ಲಾ ಕ್ಷಿಪ್ರವಾಗಿ ಸಿದ್ಧಪಡಿಸಿ ಅಂದಿನ ಸಭೆ ಮುಗಿಯುವುದರೊಳಗಾಗಿ ಎಲ್ಲವನ್ನೂ ಅವನಿಗೆ ಒಪ್ಪಿಸುವಂತೆ ಆಜ್ಞಾಪಿಸಿದನು. "ಅಪ್ಪಣೆಯ ಮೇರೆಗೆ ನಡೆಯುತ್ತೇನೆ" ಎಂದು ಹೇಳಿ ಭೂತವು ಅದೃಶ್ಯವಾಯಿತು. ಒಂದು ಕ್ಷಣಮಾತ್ರದಲ್ಲಿಯೇ ಅಲ್ಲಾವುದೀನನ ಮನೆಯ ಇದಿರಿಗೆ ನಾಲ್ವತ್ತು

ಜನ ಕರಿಯಾಳುಗಳೂ ನಾಲ್ವತ್ತು ಮಂದಿ ಬಿಳಿಯಾಳುಗಳೂ ಗೋಚರಿಸಿದರು. ಒಬ್ಬೊಬ್ಬ ಕರಿಯಾಳಿನ ತಲೆಯ ಮೇಲೆಯೂ ಒಂದೊಂದು ಚಿನ್ನದ ತಟ್ಟೆಯಿದ್ದಿತು. ಅದರ ತುಂಬ ಮುತ್ತು ವಜ್ರ ಕೆಂಪು ಪಚ್ಚೆ ಇವೇ ತುಂಬಿದ್ದುವು. ಅವನು ಅವುಗಳನ್ನೆಲ್ಲಾ ತಮ್ಮ ತಾಯಿಗೆ ತೋರಿ, ''ಅಮ್ಮಾ, ಜಾಗ್ರತೆ ಮಾಡು. ಸುಲ್ತಾನನು ಆಸ್ಥಾನದಿಂದ ಎದ್ದು ಹೋಗುವುದಕ್ಕೆ ಮುಂಚೆ ಇವುಗಳನ್ನು ತೆಗೆಯಿಸಿಕೊಂಡು ಹೋಗು. ಈ ಸಂಬಂಧವನ್ನು ಮಾಡಿ ಕೊಳ್ಳುವುದಕ್ಕೆ ನಾನು ಎಷ್ಟು ಇಷ್ಟವುಳ್ಳವನು, ಎಷ್ಟು ಪ್ರಯತ್ನಗಳನ್ನು ಮಾಡುತ್ತೇನೆ ಎಂಬುದನ್ನು ಅವನೇ ತಿಳಿದುಕೊಳ್ಳಲಿ''-ಎಂದು ಹೇಳಿದನು.

ಅಲ್ಲಾವುದೀನನ ತಾಯಿ ಹೊರಟಳು. ಅವಳ ಹಿಂದೆ ಆಳುಗಳೆಲ್ಲಾ ಹೊರಟರು. ಕೂಡಲೇ ಆ ಮೆರವಣಿಗೆಯನ್ನೂ ನೋಟವನ್ನೂ ನೋಡುವುದಕ್ಕಾಗಿ ಊರ ಜನಗಳೆಲ್ಲಾ ಬೀದಿಗಳಲ್ಲಿ ಗುಂಪುಗುಂಪಾಗಿ ಸೇರಿದರು. ಆ ಆಳುಗಳ ನಡೆಯ ರೀವಿಯೂ ಅವರ ರತ್ನಮಯವಾದ ನಡುವಿನ ಪಟ್ಟಿಯ ತಾಳತಾಳ್ಯವೂ ಅವರ ರೂಮಾಲಿನ ತುರಾಯಿಯ ಡಾಳೂ ಜನಗಳಿಗೆ ಅತ್ಯಾಶ್ಚರ್ಯವನ್ನು ಉಂಟುಮಾಡುತ್ತಿದ್ದುವು. ಒಟ್ಟೇನು? ಅಷ್ಟು ಸೊಗಸಾದ, ಅಷ್ಟು ಶೋಭಾಯಮಾನವಾದ ಆವ ಮೆರವಣಿಗೆಯನ್ನೂ ಸುಲ್ತಾನನ ಅರಮನೆಯಲ್ಲಿ ಕೂಡ ಆರೂ ಕಂಡಿರಲಿಲ್ಲ.

ಆ ರೀತಿಯಾಗಿ ಆಳುಗಳು ಬರುವ ಸಮಾಚಾರವನ್ನು ಸುಲ್ತಾನನಿಗೆ ತಿಳಿಸಿದರು. ''ಅವರು ಬಂದಕೂಡಲೆ ಒಳಗೆ ಕರೆದು ಕೊಂಡು ಬನ್ನಿ'' ಎಂದು ಅಪ್ಪಣೆಯಾಯಿತು. ಅದೇ ಮೇರೆ ಅವರು ಅರಮನೆಯ ಬಾಗಿಲಿಗೆ ಬಂದೊಡನೆ ಒಳಗೆ ಕರೆದು ಕೊಂಡುಹೋದರು. ಒಬ್ಬರ ಹಿಂದೆ ಒಬ್ಬರ ಮೇರೆ ಅವರು ವರಸೆಯಾಗಿ ಒಳಹೊಕ್ಕು, ಅಲ್ಲಿ ಎರಡು ಪಂಗಡವಾಗಿ ಎಡಗಡೆಗೆ ಕೆಲವರೂ ಬಲಗಡೆಗೆ ಕೆಲವರೂ ಹೋಗಿ ಸಿಂಹಾಸನದ ಮುಂದುಗಡೆ ಅರ್ಧಚಂದ್ರಾಕಾರವಾಗಿ ನಿಂತು ಕೊಂಡರು. ಬಳಿಕ ತಟ್ಟೆಗಳನ್ನೆಲ್ಲಾ ಜಂಬುಖಾನೆಯ ಮೇಲಿರಿಸಿ ಹಣೆಮುಟ್ಟಿ ನಮಸ್ಕಾರಮಾಡಿ ಎದ್ದು ತಟ್ಟೆಗಳ ಮೇಲು ಮುಸುಕುಗಳನ್ನು ತೆಗೆದುಹಾಕಿ ಕೈಕಟ್ಟಿಕೊಂಡು ನಿಂತಿದ್ದರು.

ಈ ಮಧ್ಯೆ ಅಲ್ಲಾವುದೀನನ ತಾಯಿ ಸಿಂಹಾಸನದ ಬಳಿಗೆ ಹೋಗಿ ಸುಲ್ತಾನನಿಗೆ ನಮಸ್ಕಾರಮಾಡಿ, ''ಮಹಾಸ್ವಾಮಿ ! ಇವುಗಳು ತಮ್ಮ ಕುಮಾರಿಯವರಿಗೆ ಯೋಗ್ಯವಾದವುಗಳಲ್ಲ ವೆಂದು ನನ್ನ ಮಗನೂ ತಿಳಿದುಕೊಂಡಿದ್ದಾನೆ. ಆದರೂ ತಮ್ಮ ಆಜ್ಞಾನುಸಾರವಾಗಿಯೇ ಇವುಗಳನ್ನು ಕಳುಹಿಸಿರುವುದರಿಂದ ತಾವು ನಮ್ಮಲ್ಲಿ ಕೃಪೆಮಾಡಿ ಇವುಗಳನ್ನು ಅಂಗೀಕರಿಸಿ, ತಮ್ಮ ಕುಮಾರಿಯವರ ಮನಸ್ಸಿಗೆ ಸರಿತರುವಂತೆ ಮಾಡಿಸಬೇಕೆಂದು ಪ್ರಾರ್ಥಿಸುತ್ತಾನೆ''- ಎಂದಳು.

ಆ ರಾಜಾರ್ಹವಾದ ರತ್ನಗಳನ್ನು ನೋಡಿ ಸುಲ್ತಾನನು ಬೆರಗಾಗಿ, ಮನಸ್ಸಿನಲ್ಲಿ ಆವ ಅನುಮಾನವೂ ಇಲ್ಲದೆ ಹೀಗೆಂದು ಉತ್ತರಕೊಟ್ಟನು : "ನೀನು ಹೋಗಿ ನಿನ್ನ ಮಗನಿಗೆ ಹೇಳು. ಅವನನ್ನು ಇದಿರುಗೊಳ್ಳುವುದಕ್ಕೆ ನಾನು ತಲೆಬಾಗಿಲಿನಲ್ಲಿ ಬಂದು ನಿಂತಿದ್ದೇನೆ. ಅವನು ಎಷ್ಟು ಬೇಗ ಇಲ್ಲಿಗೆ ಬಂದು ನಮ್ಮ ಪುತ್ರಿಯನ್ನು ವರಿಸಿದರೆ ನಮಗೆ ಅಷ್ಟು ಸಂತೋಷ."

ಈ ಮಾತನ್ನು ಕೇಳಿ ಅಲ್ಲಾವುದೀನನ ತಾಯಿ ಆನಂದ ಭರಿತಳಾಗಿ ಮನೆಗೆ ಹೊರಟಳು. ಕೂಡಲೆ ಸುಲ್ತಾನನೂ ಸಭೆಯನ್ನು ಮುಗಿಸಿ ಆಸನದಿಂದ ಎದ್ದು ಆ ತಟ್ಟೆಗಳನ್ನೆಲ್ಲಾ ರಾಜಪುತ್ರಿಯ ಕೊಟಡಿಯಲ್ಲಿರಿಸುವಂತೆ ಅಪ್ಪಣೆಕೊಟ್ಟನು. ತಟ್ಟೆಗಳು ಅಲ್ಲಿಗೆ ಹೋದುವು. ಬಳಿಕ ತಾನೂ ಮಗಳೊಡನೆ ಆ ರತ್ನಗಳನ್ನು ನೋಡಬೇಕೆಂದು ಅಲ್ಲಿಗೆ ಹೋದನು. ಆಯೆಂಬತ್ತು ಮಂದಿ ಆಳುಗಳನ್ನೂ ಅಲ್ಲಿಗೆ ಕರೆತಂದರು. ಸುಲ್ತಾನನು ಅವರ ಉಡುಪಿನ ಸೊಗಸನ್ನು ಮಗಳಿಗೆ ವರ್ಣಿಸಿ ಹೇಳುತ್ತ, ಅವಳೂ ಕಣ್ಣಾರ ನೋಡಲೆಂದು ಅವರನ್ನು ಜಾಲಂದರದ ಕೆಳಗೆ ವರಿಸೆ ಯಾಗಿ ನಿಲ್ಲಿಸ ಹೇಳಿದನು.

ಅದೇ ಕಾಲದಲ್ಲಿ ಇತ್ತಲಾಗಿ ಅಲ್ಲಾವುದೀನನ ತಾಯಿಯೂ ಮನೆಗೆ ಬಂದು, "ಮಗು ! ನಿನ್ನ ಇಷ್ಟಾರ್ಥಗಳೆಲ್ಲವೂ ಕೈಗೂಡಿದುವು. ನಿನಗೆ ಸುಲ್ತಾನನು ತನ್ನ ಮಗಳನ್ನು ಕೊಡುವುದಾಗಿ

ಹೇಳಿದನು. ನೀನು ಆವಾಗ ಬರುವೆಯೋ ಎಂದು ಆತುರದಿಂದ ನಿನ್ನನ್ನೇ ಇದಿರುನೋಡುತ್ತಿದ್ದಾನೆ'' ಎಂದಳು.

ಅದಕ್ಕೆ ಆವ ಉತ್ತರವನ್ನೂ ಕೊಡದೆ ಅಲ್ಲಾವುದೀನನು ತನ್ನ ಕೊಟಡಿಗೆ ಹೋಗಿ ದೀಪವನ್ನು ತಿಕ್ಕಿದನು. ಭೂತವು ಇದಿರಿಗೆ ಬಂದು ನಿಂತಿತು. ''ಈಗಲೇ ನನ್ನನ್ನು ಸರ್ವೋತ್ತಮವಾದ ಸ್ನಾನದ ಮನೆಗೆ ಕರೆದುಕೊಂಡು ಹೋಗು. ನನಗೆ ರಾಜ್ಯಾಕ್ಷಿ ರಾಜಯೋಗ್ಯವಾದ ಉಡುಪುಗಳನ್ನು ತಂದುಕೊಡು'' ಎಂದು ಆಜ್ಞಾಪಿಸಿದನು.

ಈ ಮಾತುಗಳು ಅವನ ಬಾಯಿಂದ ಹೊರಟುವೋ ಇಲ್ಲವೋ ಭೂತವು ಅವನನ್ನು ಅದೃಶ್ಯಮಾಡಿ ತಾನೂ ಅದೃಶ್ಯವಾಗಿ ಒಂದು ರಾಜಯೋಗ್ಯವಾದ ಸ್ನಾನಗೃಹಕ್ಕೆ ಕರೆದುಕೊಂಡು ಹೋಯಿತು. ಆ ಮನೆಯು ವಿಚಿತ್ರತರವಾದ ನಾನಾ ವರ್ಣದ ಸಫಟಿಕಶಿಲೆಗಳಿಂದ ನಿರ್ಮಿತವಾಗಿದ್ದಿತು. ಅಲ್ಲಿಗೆ ಅಲ್ಲಾವುದೀನನು ಹೋದಕೂಡಲೆ ಆರೋ ಅದೃಶ್ಯರಾಗಿ ಅವನ ಉಡುಪುಗಳನ್ನು ಕಳೆದು ಪರಿಮಳದ್ರವ್ಯಗಳಿಂದ ಕೂಡಿದ ಸುಖೋಷ್ಣವಾದ ನೀರಿನಿಂದ ಮಜ್ಜನಮಾಡಿಸಿದರು. ಮಜ್ಜನ ವಾದ ಮೇಲೆ ಅವನ ದೇಹಕಾಂತಿಯೇ ಬೇರೆಯಾಯಿತು. ಅವನ ಚರ್ಮವು ಮಕ್ಕಳ ಚರ್ಮದಂತೆ ಮೃದುವಾಗಿ ನಿರ್ಮಲ ವಾಗಿ ಹೊಳಪೇರಿತು. ದೇಹವು ಲಘುವಾಗಿ ಲವಲವಿಕೆಯುಳ್ಳು ದಾಯಿತು. ಸ್ನಾನದ ಮನೆಯಿಂದ ಹೊರಗೆ ಬಂದು ನೋಡಿ ದನು.

ಅಲ್ಲಿ ತನ್ನ ಹಳೆಯ ಬಟ್ಟೆಗಳಿಗೆ ಪ್ರತಿಯಾಗಿ ಅನರ್ಘ್ಯವಾದ ವಸ್ತ್ರಗಳಿದ್ದುವು. ಅವನ್ನು ಕಂಡು ಆತ್ಯಾಶ್ಚರ್ಯಪಟ್ಟನು.

ಆವುಗಳಿಂದಲೇ ಭೂತವು ಅಲ್ಲಾವುದೀನನನ್ನು ಅಲಂಕರಿಸಿ ಅವನ ಮನೆಗೆ ಕರೆದುಕೊಂಡುಹೋಗಿ ಬಿಟ್ಟು90, "ಮುಂದೆ ಏನು ಅಪ್ಪಣೆಯಾಗುತ್ತದೆ" ಎಂದು ಕೇಳಿತು. "ನನಗೆ ಒಂದು ಸೊಗಸಾದ ಕುದುರೆಯನ್ನು ತೆಗೆದುಕೊಂಡು ಬಾ. ಆ ಕುದುರೆಗೆ ಇಲ್ಲಿ ಅರಮನೆಯಲ್ಲಿರುವ ಯಾವ ಕುದುರೆಯೂ ಸರಿಬರಕೂಡದು. ಅದಕ್ಕೆ ತಕ್ಕ ಕಡಿಯಾಣವನ್ನೂ ಹಲ್ಲಣವನ್ನೂ ಹಾಕಿ ಸಿದ್ಧಪಡಿಸು. ಓಂದೆ ಸುಲ್ತಾನನಿಗೆ ಕಾಣಿಕೆತಟ್ಟೆಗಳನ್ನು ಹೊತ್ತುಕೊಂಡು ಹೋಗುವುದಕ್ಕೆ ಆಳುಗಳು ಬಂದಿದ್ದರಲ್ಲಾ; ಅವರ ಹಾಗೆ ದಿವ್ಯವಸ್ತ್ರಗಳಿಂದ ಅಲಂಕೃತರಾದ ಇಪ್ಪತ್ತು ಆಳುಗಳನ್ನು ತಂದುಕೊಡು. ಅದರಲ್ಲಿ ಕೆಲವರು ನನ್ನ ಪಕ್ಕದಲ್ಲಿ ಬರಲಿ; ಕೆಲವರು ಮುಂದುಗಡೆಯಲ್ಲಿ ಎರಡು ವರಿಸೆಯಾಗಿ ನಡೆಯಲಿ. ಇದೂ ಅಲ್ಲದೆ, ನಮ್ಮ ತಾಯಿಯನ್ನು ಉಪಚರಿಸುವದಕ್ಕಾಗಿ ಆರು ಜನ ಅವ್ವೆಯರನ್ನು ಕರೆದುಕೊಂಡು ಬಾ. ಅವರೂ ಸರ್ವಾಭರಣ ಭೂಷಿತರಾಗಿರಲಿ. ನನಗೆ ಹತ್ತು ಚೀಲಗಳಲ್ಲಿ ಹತ್ತು ಸಾವಿರ ವರಹಗಳನ್ನು ತಾ. ಜಾಗ್ರತೆಮಾಡು. ಇವೆಲ್ಲವನ್ನೂ ಈಗಲೇ ತಂದುಕೊಡು" ಎಂದನು.

ಹಾಗೆ ಅಲ್ಲಾವುದೀನನು ಅಪ್ಪಣೆಕೊಟ್ಟ ಕೂಡಲೆ ಭೂತವು ಅದೃಶ್ಯವಾಯಿತು. ಬಳಿಕ ಸ್ವಲ್ಪ ಹೊತ್ತಿಗೆ ಒಂದು ಶ್ಲಾಘ್ಯವಾದ ಕುದುರೆಯು ಸಿದ್ಧವಾಗಿ ಬಂದಿತು. ನಾಲ್ವತ್ತು ಆಳುಗಳು ಬಂದರು. ಹಣದ ಚೀಲವನ್ನು ಹೊತ್ತುಕೊಂಡು ಹತ್ತು ಆಳುಗಳು ಬಂದರು. ಅವರ ಹಿಂದೆ ಅಲ್ಲಾವುದೀನನ ತಾಯಿಗಾಗಿ ನಾನಾ ವಿಧವಾದ ವಸ್ತ್ರಗಳನ್ನು ಹೊತ್ತುಕೊಂಡು ಆರು ಮಂದಿ ಪರಿಚಾರಿಕೆಯರು ಬರುತ್ತಿದ್ದರು. ಭೂತವು ಅವರನ್ನೆಲ್ಲಾ ಕರೆದುಕೊಂಡು ಬಂದು ಅಲ್ಲಾವುದೀನನಿಗೆ ಒಪ್ಪಿಸಿತು.

ಆ ಅವ್ವೆಯರನ್ನು ಅವನು ತನ್ನ ತಾಯಿಯ ಬಳಿಗೆ ಕರೆದುಕೊಂಡು ಹೋಗಿ, "ಅಮ್ಮ, ಈ ಉಡಿಗೆಗಳೆಲ್ಲಾ ನಿನಗಾಗಿ ಬಂದಿವೆ"-ಎಂದು ಹೇಳಿ ಅವುಗಳನ್ನು ಕೊಡಿಸಿದನು. ಆ ಹತ್ತು ಮೊಹರದ ಚೀಲಗಳಲ್ಲಿ ನಾಲ್ಕನ್ನು ಅವಳಿಗೆ ಕೊಟ್ಟನು. ಉಳಿದ ಚೀಲಗಳಲ್ಲಿದ್ದ ವರಹಗಳನ್ನು ಒಬ್ಬನ ಕೈಯಲ್ಲಿ ಕೊಟ್ಟು, "ನಾವು ಅರಮನೆಗೆ ಹೋಗುವಾಗ ಇವುಗಳನ್ನು ಬೀದಿಯಲ್ಲಿ ಹಿಡಿಹಿಡಿ ಯಾಗಿ ಎರಚುತ್ತ ನಡೆಯಿರಿ. ನೀವು ನಮ್ಮ ಮುಂದುಗಡೆ ಒಂದೊಂದು ಕಡೆಗೆ ಮೂರು ಜನರ ಮೇರೆ ಹೋಗಬೇಕು"-ಎಂದು ಆಜ್ಞಾಪಿಸಿದನು.

ಈ ರೀತಿಯಾಗಿ ಅಲ್ಲಾವುದೀನನು ಸುಲ್ತಾನನ ಪ್ರಥಮ ಸಂದರ್ಶನಕ್ಕೆ ಬೇಕಾದ ಹಾಗೆ ಎಲ್ಲವನ್ನೂ ಸಿದ್ಧಮಾಡಿಕೊಂಡ ಬಳಿಕ, ಭೂತವನ್ನು ಕಳುಹಿಸಿಕೊಟ್ಟು, ಕುದುರೆಯನ್ನು ಹತ್ತಿ ಅರಮನೆಯ

ಕಡೆಗೆ ಹೊರಟನು. ಹಿಂದೆ ಅವನು ಆವಾಗಲೂ ಕುದುರೆಯನ್ನು ಹತ್ತಿದವನಲ್ಲವಾದರೂ ಅವನ ಠೀವಿಯನ್ನೂ ಕುದುರೆಯನ್ನು ನಡೆಯಿಸುವ ಕೌಶಲವನ್ನೂ ನೋಡಿ ಬಹಳ ಅನುಭವವುಳ್ಳ ಸವಾರರೂ ಕೂಡ ಆಶ್ಚರ್ಯಪಡುತ್ತಿದ್ದರು. ಬೀದಿಗಳಲ್ಲಿ




ತುಂಬಿಕೊಂಡಿದ್ದ ಜನರು ತಮ್ಮ ಕೋಲಾಹಲದಿಂದ ಗಗನವನ್ನು ತುಂಬಿಸುತ್ತಿದ್ದರು. ಆಗ ಆಳುಗಳು ಜನರ ನಡುವೆ ವರಹಗಳನ್ನು ಹಿಡಿಹಿಡಿಯಾಗಿ ಎರಚಿದರು. ಜನರ ಕೋಲಾಹಲವು ಮತ್ತಷ್ಟು ಹೆಚ್ಚಾಯಿತು.

ಇಷ್ಟು ಸಂಭ್ರಮದೊಡನೆ ಅಲ್ಲಾವುದೀನನು ಅರಮನೆಯ ಬಳಿಗೆ ಬಂದನು. ಆ ವೇಳೆಗೆ ತಲೆಬಾಗಿಲಿಗೆ ಬಂದು ನಿಂತಿದ್ದ ಸುಲ್ತಾನನು ಅಲ್ಲಾವುದೀನನ ರಾಜಾರ್ಹವಾದ ವಸ್ತ್ರಭೂಷಣಾದಿಗಳನ್ನು ನೋಡಿ ಆಶ್ಚರ್ಯಪಟ್ಟನು. ಹೆಚ್ಚು ಮಾತೇಕೆ ? ತಾನು ಕೂಡ ಆ ರೀತಿಯಾಗಿ ಒಂದು ದಿವಸವಾದರೂ ಅಲಂಕರಿಸಿಕೊಂಡಿರಲಿಲ್ಲ. ಅವನ ವಸ್ತ್ರಾಭರಣಗಳು ಮಾತ್ರವೇ ಹಾಗಿರಲಿಲ್ಲ; ಅವನ ಸೌಂದರ್ಯವೂ ಠೀವಿಯೂ ತದನುಸಾರವಾಗಿಯೇ ಇದ್ದುವು. ಅದನ್ನು ನೋಡಿ ಸಂತುಷ್ಟನಾದನು. ಗಾಂಭೀರ್ಯವೂ ಗೌರವವೂ ಅಂಥ ಬಡಹೆಂಗಸಿನ ಹೊಟ್ಟೆಯಲ್ಲಿ ಹುಟ್ಟಿದವನಿಗೆ ಎಲ್ಲಿಂದ ಬಂದೀತೆಂದು ತಿಳಿದುಕೊಂಡಿದ್ದನು. ಆದುದರಿಂದಲೇ ಸುಲ್ತಾನನು ಈಗ ಸಂತುಷ್ಟನಾಗಿ ಅಲ್ಲಾವುದೀನನು ಸಮೀಪಕ್ಕೆ ಬಂದಕೂಡಲೆ ಅವನನ್ನು ಆಲಿಂಗಿಸಿಕೊಂಡು ಕೈಹಿಡಿದು ಕರೆದುಕೊಂಡುಹೋಗಿ ತನ್ನ ಸಿಂಹಾಸನದ ಹತ್ತಿರ ಕುಳ್ಳಿರಿಸಿದನು. ಆಮೇಲೆ ತಾಳ ಮೇಳದೊಡನೆ ಅವನನ್ನು ಒಳಗೆ ಕರೆದುಕೊಂಡು ಹೋಗಿ ರಾಜಾರ್ಹವಾದ ಔತಣವನ್ನು ಮಾಡಿಸಿದನು. ಸುಲ್ತಾನನೂ ಅಲ್ಲಾವುದೀನನೂ ಒಂದು ಪಂಕ್ತಿಯಲ್ಲಿ ಊಟಕ್ಕೆ ಕುಳಿತರು.

ಉಳಿದವರೆಲ್ಲರೂ ತಮ್ಮ ತಮ್ಮ ಗೌರವಕ್ಕೆ ತಕ್ಕಂತೆ ವರಿಸೆಯಾಗಿ ಬೇರೆ ಪಂಕ್ತಿಯಲ್ಲಿ ಕುಳಿತುಕೊಂಡರು. ಊಟವಾದ ಬಳಿಕ ಸುಲ್ತಾನನು ಸಮ್ಮುಖದ ಕರಣಿಕನನ್ನು ಕರೆಸಿ ಮದುವೆಗೆ ಸಂಬಂಧಪಟ್ಟ ಒಪ್ಪಂದವನ್ನು ಬರೆಯ ಹೇಳಿದನು. ಅದಾದ ಮೇಲೆ ಅಲ್ಲಾವುದೀನನ್ನು ಕುರಿತು, ''ತಾವು ಮದುವೆ ಸಾಂಗವಾಗಿ ನಡೆವ ವರೆಗೂ ಅರಮನೆಯಲ್ಲಿಯೇ ದಯೆ ಮಾಡಿಸಿರಕೂಡದೆ?'' ಎಂದು ಕೇಳಿದನು. ಅದಕ್ಕೆ ಅವನು ''ಮಹಾಸ್ವಾಮಿ, ತಾವು ದಯೆಪಾಲಿಸಿದ ಗೌರವವನ್ನು ಹೊಂದುವುದಕ್ಕೆ ನಾನು ಬಹಳವಾಗಿ ಆತುರಪಡುತ್ತಿದ್ದೇನೆ. ಆದರೂ ಮಹಾಸ್ವಾಮಿ ಯವರ ಕುಮಾರಿಯವರನ್ನು ಮನೆ ತುಂಬಿಸಿಕೊಳ್ಳುವುದಕ್ಕೆ ತಕ್ಕ ಮನೆಯಿಲ್ಲ. ಅದನ್ನು ಕಟ್ಟಿಕೊಳ್ಳಲು ಅನುಕೂಲಿಸುವಂತೆ ಅರಮನೆಯ ಹತ್ತಿರ ಅಷ್ಟು ನೆಲವನ್ನು ಕೊಡಿಸುವಂತೆ ಮಾಡಬೇಕು. ಅತಿ ಕ್ಷಿಪ್ರವಾಗಿಯೇ ಕಟ್ಟಿಸಿ ಪೂರೈಸುತ್ತೇನೆ''- ಎಂದನು. ಸುಲ್ತಾನನು ಬೇಕಾದಷ್ಟು ನೆಲವನ್ನು ಕೊಟ್ಟನು. ಆ ಬಳಿಕ ಅಲ್ಲಾವುದೀನನು ಎದ್ದು, ಹುಟ್ಟಿದಂದಿನಿಂದಲೂ ಅರಮನೆಯಲ್ಲಿ ಬೆಳೆದವನಿಗಿಂತಲೂ ಚೆನ್ನಾಗಿ ಮರ್ಯ್ಯಾದೆಮಾಡಿ ಅಲ್ಲಿಂದ ಬೀಳ್ಕೊಂಡು ಜನಗಳ ಆಶೀರ್ವಾದ ಧ್ವನಿಯೊಡನೆ ತನ್ನ ಮನೆಗೆ ಹೊರಟನು. ಅಲ್ಲಿಂದ ಮನೆಗೆ ಬಂದು ಸೇರಿ ಕುದುರೆಯಿಂದಿಳಿದು ಒಳಗೆ ಹೋಗಿ ದೀಪವನ್ನು ತಿಕ್ಕಿ ಪುನಃ ಭೂತವನ್ನು ಬರಮಾಡಿದನು.

ಭೂತವು ಬಂದ ಕೂಡಲೆ, ''ರಾಜಪುತ್ರಿಯ ವಾಸಕ್ಕೆ ತಕ್ಕ ಒಂದು ಅರಮನೆಯನ್ನು ಕಟ್ಟಿಕೊಡು. ಅದಕ್ಕೆ ಸರ್ವೋತ್ತಮವಾದ ಚಂದ್ರಕಾಂತಶಿಲೆಯನ್ನೇ ಉಪಯೋಗಿಸು; ಗೋಡೆಗೆಲ್ಲಾ ಚಿನ್ನ ಬೆಳ್ಳಿಯಿಟ್ಟಿಗೆಗಳನ್ನೇ ಹಾಕು. ಅದರ ಒಂದೊಂದು ಮುಖಕ್ಕೆ ಆರಾರು ಕಿಟಕಿಗಳಿರಲಿ. ಅವುಗಳನ್ನೆಲ್ಲಾ ವಜ್ರ ಕೆಂಪು ಮುತ್ತು ಇವುಗಳಿಂದಲೇ ಕೆತ್ತಿಸು. ಅಷ್ಟೊಂದು ಸೊಗಸಾದ ಕಿಟಕಿಗಳನ್ನು ಆರೂ ಹಿಂದೆ ಕಂಡೇ ಇರಬಾರದು; ಆ ರೀತಿಯಾಗಿ ಮಾಡಿಸು. ಅವುಗಳಲ್ಲಿ ಒಂದು ಕಿಟಕಿಯನ್ನು ಮಾತ್ರ ಅರೆಗೆಲಸದಲ್ಲಿ ನಿಲ್ಲಿಸಿರು. ಅರಮನೆಯ ಒಳಗಡೆಯಲ್ಲಿಯೂ ಹೊರಗಡೆ ಯಲ್ಲಿಯೂ ಒಂದೊಂದು ಮನೋಹರವಾದ ತೋಟ್ಟಿಯಿರಲಿ. ಹಿಂದುಗಡೆ ಒಂದು ಸೊಗಸಾದ ಶೃಂಗಾರವನವನ್ನು ನಿರ್ಮಿಸು. ಇದೆಲ್ಲಕ್ಕಿಂತಲೂ ಮುಖ್ಯವಾಗಿ ಒಂದು ದೃಢವಾದ ಬೊಕ್ಕಸವನ್ನು ಕಟ್ಟಿ ಅದರ ತುಂಬ ಚಿನ್ನಬೆಳ್ಳಿಯನ್ನು ತುಂಬಿಡು. ಅಡಿಗೆಮನೆ ಯನ್ನೂ, ಉಗ್ರಾಣವನ್ನೂ ಕಟ್ಟಿಸು. ಕುದುರೆಯ ಲಾಯವನ್ನು ಕಟ್ಟಿ ಅದರಲ್ಲಿ ಉತ್ತಮವಾದ ಕುದುರೆಗಳನ್ನು ತಂದು ಕಟ್ಟು. ಅವುಗಳಿಗೆ ತಕ್ಕ ಹಾಗೆ ಕುದುರೆಯಾಳುಗಳೂ ಭಕ್ಷಿಕಾರಿಗಳೂ ಸಿದ್ಧವಾಗಿರಲಿ. ನನಗೂ ರಾಜಪುತ್ರಿಗೂ ಸೇವೆಮಾಡುವುದಕ್ಕಾಗಿ ಗಂಡಸರಲ್ಲಿಯೂ ಹೆಂಗಸರಲ್ಲಿಯೂ ನೂರಾರು ಮಂದಿ ಊಳಿಗದವರನ್ನು ಗೊತ್ತುಮಾಡಿರು. ಹೋಗು; ಇವೆಲ್ಲವನ್ನೂ ಜಾಗ್ರತೆಯಾಗಿ ಸಿದ್ಧಪಡಿಸು'' ಎಂದು ಆಜ್ಞಾಪಿಸಿದನು.

ಹೀಗೆ ಅಪ್ಪಣೆಮಾಡುವಾಗ ಸಂಧ್ಯಾಕಾಲವಾಗಿದ್ದಿತು. ಮರುದಿನ ಉದಯಕಾಲದಲ್ಲೆ ಭೂತವು ಇದಿರಿಗೆ ಬಂದು ನಿಂತುಕೊಂಡು, "ಎಲ್ಲವೂ ಸಿದ್ಧವಾಗಿದೆ" ಎಂದು ವಿಜ್ಞಾಪಿಸಿ, ಅಪ್ಪಣೆಯನ್ನು ಪಡೆದು ಅಲ್ಲಾವುದೀನನ್ನು ತಾನು ರಾತ್ರಿ ಕಟ್ಟಿದ



ಅರಮನೆಗೆ ಕರೆದುಕೊಂಡು ಹೋಗಿ ಅವನಿಗೆ ಎಲ್ಲಾ ಭಾಗಗಳನ್ನೂ ತೋರಿಸಿತು. ಎಲ್ಲವನ್ನೂ ನೋಡಿ ಅವನು ಆನಂದ ಪಟ್ಟನು. ಎಲ್ಲವೂ ಅವನು ಹೇಳಿದ ಹಾಗೆಯೇ ಮಾಡಿದ್ದಿತು.

ಆ ವೇಳೆಗೆ ಸುಲ್ತಾನನ ಅರಮನೆಯ ಬಾಗಿಲನ್ನು ತೆರೆದರು. ಅಲ್ಲಿಯ ಕಾವಲುಗಾರರು ಹೊರಗೆ ಬಂದು ನೋಡಿದರೆ, ಇದಿರಿಗೆ ಒಂದು ಅತ್ಯಾಶ್ಚರ್ಯಕರವಾದ ಅರಮನೆ; ಅದರ ಬಾಗಿಲಿಂದ ಅರಮನೆಯ ವರೆಗೂ ಹಾಸಿದ್ದ ದಿವ್ಯವಾದ ರತ್ನಗಂಬಳಿಗಳು. ಅದನ್ನೆಲ್ಲಾ ಕಂಡು ಅವರು ಆಶ್ಚರ್ಯಪಟ್ಟರು. ಕ್ರಮಕ್ರಮವಾಗಿ ಆ ಸುದ್ದಿಯು ಮಂತ್ರಿಗೆ ತಿಳಿಯಿತು. ಅವನು ಸುಲ್ತಾನನಿಗೆ ಅರಿಕೆ ಮಾಡಿದನು. ಅದನ್ನು ಕೇಳಿ ಸುಲ್ತಾನನು, "ಓಹೋ! ಹಾಗಾದರೆ ಅದು ಅಲ್ಲಾವುದೀನನ ಅರಮನೆಯಾಗಿರಬೇಕು. ನಮ್ಮ ಮಗಳಿಗಾಗಿ ಅದನ್ನು ಕಟ್ಟಿಸುವಂತೆ ನಾನೇ ಅಲ್ಲಾವುದೀನನಿಗೆ ಹೇಳಿದ್ದೆನು. ನಮ್ಮನ್ನು ಆಶ್ಚರ್ಯಪಡಿಸುವುದಕ್ಕಾಗಿ ಅವನು ಹೀಗೆ ಮಾಡಿರಬಹುದು. ಒಂದು ರಾತ್ರಿಯಲ್ಲಿ ಏನೇನು ಆಶ್ಚರ್ಯಗಳನ್ನು ಮಾಡಬಹುದೋ, ನಾವೂ ಹೋಗಿ ನೋಡೋಣ"-ಎಂದು ಹೇಳಿದನು.

ಇತ್ತ ಅಲ್ಲಾವುದೀನನು ತನ್ನನ್ನು ಹೊಸ ಅರಮನೆಯಿಂದ ಮೊದಲು ತಾನಿದ್ದ ಮನೆಗೆ ಕರೆದುಕೊಂಡು ಹೋಗುವಂತೆ ಭೂತಕ್ಕೆ ಆಜ್ಞಾಪಿಸಿದನು. ತತ್‌ಕ್ಷಣವೇ ಅದು ಕರೆದುಕೊಂಡು ಹೋಯಿತು. ಕೂಡಲೇ ಅವನು ತನ್ನ ತಾಯಿಯನ್ನು ಕರೆದು, "ಅಮ್ಮಾ, ನೀನು

ಅರಮನೆಗೆ ಹೋಗಿ ರಾಜಪುತ್ರಿಯನ್ನು ಈ ರಾತ್ರಿ ಮನೆತುಂಬಿಸಿ ಕೊಳ್ಳುತ್ತೇವೆಂದು ಹೇಳಿ ಬಾ''- ಎಂದನು. ಅವಳು ಮೊದಲ ದಿವಸ ಹೇಳಿದ್ದಂತೆಯೇ ಪರಿಚಾರಿಣಿಯರೊಡನೆ ಹೊರಟು ಕನ್ಯಾಂತಃಪುರಕ್ಕೆ ಹೋದಳು. ಸ್ವಲ್ಪಹೊತ್ತಿಗೆ ಅಲ್ಲಿಗೆ ಸುಲ್ತಾನನ ಸವಾರಿಯೂ ಬಂದಿತು. ಆಗ ಸುಲ್ತಾನನು ಅವಳ ಆಭರಣಗಳನ್ನು ನೋಡಿ ಅತ್ಯಾಶ್ಚರ್ಯಪಟ್ಟನು. ''ಹಿಂದೆ ಅವಳು ಎಷ್ಟು ಬಡವಳಾಗಿದ್ದಳು! ಈಗ ಇವಳು ಇಟ್ಟುಕೊಂಡಿರುವಷ್ಟು ಒಡವೆಗಳು ನನ್ನ ಮಗಳಿಗೂ ಕೂಡ ಇಲ್ಲವಲ್ಲ! ಶಹಬಾಸ್! ಅಲ್ಲಾವುದೀನನು ಉತ್ತಮಪುರುಷನು. ತನ್ನ ಸಂಪತ್ತಿನಲ್ಲಿಯೂ ತನ್ನ ತಾಯಿಯನ್ನು ಮರೆಯದೆ ಇಷ್ಟು ಗೌರವವಾಗಿ ಕಾಪಾಡುತ್ತಾನೆ'' ಎಂದು ಎಣಿಸಿಕೊಂಡನು.

ಇತ್ತ ಕಡೆ ಅಲ್ಲಾವುದೀನನು ತಮ್ಮ ತಾಯಿ ಹೊರಟು ಹೋದಮೇಲೆ ತನ್ನ ಕುದುರೆಯನ್ನು ಹತ್ತಿ ಎಂದಿನಂತೆ ತನ್ನ ಪರಿಜನದೊಡನೆ ಹೊರಟು, ಬಲುಸಂಭ್ರಮದೊಡನೆ ಅರಮನೆಗೆ ಬಂದು ಸೇರಿದನು. ಹೊರಡುವಾಗ ತನ್ನ ದೀಪವನ್ನೂ ಉಂಗುರ ವನ್ನೂ ಮರೆಯದೆ ಸಂಗಡ ತೆಗೆದುಕೊಂಡು ಹೋದನು. ಆ ದೀಪವಲ್ಲವೆ ಅವನಿಗೆ ಅಷ್ಟು ಐಶ್ವರ್ಯವನ್ನು ಕೊಟ್ಟುದು? ಅದನ್ನು ಹೇಗೆ ತಾನೆ ಮರೆತಾನು? ಅರಮನೆಯಲ್ಲಿ ಸುಲ್ತಾನನು ಬಹಳ ವಿಜೃಂಭಣೆಯೊಡನೆ ವಿವಾಹವನ್ನು ಮಾಡಿಕೊಟ್ಟನು.

ಪ್ರಸ್ತುತವು ಶಾಸ್ತ್ರೋಕ್ತ ಕ್ರಮವಾಗಿ ಬೆಳೆಯಿತು. ರಾಜಪುತ್ರಿಯು ತಾಯಿತಂದೆಗಳಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದು ಗಂಡನ ಮನೆಗೆ ಹೊರಟಳು. ಮುಂದುಗಡೆ ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದುವು. ಹಿಂದುಗಡೆ ನೂರಾರು ಮಂದಿ ಭಲ್ಲೆಯದವರು ವರಿಸೆಯಾಗಿ ನಡೆಯುತ್ತಿದ್ದರು. ಎರಡು ಕಡೆಯಲ್ಲಿಯೂ ಸಾಲುಸಾಲಾಗಿ ಪಂಜುಗಳೂ ಇಲಾಲಿಗಳೂ ಬೆಳಗುತ್ತಿದ್ದುವು. ಎರಡು ಅರಮನೆಗಳ ಗೋಡೆಗಳೂ ಎಲ್ಲೆಲ್ಲೂ ದೀಪಗಳಿಂದ ಜಾಜ್ವಲ್ಯಮಾನವಾಗಿದ್ದುವು. ಅಷ್ಟೊಂದು ಬೆಳಕಿಗೆ ರಾತ್ರಿಯೇ ಹಗಲಾದಂತೆ ಇದ್ದಿತು. ಆಗ ಮಹಾವಿಭವದಿಂದ ರಾಜಪುತ್ರಿಯು ದಂತದ ಪಾಲಕಿಯನ್ನು ಹತ್ತಿದಳು. ಹಿಂದುಗಡೆ ನೂರಾರು ಜನ ಅವ್ವೆಯರೂ ಸಖಿಗಳೂ ಹೊರಟರು. ಅಲ್ಲಾವುದೀನನ ತಾಯಿಯೂ ಪಾಲಕಿಯನ್ನು ಹತ್ತಿ ತನ್ನ ಪರಿಜನದೊಡನೆ ಹೊರಟಳು. ಎಲ್ಲರೂ ಅಲ್ಲಿ ಹಾಸಿದ್ದ ರತ್ನ ಗಂಬಳಿಗಳ ಮೇಲೆಯೇ ಮೆರವಣಿಗೆ ಹೊರಟು ಹೊಸ ಅರಮನೆಗೆ ಬಂದು ಸೇರಿದರು. ಅಲ್ಲಾವುದೀನನು ಬಾಗಿಲಿಗೆ ಬಂದು ರಾಜಪುತ್ರಿಯನ್ನು ಒಳಗೆ ಕರೆದುಕೊಂಡು ಹೋದನು.

ಅಲ್ಲಿ ಭೋಜನಕ್ಕೆ ಬೇಕಾದ ಪದಾರ್ಥಗಳೆಲ್ಲಾ ಸಿದ್ಧವಾಗಿ ದ್ದುವು. ಚಿನ್ನದ ತಳಿಗೆಗಳಲ್ಲಿ ನಾನಾವಿಧವಾದ ಭಕ್ಷ್ಯಭೋಜ್ಯಗಳನ್ನು ತುಂಬಿ ಇಟ್ಟಿದ್ದರು. ಪಡಿಗಗಳೂ ಕಾಳಂಜಿಗಳೂ ಬಟ್ಟಲುಗಳೂ ಎಲ್ಲವೂ ಚಿನ್ನದಿಂದಲೇ ಮಾಡಿದ್ದುವು. ಅವುಗಳಲ್ಲಿ ಮಾಡಿದ್ದ ಸಣ್ಣ

ಕೆಲಸಗಳು ಬಹು ಚತುರರಾದ ಶಿಲ್ಪಿಗಳು ಮಾಡಿದ್ದುವು. ಒಂದೇ ಕಡೆಯಲ್ಲಿ ಕೂಡಿಟ್ಟ ಅಷ್ಟೊಂದು ಐಶ್ವರ್ಯವನ್ನೂ ನೋಡಿ ರಾಜಪುತ್ರಿಯು ಪರಮಾಶ್ಚರ್ಯಭರಿತಳಾಗಿ, "ಆರ್ಯಪುತ್ರ! ಈ ಪ್ರಪಂಚದಲ್ಲಿ ನಮ್ಮ ತಂದೆಯ ಅರಮನೆಯಷ್ಟು ಸುಂದರವಾದ ಅರಮನೆಯೇ ಇಲ್ಲವೆಂದು ತಿಳಿದಿದ್ದೆನು. ಈ ಅರಮನೆಯ ಇದೊಂದು ತೊಟ್ಟಿಯನ್ನು ನೋಡಿದ ಮಾತ್ರದಿಂದಲೇ, ನಾನು ಅರಿಯದೆ ಮೋಸ ಹೋಗಿದ್ದೆನೆಂಬುದು ಚೆನ್ನಾಗಿ ಗೊತ್ತಾಯಿತು" ಎಂದಳು.

ಭೋಜನವಾದ ಮೇಲೆ ನರ್ತಕಿಯರು ಬಂದು ದೇಶಾಚಾರದ ಮೇರೆ ವಧೂವರರನ್ನು ಕೊಂಡಾಡಿ ಹಾಡುಗಳನ್ನು ಹಾಡುತ್ತ, ಕುಣಿದರು. ಮಾರನೆಯ ದಿನ ಬೆಳಗ್ಗೆ ಅಲ್ಲಾವುದೀನನು ಕುದುರೆಯನ್ನು ಹತ್ತಿಕೊಂಡು ಅರಮನೆಗೆ ಹೋಗಿ, ಸುಲ್ತಾನನನ್ನೂ ಮಂತ್ರಿಯನ್ನೂ ಆಸ್ಥಾನದ ಇತರ ಉದ್ಯೋಗಸ್ಥರನ್ನೂ ತಮ್ಮ ಅರಮನೆಯಲ್ಲಿ ಊಟಕ್ಕೆ ಹೇಳಿದನು. ಸುಲ್ತಾನನು ಅದಕ್ಕೆ ಸಮ್ಮತಿಸಿ ಮಂತ್ರಿಯೊಡನೆ ಅಲ್ಲಾವುದೀನನ ಸಂಗಡವೇ ಹೊರಟನು. ಇತರರೆಲ್ಲರೂ ಹಿಂದುಗಡೆ ಬಂದರು.

ಅಲ್ಲಾವುದೀನನ ಮನೆಯ ಹತ್ತಿರ ಬರುಬರುತ ಸುಲ್ತಾನನ ಆಶ್ಚರ್ಯವು ಹೆಚ್ಚಿತು. ಅವನು ಮನೆಯನ್ನು ಪ್ರವೇಶಿಸಿ ತೊಟ್ಟಿಗೆ ಬಂದು ಅಲ್ಲಿಯ ನವರತ್ನಮಯವಾದ ಕಿಟಕಿಗಳನ್ನು ನೋಡಿದಾಗ ಅವನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಆಗ ಅವನು ಅಲ್ಲಾವುದೀನನ್ನು

ನೋಡಿ, "ನಿಮ್ಮ ಅರಮನೆಯು ಪ್ರಪಂಚಕ್ಕೇ ಒಂದಾಶ್ಚರ್ಯಕರವಾದ ವಸ್ತು. ಅಬ್ಬಬ್ಬ! ಈ ಬೆಳ್ಳಿಯ ಗೋಡೆ ಗಳೂ ಈ ಕೆಂಪು ವಜ್ರದ ಕಿಟಕಿಗಳೂ ಇನ್ನೆಲ್ಲಿ ತಾನೇ ಉಂಟು? ಇಷ್ಟು ಸೊಗಸಾದ ತೊಟ್ಟಿಯಲ್ಲಿ ಈ ಒಂದು ಕಿಟಕಿಯನ್ನು ಮಾತ್ರ ಅರೆಗೆಲಸದಲ್ಲಿ ನಿಲ್ಲಿಸಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ" ಎಂದನು.

"ಮಹಾಸ್ವಾಮಿ, ತಾವು ಇದನ್ನು ಪೂರ್ತಿಮಾಡಿಸಿಕೊಡಬೇಕೆಂಬ ಆಸೆಯಿಂದ ಬೇಕೆಂದೇ ಅರೆಗೆಲಸದಲ್ಲಿ ನಿಲ್ಲಿಸಿದ್ದೇನೆ" ಎಂದು ಅಲ್ಲಾವುದೀನನು ಹೇಳಿದನು.

"ಬಹಳ ಸಂತೋಷ. ಅದನ್ನು ಜಾಗ್ರತೆಯಲ್ಲಿಯೇ ಪೂರೈಸುವಂತೆ ಈಗಲೇ ಅಪ್ಪಣೆಮಾಡುತ್ತೇನೆ" ಎಂದು ಸುಲ್ತಾನನು ಉತ್ತರಕೊಟ್ಟು, ವರ್ತಕರನ್ನೂ ಕೆಲಸಗಾರರನ್ನೂ ಕರೆತರುವಂತೆ ಆಜ್ಞೆಮಾಡಿದನು. ಬಳಿಕ ಎಲ್ಲರೂ ಊಟಕ್ಕೆ ಕುಳಿತರು. ಊಟವಾಯಿತು. ಸುಲ್ತಾನನು ಸುಖಾಸನದಲ್ಲಿ ಕುಳಿತಿದ್ದನು. ಆಗ ರತ್ನಪಡಿ ವರ್ತಕರೂ ಚಿನ್ನ ಬೆಳ್ಳಿಯ ಕೆಲಸದವರೂ ಬಂದರೆಂದು ತಿಳಿಸಿದರು. ಕೂಡಲೆ ಅವನು ತೊಟ್ಟಿಗೆ ಬಂದು ಅವರಿಗೆ ಆ ಅರೆಗೆಲಸದ ಕಿಟಕಿಯನ್ನು ತೋರಿಸಿ, "ಉಳಿದ ಕಿಟಕಿಗಳ ಹಾಗೆಯೇ ಇದನ್ನು ಪೂರೈಸಿರಿ. ಅವುಗಳನ್ನು ಚೆನ್ನಾಗಿ ನೋಡಿಕೊಂಡು ಅದೇ ಮಾದರಿಯಲ್ಲಿ ಜಾಗ್ರತೆಯಾಗಿ ಪೂರೈಸಿಬಿಡಿರಿ" ಎಂದು ಆಜ್ಞಾಪಿಸಿದನು.

ಅವರು ಕಿಟಕಿಗಳನ್ನೆಲ್ಲಾ ಚೆನ್ನಾಗಿ ಪರೀಕ್ಷೆಮಾಡಿ ನೋಡಿ, ಒಟ್ಟಿಗೆ ಆಲೋಚನೆಮಾಡಿಕೊಂಡು, ಸುಲ್ತಾನನ ಬಳಿಗೆ ಹೋಗಿ, ''ಮಹಾಸ್ವಾಮಿ! ತಮ್ಮ ಅಪ್ಪಣೆಯನ್ನು ಶಿರಸಾವಹಿಸಿ ನಮ್ಮ ಕೈಯಲ್ಲಾದ ಮಟ್ಟಿಗೂ ಚೆನ್ನಾಗಿಯೂ ಜಾಗ್ರತೆಯಾಗಿಯೂ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ನಮ್ಮಲ್ಲಿ ಈ ದೊಡ್ಡ ಕೆಲಸಕ್ಕೆ ಸಾಲುವಷ್ಟು ರತ್ನಗಳಿಲ್ಲ'' ಎಂದರು. ''ನಮ್ಮಲ್ಲಿ ಬೇಕಾದಷ್ಟು ರತ್ನಗಳಿವೆ. ಅರಮನೆಗೆ ಹೋಗಿ ನಿಮಗೆ ಬೇಕಾದವುಗಳನ್ನು ಆರಿಸಿಕೊಳ್ಳಿರಿ'' ಎಂದು ಸುಲ್ತಾನನು ಪ್ರತ್ಯುತ್ತರವನ್ನು ಕೊಟ್ಟನು.

ಆದಕ್ಕಾಗಿ ಬೊಕ್ಕಸದಿಂದ ರತ್ನಗಳನ್ನು ತರುವಂತೆ ಅಪ್ಪಣೆ ಕೊಟ್ಟನು. ಎಲ್ಲವನ್ನೂ ತಂದಿಟ್ಟರು. ಅವುಗಳಲ್ಲಿ ಅನೇಕವನ್ನು ಆರಿಸಿಕೊಂಡರು; ಅದರಲ್ಲಿಯೂ ಮುಖ್ಯವಾಗಿ ಅಲ್ಲಾವುದೀನನು ಒಪ್ಪಿಸಿದ ರತ್ನಗಳನ್ನೇ ವಿಶೇಷವಾಗಿ ತೆಗೆದುಕೊಂಡರು. ಅವುಗಳನ್ನೆಲ್ಲಾ ಉಪಯೋಗಿಸಿದರೂ ಕಿಟಕಿಯ ಕೆಲಸ ಪೂರೈಸಲಿಲ್ಲ. ಅರಮನೆಯ ರತ್ನಗಳೆಲ್ಲಾ ಮುಗಿದುಹೋದುವು. ಮಂತ್ರಿಯ ಬೊಕ್ಕಸದಿಂದಲೂ ಸಾಲ ತೆಗೆದುಕೊಂಡರು. ಅವೂ ತೀರಿ ಹೋದುವು. ಆದರೂ ಕೆಲಸ ಮಾತ್ರ ಅರೆವಾಸಿಯೂ ಆಗಲಿಲ್ಲ.

ಸುಲ್ತಾನನು ಎಷ್ಟೇ ಪ್ರಯತ್ನಮಾಡಿದರೂ ಆ ಕಿಟಕಿಯನ್ನು ಪೂರೈಸಲಾರನೆಂದು ಅಲ್ಲಾವುದೀನನಿಗೆ ತಿಳಿದೇ ಇದ್ದಿತು. ಆದುದರಿಂದ ಅವನು ಆ ಕೆಲಸಗಾರರನ್ನು ಕರೆಯಿಸಿಕೊಂಡು, ''ನಿಮ್ಮ ಕೆಲಸವು ಇಷ್ಟಕ್ಕೆ ಸಾಕು; ನೀವು ಹಾಕಿರುವ ರತ್ನಗಳನ್ನೆಲ್ಲಾ

ತೆಗೆದು ಅರಮನೆಗೂ ಮಂತ್ರಿಗೂ ಹಿಂತಿರುಗಿ ಕಳುಹಿಸಿಬಿಡಿ'' ಎಂದು ಆಜ್ಞಾಪಿಸಿದನು. ಅವರು ಆರು ವಾರಗಳವರೆಗೂ ತಾವೇ ಕಷ್ಟಪಟ್ಟು ಮಾಡಿದುದನ್ನು ಒಂದೆರಡು ಘಂಟೆಯೊಳಗಾಗಿ ಕಳಚಿಬಿಟ್ಟು ರತ್ನಗಳನ್ನು ತೆಗೆದುಕೊಂಡು ಹೊರಟು ಹೋದರು. ಆ ತೋಟ್ಟಿಯಲ್ಲಿ ಅಲ್ಲಾವುದೀನನು ಒಬ್ಬನೇ ನಿಂತನು. ಆಗ ಅವನು ತನ್ನಲ್ಲಿದ್ದ ದೀಪವನ್ನು ತೆಗೆದು ತಿಕ್ಕಿದನು. ಭೂತವು ಇದಿರಿಗೆ ಬಂದು ನಿಂತುಕೊಂಡಿತು. ''ಇಪ್ಪತ್ತನಾಲ್ಕು ಕಿಟಕಿಗಳಲ್ಲಿ ಒಂದನ್ನು ಅರೆಗೆಲಸದಲ್ಲಿ ನಿಲ್ಲಿಸುವಂತೆ ನಿನಗೆ ಹೇಳಿದ್ದಂತೆ ನೀನು ಒಂದನ್ನು ಹಾಗೆಯೇ ನಿಲ್ಲಿಸಿದ್ದೆಯಷ್ಟೆ. ಈಗ ಅದನ್ನೂ ಉಳಿದ ಕಿಟಕಿಗಳಂತೆಯೇ ಪೂರೈಸಿಕೊಡು'' ಎಂದನು. ''ಅಪ್ಪಣೆ'' ಎಂದು ಭೂತವು ಕಣ್ಮರೆಯಾಯಿತು. ಅಲ್ಲಾವುದೀನನು ಹೊರಟು ಹೋದನು. ಸ್ವಲ್ಪಹೊತ್ತು ಬಿಟ್ಟುಕೊಂಡು ಬಂದು ನೋಡಿದರೆ, ಆ ಕಿಟಕಿಯೂ ಪೂರ್ತಿಯಾಗಿ ಉಳಿದ ಕಿಟಕಿಗಳ ಹಾಗೆಯೇ ಹೊಳೆಯುತ್ತಿದ್ದಿತು.

ಇಷ್ಟರಲ್ಲಿಯೇ ಕೆಲಸಗಾರರು ಹೋಗಿ ಕೆಲಸವನ್ನು ನಿಲ್ಲಿಸು ವಂತೆ ಅಪ್ಪಣೆಯಾಯಿತೆಂದು ಸುಲ್ತಾನನಿಗೆ ಅರಿಕೆಮಾಡಿದರು. ಅದನ್ನು ಕೇಳಿ, ಹಾಗೆ ನಿಲ್ಲಿಸುವುದಕ್ಕೆ ಕಾರಣವೇನೆಂದು ವಿಚಾರಿಸಲಿಕ್ಕೆ ಸುಲ್ತಾನನೇ ಕುದುರೆಯ ಮೇಲೆ ಅಲ್ಲಿಗೆ ಬಂದನು. ಅದನ್ನು ಕಂಡು ಅಲ್ಲಾವುದೀನನು ಬಾಗಿಲಿಗೆ ಬಂದು ಇದಿರುಗೊಂಡು ಒಳಗೆ ತೊಟ್ಟಿಗೆ ಕರೆದುಕೊಂಡುಹೋದನು. ಸುಲ್ತಾನನು ಆ ಕಿಟಕಿಯನ್ನು



ನೋಡಿದನು. ಅದೂ ಎಲ್ಲಾ ಕಿಟಕಿಗಳ ಹಾಗೆಯೇ ಕೆಲಸ ಪೂರೈಸಿ ರತ್ನಗಳಿಂದ ತಳತಳನೆ ಹೊಳೆಯುತ್ತಿದ್ದಿತು. ಅವನಿಗೆ ಅತ್ಯಾಶ್ಚರ್ಯವಾಯಿತು. "ಅಬ್ಬಬ್ಬ! ನೀನು ಸಾಮಾನ್ಯ ಮನುಷ್ಯನಲ್ಲ. ನಿನಗೆ ಸಮಾನರು ಆರೂ ಇಲ್ಲ. ಇಷ್ಟೊಂದು ಕೆಲಸವನ್ನು ಕಣ್ಣುಮುಚ್ಚಿ ತೆಗೆವುದರಲ್ಲಿ ಮಾಡಿಬಿಟ್ಟೆಯಲ್ಲ. ನಿನ್ನ ಸಂಗತಿ ತಿಳಿದ ಹಾಗೆಲ್ಲಾ ನನಗೆ

ಆಶ್ಚರ್ಯವು ಉಕ್ಕುತ್ತಿದೆ'' ಎಂದು ಹೇಳಿ, ಸ್ವಲ್ಪ ಹೊತ್ತಿದ್ದು. ಅರಮನೆಗೆ ಹೊರಟುಹೋದನು.

ಹೀಗೆಯೇ ಅನೇಕ ಕಾಲಗಳು ಕಳೆದುಹೋದುವು. ಅಲ್ಲಾವುದೀನನು ತನ್ನ ಅರಮನೆಯಲ್ಲಿಯೇ ಕಾಲವನ್ನೆಲ್ಲಾ ಕಳೆಯುತ್ತಿರಲಿಲ್ಲ; ಆಗಾಗ್ಗೆ ಕುದುರೆಯ ಮೇಲೆ ಸವಾರಿ ಹೊರಡುತ್ತಿದ್ದನು. ಹೊರಟಾಗಲೆಲ್ಲಾ ಇಬ್ಬರು ಊಳಿಗದವರು ಚೀಲದಲ್ಲಿ ಹಣವನ್ನು ಹೊತ್ತುಕೊಂಡು ಗುಂಪಿನಲ್ಲಿ ಹಿಡಿಹಿಡಿಯಾಗಿ ಎರಚುತ್ತ ಬೀದಿಗಳಲ್ಲಿಯೂ ಚೌಕಗ ಳಲ್ಲಿಯೂ ಅವನ ಜತೆಯಲ್ಲಿ ಬರುತ್ತಿದ್ದರು.

ಈ ರೀತಿಯಾಗಿ ಅಲ್ಲಾವುದೀನನು ಬಹುಕಾಲ ಸುಖ ವಾಗಿದ್ದನು. ಹೀಗಿರುತ್ತಿರಲು ಒಂದು ದಿವಸ ಆ ಊರಿಗೆ ಆಫ್ರಿಕಾ ಮಂತ್ರವಾದಿ ಬಂದನು. ಅವನಿಗೆ ಅಲ್ಲಾವುದೀನನ ಯೋಚನೆಯೇ ಇರಲಿಲ್ಲ. ಅಲ್ಲಾವುದೀನನು ಗವಿಯಲ್ಲಿಯೇ ಸಿಕ್ಕಿಕೊಂಡು ಸತ್ತುಹೋದನೆಂದು ತಿಳಿದುಕೊಂಡಿದ್ದನು. ಆದುದರಿಂದ ಅಲ್ಲಾವುದೀನನ ಅರಮನೆಯನ್ನೂ ಅವನ ರಾಜಭೋಗವನ್ನೂ ನೋಡಿದಾಗ ಅವನಿಗೆ ಅತ್ಯಾಶ್ಚರ್ಯವೂ ದುಃಖವೂ ಉಂಟಾಯಿತು. ಅಲ್ಲಾವುದೀನನ ಅಷ್ಟೊಂದು ಭಾಗ್ಯವೂ ದೀಪದ ಭೂತಗಳಿಂದಲೇ ಆಗಿರಬೇಕೆಂದು ಊಹಿಸಿಕೊಂಡನು. ಬಳಿಕ ಆ ದೀಪವು ಎಲ್ಲಿದೆಯೆಂದು ವಿಚಾರಿಸಿದನು. ಅದು ಅರಮನೆಯಲ್ಲಿರುವುದಾಗಿ ತಿಳಿಯಬಂದಿತು. ''ಶಹಬಾಸ್! ದೀಪವು ಇನ್ನೂ ಇದೆ. ಅದನ್ನು

ಉಪಾಯದಿಂದ ಸಂಗ್ರಹಿಸಿ ಅಲ್ಲಾವುದೀನನ್ನು ಪೂರ್ವಸ್ಥಿತಿಗೆ ಕಳುಹಿಸುತ್ತೇನೆ'' ಎಂದು ಆಲೋಚಿಸಿಕೊಂಡನು.

ಈ ಸಮಯದಲ್ಲಿ ಅಲ್ಲಾವುದೀನನು ಊರಲ್ಲಿರಲಿಲ್ಲ. ಅವನು ಒಂದು ವಾರದ ವರೆಗೂ ಬೇಟೆಯಾಡುವುದಕ್ಕೆ ಹೋಗಿ ದ್ದನು. ಅವನು ಹೊರಟುಹೋಗಿ ಮೂರು ದಿವಸವಾಗಿದ್ದಿತು. ಅದನ್ನೆಲ್ಲಾ ಮಂತ್ರವಾದಿಯು ವಿಚಾರಿಸಿ ತಿಳಿದುಕೊಂಡನು. ಕೂಡಲೆ ತಾನು ಮಾಡಬೇಕಾದ ಏರ್ಪಾಡುಗಳನ್ನೆಲ್ಲಾ ಗೊತ್ತು ಮಾಡಿಕೊಂಡು ತಾಮ್ರದ ಕೆಲಸದವನ ಬಳಿಗೆ ಹೋಗಿ, ''ಹನ್ನೆರಡು ತಾಮ್ರದ ದೀವಿಗೆಗಳನ್ನು ಕ್ರಯಕ್ಕೆ ಕೊಡುತ್ತೀಯಾ'' ಎಂದು ಕೇಳಿದನು. ಅವನಲ್ಲಿ ಅಷ್ಟೊಂದಿರಲಿಲ್ಲ. ''ನಾಳೆಯ ವರೆಗೂ ಕಾದಿದ್ದರೆ ಕೊಡುತ್ತೇನೆ'' ಎಂದು ಅವನು ಹೇಳಿದನು. ಅದಕ್ಕೆ ಒಪ್ಪಿಕೊಂಡು, ''ಹಾಗೆಯೇ ಆಗಲಿ. ಅವುಗಳೆಲ್ಲಾ ಸೊಗಸಾಗಿರಬೇಕು. ಅವುಗಳಿಗೆಲ್ಲಾ ಮಿರುಗು ಹಾಕಿರು. ನಾಳೆ ಬಂದು ಕೊಂಡು ಕೊಳ್ಳುತ್ತೇನೆ'' ಎಂದು ಹೇಳಿ ಹೊರಟು ಹೋದನು.

ಬಳಿಕ ಅವನು ಮಾರನೆಯ ದಿನ ಹೊತ್ತಿನಂತೆ ಅಂಗಡಿಗೆ ಹೋಗಿ ಕ್ರಯವನ್ನು ಕೊಟ್ಟು ಹನ್ನೆರಡು ದೀಪಗಳನ್ನೂ ಕೊಂಡುಕೊಂಡನು. ಅವುಗಳನ್ನೆಲ್ಲಾ ಒಂದು ಪುಟ್ಟಿಯಲ್ಲಿರಿಸಿ ಅದನ್ನು ಕೈಗೆ ನೇತುಹಾಕಿಕೊಂಡು ಅಲ್ಲಾವುದೀನನ ಅರಮನೆಯ ಮುಂದುಗಡೆ, ''ಹಳೆಯ ದೀಪವನ್ನು ಕೊಟ್ಟು ಹೊಸ ದೀಪವನ್ನು ತೆಗೆದುಕೊಳ್ಳುತ್ತೀರಾ'' ಎಂದು ಕೂಗುತ್ತಾ ತಿರುಗಾಡುತ್ತಿದ್ದನು.

ಅವನು ಹೀಗೆ ಕೂಗುತ್ತಾ ಹೋಗಲು, ಅವನ ಹಿಂದೆ ನೂರಾರು ಮಂದಿ ಹುಡುಗರು ಸೇರಿ, ಅವನನ್ನು ಅಣಕಿಸುತ್ತಾ ಹೋಗುತ್ತಿದ್ದರು. ''ಇವನು ಹಳೆಯ ದೀಪಕ್ಕೆ ಪ್ರತಿಯಾಗಿ ಹೊಸ ದೀಪವನ್ನು ಕೊಡುತ್ತಾನಂತೆ. ಇವನೇನು ಹುಚ್ಚನೋ ಬೆಪ್ಪನೋ'' ಎಂದು ಜನಗಳು ಆಡಿಕೊಳ್ಳುತ್ತಿದ್ದರು.

ಆದರೂ ಅವನು ಅದೇ ಮೇರೆಗೆ ಕೂಗುತ್ತ ಅರಮನೆಯ ಮುಂದುಗಡೆ ಹಿಂದಕ್ಕೂ ಮುಂದಕ್ಕೂ ತಿರುಗಾಡುತ್ತಿದ್ದನು. ಅವನ ಹಿಂದೆ ಹುಡುಗರು ಮುತ್ತಿಕೊಂಡು ಗಲಭೆ ಮಾಡುತ್ತ ಇದ್ದರು. ಈ ಕೂಗು ರಾಜಪುತ್ರಿಯ ಕಿವಿಗೆ ಬಿದ್ದಿತು. ಅವಳು ''ಅದೇನು ದೊಂಬಿ'' ವಿಚಾರಿಸಿಕೊಂಡು ಬಾ'' ಎಂದು ಒಬ್ಬ ಸೇವಕಳನ್ನು ಕಳುಹಿಸಿದಳು.

ಆ ಸೇವಕಳು ಹೋಗಿ ನೋಡಿ, ಗಟ್ಟಿಯಾಗಿ ನಗುತ್ತ ಒಳಗೆ ಬಂದಳು. ''ಇದೇನೆ? ಇಷ್ಟೊಂದು ನಗು'' ಎಂದು ರಾಜಪುತ್ರಿಯು ಗದ್ದರಿಸಿಕೊಂಡಳು. ''ಅಮ್ಮಾ! ಒಬ್ಬ ಮುದುಕನು ಒಂದು ಪುಟ್ಟಿಯ ತುಂಬ ಸೊಗಸಾದ ಹೊಸ ದೀಪಗಳನ್ನಿಟ್ಟು ಕೊಂಡು, 'ಹಳೆಯ ದೀಪಗಳನ್ನು ತೆಗೆದುಕೊಂಡು ಹೊಸ ದೀಪಗಳನ್ನು ಕೊಡುತ್ತೇನೆ; ಬೇಕೆ?' ಎಂದು ಕೂಗಿಕೊಳ್ಳುತ್ತಿದ್ದಾನೆ. ಇದನ್ನು ನೋಡಿ ನನಗೆ ಬಲು ನಗು ಬಂದಿತು'' ಎಂದಳು. ಅದನ್ನೆಲ್ಲಾ ಕೇಳುತ್ತಿದ್ದ ಒಬ್ಬ ಆಳು, ''ನೀನು ದೀಪದ ಮಾತು ಎತ್ತುತ್ತಲೇ ನನಗೆ ನೆನಪಿಗೆ ಬಂದಿತು. ಯಜಮಾನರವರ ಕೊಟಡಿಯಲ್ಲಿ ಒಂದು

ಹಳೆಯ ದೀಪವಿದೆ. ಅದು ಅವ್ವನವರಿಗೆ ಗೊತ್ತುಂಟೋ ಇಲ್ಲವೊ ತಿಳಿಯದು. ಅದು ಆರ ದೀಪವೋ ತಿಳಿಯದು. ಆರದಾದರೆ ತಾನೇ ಏನು? ಅವ್ವನವರು ಇಷ್ಟ ಪಟ್ಟರೆ ಅದನ್ನು ಕೊಟ್ಟು, ಇವನು ಹೊಸ ದೀಪವನ್ನು ಕೊಡುತ್ತಾನೆಯೊ ಇಲ್ಲವೊ ಪರೀಕ್ಷೆಮಾಡಿ ನೋಡಬಹುದು'' ಎಂದನು.

ರಾಜಕುಮಾರಿಯು ಆ ದೀಪದ ಬೆಲೆಯನ್ನು ಕಾಣಳು. ಆದುದರಿಂದ ಆ ವಿನೋದವನ್ನು ನೋಡಬೇಕೆಂದು ಆಶೆಪಟ್ಟು, ''ಅದನ್ನು ಕೊಟ್ಟು ಹೊಸ ದೀಪವನ್ನು ತೆಗೆದುಕೊಂಡು ಬಾ'' ಎಂದು ಆಜ್ಞಾಪಿಸಿದಳು. ಒಡನೆ ಅವನು ದೀಪವನ್ನು ತೆಗೆದು ಕೊಂಡು ಹೊರಬಾಗಿಲಿಗೆ ಹೋದನು. ಆ ವೇಳೆಗೆ ಅಲ್ಲಿಗೆ ಮುದುಕನೂ ಬಂದಿದ್ದನು. ಆಳು ಅವನನ್ನು ಕೂಗಿ ದೀಪವನ್ನು ತೋರಿಸಿ, ''ಇದನ್ನು ತೆಗೆದುಕೊಂಡು ಹೊಸ ದೀಪವನ್ನು ಕೊಡು'' ಎಂದು ಕೇಳಿದನು.

ಆ ದೀಪವನ್ನು ನೋಡಿದ ಒಡನೆಯೆ ಅದೇ ಅದ್ಭುತ ದೀಪವೆಂದು ಮಂತ್ರವಾದಿಗೆ ಗೊತ್ತಾಯಿತು. ಕೂಡಲೆ ಅವನು ಅದನ್ನು ಫಕ್ಕನೆ ಆಳಿನ ಕೈಯಿಂದ ಕಿತ್ತುಕೊಂಡು, ತನ್ನ ಅಂಗಿಯಲ್ಲಿ ಭದ್ರವಾಗಿ ಮುಚ್ಚಿಟ್ಟು, ತನ್ನ ಕೈಯಲ್ಲಿದ್ದ ದೀಪದ ಪುಟ್ಟಿಯನ್ನೇ ಆವನ ಕೈಯಲ್ಲಿ ಕೊಟ್ಟು, ''ನಿನಗೆ ಬೇಕಾದ ದೀಪವನ್ನು ಆಯ್ದುಕೋ'' ಎಂದನು. ಆಳು ತನಗೆ ಬೇಕಾದ ಒಂದು ದೀಪವನ್ನು ಆಯ್ದುಕೊಂಡು ರಾಜಪುತ್ರಿಯ ಬಳಿಗೆ ತೆಗೆದುಕೊಂಡು ಹೋದನು.

ಇತ್ತ ಮಂತ್ರವಾದಿಯು ತನ್ನ ಕೈಗೆ ದೀಪವು ಬಂದ ಕೂಡಲೆ ಅಲ್ಲಿ ನಿಲ್ಲದೆ ಜಾಗ್ರತೆಯಾಗಿ ಹೊರಟುಹೋದನು.

ಕಣ್ಣು ಮರೆಯಾಗುವವರೆಗೂ ಅವನು ಹಾಗೆಯೇ ಹೋಗಿ ಆಮೇಲೆ ಜನಗಳು ತಿರುಗಾಡದಿರುವ ಅಡ್ಡಬೀದಿಗಳಲ್ಲಿ ಬಿದ್ದು, ಊರ ಹೊರಬಾಗಿಲಿಗೆ ಹೋಗಿ ಸೇರಿದನು. ಅಲ್ಲಿಂದ ಮೆಲ್ಲಗೆ ಊರ ಹೊರಗೆ ಹೋಗಿ, ಆರೂ ಕಾಣದ ಒಂದು ಬಳಿಯಲ್ಲಿ ಕತ್ತಲೆಯಾಗುವವರೆಗೂ ತಲೆಮರೆಸಿ ಕೊಂಡಿದ್ದನು. ಸೂರ್ಯಾಸ್ತವಾಯಿತು. ಕತ್ತಲೆಯೂ ಕವಿದುಕೊಂಡಿತು. ಕೂಡಲೆ ದೀಪವನ್ನು ತಗೆದುಕೊಂಡು ತಿಕ್ಕಿದನು. ಭೂತವು ಇದಿರಿಗೆ ಬಂದು ನಿಂತುಕೊಂಡು, ''ನಾನೂ ದಾಸರಾದ ಇತರರೂ ಈ ದೀಪವನ್ನು ಇರಿಸಿಕೊಂಡಿರುವವರ ಆಜ್ಞಾನುಸಾರವಾಗಿ ನಡೆಯಲು ಸಿದ್ಧರಾಗಿದ್ದೇವೆ. ಏನು ಮಾಡಬೇಕೋ ಅಪ್ಪಣೆಯಾಗಲಿ'' ಎಂದಿತು. ''ನನ್ನನ್ನೂ ನೀವು ಈ ಊರಲ್ಲಿ ಕಟ್ಟಿರುವ ಅರಮನೆಯನ್ನೂ ಅದರಲ್ಲಿರುವ ಜನರನ್ನೂ ಈಗಲೇ ಆಫ್ರಿಕಾ ದೇಶಕ್ಕೆ ಸಾಗಿಸಿಬಿಡು'' ಎಂದು ಆಜ್ಞಾಪಿಸಿದನು. ತತ್‌ಕ್ಷಣದಲ್ಲಿಯೇ ಭೂತವು ಅವನನ್ನೂ ಆ ಅರಮನೆಯನ್ನೂ ಅವನು ಇಷ್ಟಪಟ್ಟ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಇರಿಸಿಬಿಟ್ಟಿತು.



ಮರುದಿವಸ ಬೆಳಗ್ಗೆ ಸುಲ್ತಾನನು ಎಂದಿನಂತೆ ಅಲ್ಲಾ ವುದೀನನ ಅರಮನೆಯನ್ನು ನೋಡುವುದಕ್ಕೆ ಹೋದನು. ಅಲ್ಲಿ ಅರಮನೆಯಿರಲಿಲ್ಲ! ಅದನ್ನು ನೋಡಿ ಅವನಿಗೆ ಪರಮಾಶ್ಚರ್ಯ ವಾಯಿತು. ''ಎಲೆಲ! ಇದೇನಾಶ್ಚರ್ಯ? ನಾಲ್ಕಾರು ವರ್ಷಗಳಿಂದ ಒಂದು ದಿನ ತಪ್ಪದೆ ಅರಮನೆಯನ್ನು ನೋಡುತ್ತಿದ್ದೆವು. ಇದ್ದ ಹಾಗೆ ಅದೆಲ್ಲಿ ಮಾಯವಾಯಿತು? ಅದು ಇದ್ದ ಗುರುತು ಕೂಡ ಕಾಣಿಸುವುದಿಲ್ಲ. ಇದೇನು ಆಶ್ಚರ್ಯ? ಇದೇನು ಮಾಯೆ?''-ಎಂದು ವಿಸ್ಮಯಪಟ್ಟು ಆ ಆಶ್ಚರ್ಯವನ್ನು ನೋಡುವುದಕ್ಕೆ ಬರುವಂತೆ ಮಂತ್ರಿಗೆ ಹೇಳಿ ಕಳುಹಿಸಿದನು.

ಅವನೂ ಬಂದನು. ಅವನಿಗೆ ಅಲ್ಲಾವುದೀನನ್ನು ಕಂಡರೆ ಆಗದು. ಆದುದರಿಂದ, ''ಅಲ್ಲಾವುದೀನನು ಆ ಮನೆಯನ್ನು ಮಂತ್ರಬಲದಿಂದ ಕಟ್ಟಿದನು. ಈ ಬೇಟೆಯ ನೆವದಲ್ಲಿ ಅದನ್ನು ಹಠಾತ್ತಾಗಿ ಮಂತ್ರಬಲದಿಂದಲೇ ಮಾಯ ಮಾಡಿದ್ದಾನೆ. ಆದುದರಿಂದ ಅವನನ್ನು ಈಗಲೇ ಕೈಸೆರೆ ಹಿಡಿಯಬೇಕು'' ಎಂದನು. ಕೂಡಲೆ ಕೈಸೆರೆ ಹಿಡಿಯುವ ಹಾಗೆ ಅಪ್ಪಣೆಯಾಯಿತು. ಅಲ್ಲಾವುದೀನನ್ನು ಹಿಡಿದು ತಂದು ಇದಿರಿಗೆ ನಿಲಿಸಿದರು. ಅವನು ನೂರಾರು ಕ್ಷಮಾಪಣೆಗಳನ್ನು ಬೇಡಿಕೊಂಡನು; ಏನೂ ಪ್ರಯೋಜನವಾಗಲಿಲ್ಲ.

''ಇವನ ತಲೆಯನ್ನು ಕಡಿದುಬಿಡಿ'' ಎಂದು ಆಜ್ಞೆ ಯಾಯಿತು. ಆದರೆ ಜನಗಳಿಗೆ ಅಲ್ಲಾವುದೀನನಲ್ಲಿ ಬಹಳ ಪ್ರೀತಿ. ಅವರಿಗೆ ಅನೇಕ

ವೇಳೆ ಅವನು ಉಪಕಾರಗಳನ್ನು ಮಾಡಿದ್ದನು. ಆದುದರಿಂದ ಅವರು ಅವನನ್ನು ಕೊಲ್ಲಿಸ ಕೂಡದೆಂದು ಗಲಭೆ ಹಚ್ಚಿದರು. ಜನಗಳು ತಿರುಗಿ ಮೇಲೆ ಬಿದ್ದಾರೆಂಬ ಭಯದಿಂದ ಆ ಆಜ್ಞೆಯನ್ನು ನಿಷ್ಫೇಕ್ಷಿಸಬೇಕಾಯಿತು. ಕೈಕೋಳವನ್ನು ತೆಗೆದು ಬಿಟ್ಟರು. ಕೂಡಲೆ ಅಲ್ಲಾವುದೀನನು ನಿಂತುಕೊಂಡು, ''ಮಹಾಸ್ವಾಮಿ! ಏಕೆ ನನಗೆ ಈ ಶಿಕ್ಷೆ? ನಾನು ಏನು ತಪ್ಪು ಮಾಡಿದೆನು? ಅಪ್ಪಣೆಯಾಗ ಬೇಕು''ಎಂದು ಪ್ರಾರ್ಥಿಸಿದನು. ''ಏನು ತಪ್ಪು ಮಾಡಿದೆನು? ಏನು ತಪ್ಪು ಮಾಡಿದೆಯೋ? ನಿನ್ನ ತಪ್ಪು ನಿನಗೆ ಗೊತ್ತಿಲ್ಲವೇ? ಇಲ್ಲಿ ಬಾ, ದ್ರೋಹಿ, ಇಲ್ಲಿ ಬಂದು ನೋಡು; ನಿನ್ನ ತಪ್ಪು ಗೊತ್ತಾಗುತ್ತದೆ'' ಎಂದು ಅವನನ್ನು ಹಿಡಿದೆಳೆದು ಕೊಂಡುಹೋಗಿ ಕಿಟಕಿಯ ಬಳಿಯಲ್ಲಿ ನಿಲ್ಲಿಸಿ, ''ನೋಡು, ನಿನ್ನ ಅರಮನೆಯೆಲ್ಲಿದ್ದಿತು? ಈಗ ಅದೆಲ್ಲಿ ಹೋಯಿತು? ಏನು ಮಾಡಿದೆ ? ಹೇಳು'' ಎಂದು ಗದ್ದರಿಸಿದನು. ಅಲ್ಲಾವುದೀನನು ಆ ಕಡೆಗೆ ತಿರುಗಿ ನೋಡಿದನು. ಅರಮನೆ ಇರಲಿಲ್ಲ. ಅವನಿಗೆ ಸ್ವಲ್ಪ ಕಾಲ ಮಾತೇ ನಿಂತುಹೋಯಿತು. ಆಮೇಲೆ ಅವನು ಮೆಲ್ಲಗೆ ಚೇತರಿಸಿಕೊಂಡು ಇಂತೆಂದನು ''ಅಹುದು, ನಿಜ; ಇಲ್ಲಿ ಅರಮನೆಯಿಲ್ಲ. ಅದು ಮಾಯವಾಗಿ ಹೋಗಿದೆ. ಅದನ್ನು ನಾನು ಬೇರೆ ಏನೂ ಮಾಡಲಿಲ್ಲ. ಆದರೂ ಬಾಧೆಯಿಲ್ಲ. ನನಗೆ ನಾಲ್ವತ್ತು ದಿನ ಗಡವು ಕೊಡಿಸಬೇಕು. ಅಷ್ಟರೊಳಗೆ ನಾನು ಪುನಃ ಅರಮನೆಯನ್ನು ಕಟ್ಟದಿದ್ದರೆ ನನ್ನ ತಲೆಯನ್ನು ಹೊಡಿಸಬಹುದು.''

"ನಿನಗೆ ಅವಕಾಶವನ್ನು ದಯಪಾಲಿಸಿದ್ದೇವೆ. ಆ ವೇಳೆಗೆ ನೀನು ನಮ್ಮ ಸಮ್ಮುಖದಲ್ಲಿ ಬಂದು ನಿಲ್ಲಬೇಕು. ತಪ್ಪೀಯೆ, ಜೋಕೆ'' ಎಂದು ಅಪ್ಪಣೆಯಾಯಿತು.

ಅಲ್ಲಾವುದೀನನು ಅವಮಾನದಿಂದ ತಲೆಬಾಗಿಸಿಕೊಂಡು ಹೊರಟುಹೋದನು. ಪೂರ್ವದಲ್ಲಿ ಅವನ ಹುಬ್ಬಿನ ಸನ್ನೆಗೆ ಕುಣಿಯುತ್ತಿದ್ದ ಉದ್ಯೋಗಸ್ಥರೆಲ್ಲರೂ ದೂರದೂರವಾಗಿ ನಿಂತರು. ಅವನು ಮೂರು ದಿವಸದ ವರೆಗೂ ಆ ಊರಿನಲ್ಲಿ ಕಂಡ ಕಂಡವರನ್ನೆಲ್ಲಾ "ಅರಮನೆ ಏನಾಯಿತು? ನೀವು ಬಲ್ಲಿರಾ? ಹೇಳಿ'' ಎಂದು ಕೇಳುತ್ತ ಬೀದಿಬೀದಿಯಲ್ಲಿ ಅಲೆಯುತ್ತಿದ್ದನು. ಹೀಗೆ ಮೂರು ದಿವಸ ಕಳೆದುಹೋಯಿತು. ಅರಮನೆಯ ವಿಷಯವಾಗಿ ಏನೂ ಗೊತ್ತಾಗಲಿಲ್ಲ. ಆ ವೇಳೆಗೆ ಅವನು ಬಹಳ ಬಳಲಿ ಮೆಲ್ಲಗೆ ಊರ ಹೊರಗಿನ ನದಿಯ ಬಳಿಗೆ ಹೋದನು. ಅಲ್ಲಿ ಕಾಲು ಜಾರಿ ದೊಪ್ಪನೆ ಬಿದ್ದನು. ಆಗ ಅವನ ಕೈಯಲ್ಲಿದ್ದ ಉಂಗುರವು ಬಂಡೆಗೆ ಬಲವಾಗಿ ತಗುಲಿತು. ಒಡನೆ ಅವನಿಗೆ ಪೂರ್ವದಲ್ಲಿ ಗವಿಯಲ್ಲಿ ಕಾಣಿಸಿಕೊಂಡ ಭೂತವು ಪ್ರತ್ಯಕ್ಷವಾಗಿ ಬಂದು ನಿಂತುಕೊಂಡು, "ಏನಪ್ಪಣೆ? ತಮ್ಮ ದಾಸನಂತೆ ಆಜ್ಞೆಯನ್ನು ನಡೆಯಿಸುತ್ತೇನೆ. ನಾನೂ ಈ ಉಂಗುರದ ಇತರ ದಾಸರೂ ಈ ಉಂಗುರದ ಒಡೆಯರಿಗೆ ದಾಸರಾಗಿದ್ದೇವೆ'' ಎಂದಿತು.

ಈ ಮಾತನ್ನು ಕೇಳಿದ ಕೂಡಲೆ ಅವನಿಗೆ ಪರಮಾನಂದ ವಾಯಿತು. ಈ ರೀತಿಯಾದ ಸಾಹಾಯ್ಯವು ಅಪ್ರಾರ್ಥಿತವಾಗಿ ಹಠಾತ್ತಾಗಿ ಬಂದೊದಗಿದುದರಿಂದ ತನ್ನ ಭಾಗ್ಯವೇ ಇದಿರು ಗೊಂಡಿತೆಂದು ತಿಳಿದುಕೊಂಡನು. ''ಭೂತವೇ, ನನ್ನ ಅರಮನೆ ಯೆಲ್ಲಿದೆ, ತೋರಿಸು; ಇಲ್ಲವೆ ಅದನ್ನು ಮೊದಲಿದ್ದ ಕಡೆಗೆ ತರಿಸು'' ಎಂದನು.

''ತಮ್ಮ ಆಜ್ಞೆಯೆಲ್ಲವನ್ನೂ ನಡೆಯಿಸುವುದಕ್ಕೆ ನಾನು ಶಕ್ತನಲ್ಲ. ಅಷ್ಟನ್ನೂ ನೆರವೇರಿಸುವುದಕ್ಕೆ ನಾನೇನು ದೀಪದ ದಾಸನೇ ? ನಾನು ಕೇವಲ ಉಂಗುರದ ದಾಸನು'' ಎಂದು ಅದು ಪ್ರತ್ಯುತ್ತರ ಕೊಟ್ಟಿತು.

''ಹಾಗಾದರೆ ನನ್ನ ಅರಮನೆ ಇರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗು. ಈ ಉಂಗುರದ ಬಲದಿಂದ ನಿನಗೆ ಆಜ್ಞಾಪಿಸುತ್ತೇನೆ'' ಎಂದನು. ಆ ಮಾತು ಮುಗಿವುದರೊಳಗೆ ಭೂತವು ಅವನನ್ನು ಎತ್ತಿಕೊಂಡು ಆಫ್ರಿಕಾಖಂಡಕ್ಕೆ ಹೋಗಿ ಅಲ್ಲಿ ಅವನ ಅರಮನೆಯ ಮುಂದುಗಡೆ ರಾಣಿಯ ಕೊಟಡಿಯ ಕೆಳಗೆ ಇಳಿಸಿತು. ಆ ವೇಳೆಗೆ ಸರಿಯಾಗಿ ಅಲ್ಲಿ ಕಿಟಕಿಯಲ್ಲಿ ನೋಡುತ್ತಿದ್ದ ಒಬ್ಬ ಊಳಿಗದವನು ರಾಣಿಯ ಬಳಿಗೆ ಓಡಿಹೋಗಿ ತಮ್ಮ ಯಜಮಾನರು ಬಂದ ಶುಭಸಮಾಚಾರವನ್ನು ತಿಳಿಸಿದನು. ಅವಳು ಪರಮಾನಂದದಿಂದ ಕಿಟಕಿಯ ಬಳಿಗೆ ಬಂದು ತನ್ನ ಪತಿಯನ್ನು ಕಂಡು ಕಿಟಕಿಯನ್ನು ತೆರೆದಳು. ಆ ಸದ್ದನ್ನು ಕೇಳಿ ಅಲ್ಲಾವುದೀನನು

ತಲೆಯೆತ್ತಿ ಮೇಲೆ ನೋಡಿದನು. ರಾಣಿಯು ಬಗ್ಗಿ ನೋಡುತ್ತಿದ್ದಳು. ಅವಳನ್ನು ನೋಡಿ ಅತ್ಯಂತ ಸಂತೋಷವಾಯಿತು. ಕೂಡಲೆ ಅವಳು, ''ಬೇಗ ದಯೆಮಾಡಿಸಬೇಕು; ದಿಡ್ಡಿಯ ಬಾಗಿಲನ್ನು ತೆರೆವಂತೆ ಆಳನ್ನು ಕಳುಹಿಸಿದ್ದೇನೆ. ಬೇಗ ಮೇಲಕ್ಕೆ ದಯೆಮಾಡಿಸಬೇಕು'' ಎಂದು ಹೇಳಿದಳು.

ಆ ವೇಳೆಗೆ ಆಳು ಬಾಗಿಲನ್ನು ತೆರೆದನು. ಅಲ್ಲಾವುದೀನನು ಒಳಗೆ ಪ್ರವೇಶಿಸಿ ಅಂತಃಪುರಕ್ಕೆ ಹೋಗಿ ಸೇರಿದನು. ಆ ರೀತಿಯಾಗಿ ಒಬ್ಬರಿಂದೊಬ್ಬರು ಅಗಲಿದ್ದು, ಪುನಃ ಸೇರಿದ ದಂಪತಿಗಳ ಸಮಾಗಮಸುಖವನ್ನು ಆರು ಹೇಳಲಾದೀತು? ಅವರು ಪರಸ್ಪರ ಆಲಿಂಗನಮಾಡಿಕೊಂಡು ಆನಂದಬಾಷ್ಪವನ್ನು ಸುರಿಸಿ ಹಾಗೆಯೇ ಒಂದು ಸುಖಾಸನದಲ್ಲಿ ಕುಳಿತುಕೊಂಡರು. ಆಗ ಅಲ್ಲಾವುದೀನನು ''ರಾಜಪುತ್ರಿ! ನನ್ನ ಕೊಠಡಿಯಲ್ಲಿ ಒಂದು ಹಳೆಯ ದೀಪವಿತ್ತಲ್ಲ, ಅದೆಲ್ಲಿ?''- ಎಂದು ತನ್ನ ಹೆಂಡತಿಯನ್ನು ಕೇಳಿದನು.

''ಅಯ್ಯೋ! ನಾನು ಏನು ಹೇಳಲಿ? ನಮ್ಮ ದುರದೃಷ್ಟಕ್ಕೆ ಅದೇ ಮೂಲವೆಂದು ತೋರುತ್ತದೆ. ಇಷ್ಟು ಕಷ್ಟವನ್ನು ನಾನೇ ಕೈಯಾರ ತಂದುಕೊಂಡೆನಲ್ಲಾ ಎಂದು ಸದಾ ಕೊರಗುತ್ತಿದ್ದೇನೆ. ನಾನು ಬುದ್ಧಿಯಿಲ್ಲದೆ ಅದನ್ನು ಕೊಟ್ಟು ಒಂದು ಹೊಸ ದೀಪವನ್ನು ತೆಗೆದುಕೊಂಡೆನು. ಮರುದಿವಸ ಬೆಳಗಾಗಿ ಎದ್ದು ನೋಡಿದರೆ, ನಮ್ಮ ತಂದೆಗಳ ಅರಮನೆಯೂ ಇಲ್ಲ, ಒಂದೂ ಇಲ್ಲ; ಈ ಹೊಸ

ದೇಶದಲ್ಲಿದ್ದೆವು. ಈ ದೇಶಕ್ಕೆ ಆಫ್ರಿಕಾದೇಶವೆಂದು ಹೆಸರಂತೆ'' ಎಂದು ಹೇಳಿದಳು.

''ಪ್ರಿಯೆ! ಇದು ಆಫ್ರಿಕಾದೇಶವೆಂದು ಹೇಳಿದಾಗಲೇ ನನಗೆ ಎಲ್ಲವನ್ನೂ ಹೇಳಿದ ಹಾಗಾಯಿತು. ಈಗ ಆ ಹಳೆಯ ದೀಪವೆಲ್ಲಿದೆ, ಹೇಳು. ಅಷ್ಟು ಮಾಡಿದರೆ ಸಾಕು.''

''ಅದು ಆಫ್ರಿಕಾ ಮಂತ್ರವಾದಿಯ ಬಳಿಯಲ್ಲಿದೆ. ಅವನು ಅದನ್ನು ಬಟ್ಟೆಯಲ್ಲಿ ಸುತ್ತಿ ಭದ್ರವಾಗಿ ತನ್ನ ಎದೆಯ ಬಳಿಯಲ್ಲಿ ಬಯಿತ್ತಿಟ್ಟುಕೊಂಡಿದ್ದಾನೆ. ಇದು ನನಗೆ ಹೇಗೆ ತಿಳಿಯಿತೆಂದರೆ, ಒಂದು ದಿವಸ ಅವನು ತನ್ನ ಎದೆಯ ಬಳಿಯಿಂದ ಅದನ್ನು ತೆಗೆದು ತೋರಿಸಿ, ತನ್ನ ಪರಾಕ್ರಮವನ್ನು ಕೊಚ್ಚಿಕೊಂಡನು.''

''ರಾಜಪುತ್ರಿ! ಹಾಗಾದರೆ ನಿನ್ನನ್ನು ಬಿಡುಗಡೆ ಮಾಡುವು ದಕ್ಕೂ ದೀಪವನ್ನು ಪುನಃ ಸಂಪಾದಿಸಿಕೊಳ್ಳುವುದಕ್ಕೂ ಒಂದು ತೋಡು ಮಾಡುತ್ತೇನೆ. ಅದು ನೆರವೇರಿದರೆ ನಮ್ಮ ಭಾಗ್ಯವು ಪುನಃ ನಮ್ಮ ಕೈಸೇರುತ್ತದೆ. ಈ ತೋಡನ್ನು ನಡೆಯಿಸುವುದಕ್ಕಾಗಿ ನಾನು ಸ್ವಲ್ಪ ಊರುಕಡೆ ಹೋಗಿ ಮಧ್ಯಾಹ್ನದೊಳಗೆ ಬರುತ್ತೇನೆ. ಬಳಿಕ ನೀನು ಏನು ಮಾಡಬೇಕೋ ತಿಳಿಸುತ್ತೇನೆ. ಈಗ ನಾನು ವೇಷವನ್ನು ಮರಸಿಕೊಂಡು ಹೋಗುತ್ತೇನೆ. ನಾನು ತಿರುಗಿ ಬಂದು ಬಾಗಿಲನ್ನು ತಟ್ಟಿದ ಕೂಡಲೇ ಕದವನ್ನು ತೆರೆವಂತೆ ಅಪ್ಪಣೆಮಾಡಿರು.'' ಎಂದು ಹೇಳಿ ಅಲ್ಲಾವುದೀನನು ಅರಮನೆಯನ್ನು ಬಿಟ್ಟು ಸ್ವಲ್ಪದೂರ ಹೋಗಿ

ನಾಲ್ಕು ಕಡೆಯೂ ನೋಡುತ್ತಿದ್ದನು. ಆಗ ದೂರದಲ್ಲಿ ಒಬ್ಬ ಗೌಡನು ಹೋಗುತ್ತಿದ್ದನು. ಜಾಗ್ರತೆಯಾಗಿ ಅವನ ಹತ್ತಿರ ಹೋಗಿ, "ಅಣ್ಣಾ! ಎಲೋ, ಅಣ್ಣಾ! ನನ್ನ ಬಟ್ಟೆಗಳನ್ನು ತೆಗೆದುಕೊಂಡು ನಿನ್ನ ಬಟ್ಟೆಗಳನ್ನು ಕೊಟ್ಟೀಯಾ?" ಎಂದು ಕೇಳಿದನು. ಅದಕ್ಕೆ ಅವನು ಒಪ್ಪಿಕೊಂಡನು. ಇಬ್ಬರೂ ತಮ್ಮ ಉಡುಪುಗಳನ್ನು ವಿನಿಮಯಮಾಡಿಕೊಂಡರು.

ಅದಾದ ಮೇಲೆ ಗೌಡನು ತನ್ನ ಕೆಲಸಕ್ಕೆ ಹೊರಟು ಹೋದನು. ಅಲ್ಲಾವುದೀನನು ಹತ್ತಿರದಲ್ಲಿದ್ದ ಊರನ್ನು ಪ್ರವೇಶಿಸಿದನು. ಊರಲ್ಲಿ ನಾಲ್ಕಾರು ಬೀದಿಗಳನ್ನು ದಾಟಿ ಅಂಗಡಿಯ ಬೀದಿಗೆ ಬಂದು ಸೇರಿದನು. ಅಲ್ಲಿ ಒಬ್ಬ ಗಂದಿಗನ ಅಂಗಡಿಗೆ ಹೋಗಿ ಆವುದೋ ಒಂದು ಪುಡಿಯ ಹೆಸರು ಹೇಳಿ ಅದು ಅಲ್ಲಿ ಕ್ರಯಕ್ಕೆ ಸಿಕ್ಕುತ್ತದೆಯೆ ಎಂದು ವಿಚಾರಿಸಿದನು.

ಗಂದಿಗನು ಅಲ್ಲಾವುದೀನನ ಉಡುಪನ್ನು ನೋಡಿ, ಅವನು ಬಡವನೆಂದುಕೊಂಡು, "ಅದು ನನ್ನಲ್ಲಿದೆ. ಆದರೆ ಅದರ ಕ್ರಯ ಬಹಳವಾಗುತ್ತದೆ. ನೀನು ಕೊಂಡುಕೊಳ್ಳ ಬಲ್ಲೆಯಾ" ಎಂದನು. ಅದನ್ನು ಕೇಳಿ ಅಲ್ಲಾವುದೀನನು ಒಂದು ವರಹವನ್ನು ತೆಗೆದು ತೋರಿಸಿ, "ಇದಕ್ಕೆ ಎರಡು ತೊಲ ಪುಡಿ ಬರುವುದಿಲ್ಲವೇ?"- ಎಂದನು. ಅದನ್ನು ತೆಗೆದುಕೊಂಡು ಗಂದಿಗನು ಎರಡು ತೊಲ ಪುಡಿಯನ್ನು ತ್ರಾಸಿನಲ್ಲಿ ತೂಗಿ ಕೊಟ್ಟನು. ಅದನ್ನು ತೆಗೆದುಕೊಂಡು ಅಲ್ಲಾವುದೀನನು ಕೂಡಲೆ ಅರಮನೆಗೆ ಹೋಗಿ ಅಂತಃಪುರಕ್ಕೆ ಪ್ರವೇಶಿಸಿದನು. ಅವನ ಹೆಂಡತಿ ಬಂದು ನಿಂತುಕೊಂಡಳು.

ಅವಳೊಡನೆ ಇಂತೆಂದನು: "ಪ್ರಿಯೆ, ನೀನು ನಿನ್ನ ಅಸಹ್ಯವನ್ನು ಮರೆಮಾಚಿಕೊಂಡು ಆ ಮಂತ್ರವಾದಿಯಲ್ಲಿ ಪ್ರೀತಿಯುಳ್ಳವಳಂತೆ ನಟಿಸಬೇಕು. ಅವನನ್ನು ಬಲಾತ್ಕಾರಮಾಡಿ ಇಲ್ಲಿಯೇ ಊಟಕ್ಕೆ ನಿಲ್ಲಿಸಬೇಕು. ಬಳಿಕ ಅವನು ಮನೆಗೆ ಹೋಗುವುದಕ್ಕೆ ಮುಂಚೆ ಮದ್ಯವನ್ನು ಪಾನಮಾಡುವಂತೆ ಹೇಳಬೇಕು. ಅವನು ಸಂತುಷ್ಟನಾಗಿ ಒಪ್ಪಿಕೊಳ್ಳುತ್ತಾನೆ. ಆ ಬಟ್ಟಲಿಗೆ ಈ ಪುಡಿಯನ್ನು ಮೊದಲೇ ಹಾಕಿ



ಇಟ್ಟಿದ್ದು ಕುಡಿವುದಕ್ಕೆ ಕೊಡು. ಕುಡಿದ ಒಡನೆ ಅವನು ಮೈಮರೆತು ನೆಲದ ಮೇಲೆ ಬಿದ್ದುಬಿಡುತ್ತಾನೆ. ಆಗ ನಾವು ನಮ್ಮ ದೀಪವನ್ನು ತೆಗೆದುಕೊಂಡು ಭೂತದ ಸಾಹಾಯ್ಯದಿಂದ ನಮ್ಮ ಅರಮನೆಯನ್ನು ಪುನಃ ಚೀನಾದೇಶಕ್ಕೆ ತೆಗೆಯಿಸಿಕೊಂಡು ಹೋಗಬಹುದು.''

ರಾಜಪುತ್ರಿಯು ತನ್ನ ಗಂಡನ ಮಾತಿಗೆ ಚಾಚೂ ತಪ್ಪದಂತೆ ನಡೆದಳು. ಮಂತ್ರವಾದಿ ಬಂದಾಗ ಬಹಳ ಸ್ನೇಹವನ್ನು ನಟಿಸಿ ಅಲ್ಲಿಯೇ ಭೋಜನಮಾಡಬೇಕೆಂದು ಬಲಾತ್ಕಾರ ಮಾಡಿದಳು. ಮಂತ್ರವಾದಿ ಸಂತುಷ್ಟನಾಗಿ ಒಪ್ಪಿಕೊಂಡನು. ರಾಜಾರ್ಹವಾದ ಔತಣವು ನಡೆಯಿತು. ಕೊನೆಯಲ್ಲಿ ರಾಜಪುತ್ರಿಯು ಒಂದು ಬಟ್ಟಲಲ್ಲಿ ಮದ್ಯವನ್ನು ಕೊಟ್ಟಳು. ಆ ಮರ್ಯಾದೆಗೆ ಅವನು ಆನಂದ ಪಟ್ಟು ಬಟ್ಟಲಿನಲ್ಲಿ ಒಂದು ತೊಟ್ಟು ಮದ್ಯವೂ ನಿಲ್ಲದಂತೆ ಎಲ್ಲವನ್ನೂ ಕುಡಿದನು. ವಿಷವೇರಿ ಕೂಡಲೆ ಸತ್ತುಹೋಗಿ ಕೆಳಗೆ ಬಿದ್ದುಬಿಟ್ಟನು.

ಆ ಸದ್ದನ್ನು ಕೇಳಿ ಅಲ್ಲಾವುದೀನನು ಬಾಗಿಲು ತೆರೆದು ಕೊಂಡು ಒಳಗೆ ಬಂದನು. ರಾಜಪುತ್ರಿಯು ಪರಮಾನಂದದಿಂದ ಆತನನ್ನು ಆಲಿಂಗಿಸಿಕೊಳ್ಳಲು ಬಂದಳು. ''ನೀನು ಸ್ವಲ್ಪ ಹೊತ್ತು ಮರೆಯಾಗಿರು. ಮೊದಲು ಈ ಅರಮನೆಯನ್ನು ಚೀನಾದೇಶಕ್ಕೆ ಸಾಗಿಸುತ್ತೇನೆ'' ಎಂದು ಹೇಳಿ ಅವಳನ್ನು ಕಳುಹಿಸಿದನು.

ಅವಳೂ ಅವಳ ಪರಿಜನರೂ ಹೊರಟುಹೋದರು. ಬಳಿಕ ಅವನು ಬಾಗಿಲನ್ನು ಹಾಕಿಕೊಂಡು ಮಂತ್ರವಾದಿಯು ಬಿದ್ದಿದ್ದ ಬಳಿಗೆ

ಹೋಗಿ ಅವನು ಎದೆಯ ಬಳಿಯಲ್ಲಿ ಇಟ್ಟಿದ್ದ ದೀಪವನ್ನು ತೆಗೆದುಕೊಂಡನು. ಕೂಡಲೆ ಅದನ್ನು ಅವನು ಎಂದಿನಂತೆ ತಿಕ್ಕಿದನು. ಭೂತವು ಯಥಾಪ್ರಕಾರ ಇದಿರಿಗೆ ಬಂದು ನಿಂತಿತು.

''ಭೂತವೇ! ಈಗಲೇ ಈ ಅರಮನೆಯನ್ನು ಸಾಗಿಸಿ ಹಿಂದೆ ಇದ್ದ ಸ್ಥಳದಲ್ಲಿ ಇರಿಸು'' ಎಂದು ಆಜ್ಞಾಪಿಸಿದನು. ''ಅಪ್ಪಣೆ!'' ಎಂದು ಅದು ತಲೆಬಾಗಿ ಹೊರಟುಹೋಯಿತು. ಒಡನೆ ಅರಮನೆ ಸ್ವಲ್ಪ ಅಲುಗಿದಂತಾಯಿತು. ''ಇದೇನು!'' ಎಂದು ನೋಡುವುದ ರೊಳಗೆ ಚೀನಾದೇಶದಲ್ಲಿ ಬಂದಿಳಿದಿದ್ದಿತು.

ಹೀಗೆ ಅರಮನೆ ಬಂದ ಮಾರನೆಯ ದಿವಸ ಸುಲ್ತಾನನು ತನ್ನ ಮಗಳ ಗತಿ ಏನಾಯಿತೋ ಎಂದು ಚಿಂತಿಸುತ್ತ, ಎಂದಿನಂತೆ ತನ್ನ ಅರಮನೆಯ ಕಿಟಕಿಯಿಂದ ನೋಡಿದನು. ಇದಿರಿಗೆ ಅವಳ ಅರಮನೆ ಕಾಣಿಸಿತು! ಪರಮಾನಂದವಾಯಿತು. ದುಃಖವೆಲ್ಲವೂ ನಿರ್ಮೂಲವಾಯಿತು. ಅವನು ಆಗಲೇ ಒಂದು ಕುದುರೆಯನ್ನು ತರುವಂತೆ ಆಜ್ಞಾಪಿಸಿದನು. ಕುದುರೆಯನ್ನು ತಂದರು. ಅದನ್ನು ಹತ್ತಿಕೊಂಡು ನಾಲ್ಕಾಲೋಟದಲ್ಲಿ ಓಡಿಸಿಕೊಂಡು ಮಗಳ ಅರಮನೆಗೆ ಹೋದನು.

ಆ ದಿವಸ ಅಲ್ಲಾವುದೀನನು ಬೆಳಗ್ಗೆ ಎದ್ದು ಶ್ಲಾಘ್ಯವಾದ ಸೊಗಸಾದ ಉಡುಪುಗಳನ್ನು ಹಾಕಿಕೊಂಡು ಇಪ್ಪತ್ತನಾಲ್ಕು ಕಿಟಕಿಯ ಕೊಠಡಿಯಲ್ಲಿದ್ದನು. ಅಲ್ಲಿಗೆ ಸುಲ್ತಾನನ ಸವಾರಿ ಬರುವುದನ್ನು

ಕಂಡನು. ಕೂಡಲೆ ಕೆಳಗೆ ಬಂದು, ಸುಲ್ತಾನನಿಗೆ ಕೈಕೊಟ್ಟು ಇಳಿಸಿಕೊಂಡು ಮೆಲ್ಲಗೆ ಹಂತದ ಮೇಲೆ ಹತ್ತಿಸಿ ಒಳಗೆ ಅಂತಃಪುರಕ್ಕೆ ಕರೆದುಕೊಂಡು ಹೋದನು.

ಅಲ್ಲಿ ಸುಲ್ತಾನನು ತನ್ನ ಮಗಳನ್ನು ಕಂಡು ಉಕ್ಕಿ ಬರುವ ಪ್ರೀತಿಯಿಂದ ಅವಳನ್ನು ಆಲಿಂಗಿಸಿಕೊಂಡು ಆನಂದಬಾಷ್ಪವನ್ನು ಸೂಸಿದನು. ರಾಜಪುತ್ರಿಯು ತಂದೆಯನ್ನು ಕಂಡು ಅದೇ ರೀತಿಯಲ್ಲಿಯೇ ಸಂತೋಷಪಟ್ಟಳು.

ಇದಾದ ಮೇಲೆ, ಸುಲ್ತಾನನು ಮಗಳ ಅರಮನೆ ಹೋದ ಮೊದಲುಗೊಂಡು ಪುನಃ ಅದು ಅಲ್ಲಿಂದ ಬರುವ ವರೆಗೂ ಆದ ಎಲ್ಲಾ ಸಂಗತಿಗಳನ್ನೂ ಕೇಳಿದನು. ಅಳಿಯನ ಕಡೆ ತಿರುಗಿ, "ಅಲ್ಲಾವುದೀನ್, ನಿಮ್ಮಿಂದ ಆವ ತಪ್ಪೂ ಇಲ್ಲ. ನಾನು ಆತುರ ಪಟ್ಟು ನಿಮ್ಮನ್ನು ತುಚ್ಛಾರಿಸಿ ಆಡಿಬಿಟ್ಟೆನು. ನಾನು ನಿಮ್ಮ ವಿಷಯ ದಲ್ಲಿ ನಡೆಯಿಸಿದ ಕಾರ್ಯಗಳಿಗಾಗಿ ನೀವು ಕೋಪಿಸಿಕೊಳ್ಳ ಬಾರದು. ನನ್ನ ಮಗಳ ಮೇಲಿನ ಪ್ರೀತಿ ಹಾಗೆ ಮಾಡಿತು. ಆದಕಾರಣ ನೀವು ಕ್ಷಮಿಸಬೇಕು" ಎಂದು ಹೇಳಿದನು.

"ಮಹಾಸ್ವಾಮೀ! ನಾನು ಅಸಮಾಧಾನಪಡುವುದಕ್ಕೆ ಎಷ್ಟು ಮಾತ್ರವೂ ಕಾರಣವಿಲ್ಲ. ತಾವು ಏನು ಮಾಡತಕ್ಕದ್ದೋ ಅದನ್ನೇ ಮಾಡಿರುವಿರಿ. ಆ ನೀಚ ಮಂತ್ರವಾದಿ ಈ ನನ್ನ ಕಷ್ಟಗಳಿಗೆಲ್ಲಾ ಕಾರಣ ವಾದವನು" ಎಂದು ಹೇಳಿ ಸುಲ್ತಾನನನ್ನು ಸಮಾಧಾನ ಪಡಿಸಿದನು.

ಹಾಗೆ ಎಲ್ಲರೂ ಅನೇಕಕಾಲ ಸುಖವಾಗಿರುತ್ತಿದ್ದರು. ಆ ವೇಳೆಗೆ ಸುಲ್ತಾನನು ಬಹಳ ವೃದ್ಧನಾದನು. ಅವನಿಗೆ ದೇಹದಲ್ಲಿ ರೋಗವು ಕಾಣಿಸಿಕೊಂಡಿತು. ಕೆಲವು ದಿವಸಗಳಲ್ಲಿ ಪರಲೋಕ ಯಾತ್ರೆ ಮಾಡಿದನು. ಆತನಿಗೆ ಪುತ್ರಸಂತಾನವಿರಲಿಲ್ಲ. ಆದುದರಿಂದ ರಾಜ್ಯವು ಮಗಳಿಗೆ ಬಂದಿತು. ಅಲ್ಲಾವುದೀನನೂ ರಾಜಪುತ್ರಿಯೂ ಸಿಂಹಾಸನಾರೋಹಣ ಮಾಡಿ ರಾಜ್ಯವಾಳತೊಡಗಿದರು. ಅವರಿಗೆ ಮಕ್ಕಳೂ ಮೊಮ್ಮಕ್ಕಳೂ ಆದರು. ಅವರೊಡನೆ ಚಿರಕಾಲ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದರು.

★ ★ ★ ★ ★

## ಕೆಲವು ಪದಗಳ ಅರ್ಥ

(ಸಂಖ್ಯೆಗಳು ಪುಟಗಳನ್ನು ಸೂಚಿಸುತ್ತವೆ.)

1. ದರ್ಜಿ - ಬಟ್ಟೆ ಹೊಲಿಯುವ ಕಸುಬು ಮಾಡುವವನು
2. ಕೈಗಾರಿಕೆ - ಕೈಕಸುಬು
3. ಕೊರಲು - ಕೊರಳು
4. ಹಿಡಿ - ಮುಷ್ಟಿ ; ವರಹ - ಒಂದು ನಿರ್ದಿಷ್ಟ ಬೆಲೆಯ ಚಿನ್ನದ ನಾಣ್ಯ
5. ಸರಕು - ಸಾಮಾನು, ಪದಾರ್ಥ; ಕದ - ಬಾಗಿಲು
6. ಕಾಲುಮಣೆ - ಪೀಠ, ಆಸನ
7. ಜೀವಿಕೆ - ಕಸುಬು; ಸ್ವರ್ಗಸ್ಥರಾಗು - ಸತ್ತು ಹೋಗು
8. ಕೆಲಸಗಳ್ಳ - ಕೆಲಸ ಮಾಡಲು ಮೈ ಬಗ್ಗದವನು
9. ಒಲ್ಲಿ - ಹೊದೆಯುವ ಮೇಲುವಸ್ತ್ರ
10. ಮಶೀತಿ - ಮಸೀದಿ
11. ಪ್ರಕೃತ - ಸಂದರ್ಭ; ಚಕ್ಕುಮುಕ್ಕಿ - ತಿಕ್ಕಿ ಬೆಂಕಿ ಹೊತ್ತಿಸುವ ಒಂದು ಬಗೆಯ ಗಟ್ಟಿಕಲ್ಲು, ಚಕಮಕಿಕಲ್ಲು; ತರಗು - ಒಣಗಿದ ಸೊಪ್ಪು, ಎಲೆ; ಪುಳ್ಳಿ - ಒಣಗಿದ ಕಟ್ಟಿಗೆ; ಗುಪ್ಪೆ - ಗುಡ್ಡೆ , ರಾಶಿ

12. ಹಿತ್ತಳೆ – ಹಿತ್ತಾಳೆ; ಕಪಾಲಶುದ್ಧಿ ಮಾಡು – ಕೆನ್ನೆಗೆ ಹೊಡೆ

13. ಸಾಹಾಯ್ಯ – ಸಹಾಯ; ಒತ್ತಾಸೆ – ಬೆಂಬಲ, ನೆರವು; ಹಂತ – ಮೆಟ್ಟಿಲು; ಕೊಟಡಿ – ಕೋಣೆ, ಕೊಠಡಿ;

14. ಗಂಗಾಳ – ಅಗಲವಾದ ತಟ್ಟೆ; ಕುಲುಕು – ತೂಗಿ ತೊನೆದಾಡು; ನಂದಿಸು – ಆರಿಸು

15. ಕುಸುಂಬೆ ಬಣ್ಣ – ಕುಸುಬೆ ಹೂವಿನ ಬಣ್ಣ, ಕೇಸರಿ ಬಣ್ಣ

18. ಧನಿಕ – ಶ್ರೀಮಂತ

19. ಕರಾಳಾಕೃತಿ – ಭಯಂಕರವಾದ, ವಿಕಾರವಾದ ಆಕೃತಿ; ಕಿಂಕರ – ದಾಸ

21. ಆರಾರ – ಯಾರ ಯಾರ;

22. ಮೈಮರೆ – ಜ್ಞಾನ ತಪ್ಪು, ದಿಗ್ಭ್ರಮೆಗೊಳ್ಳು; ತಾಂಬಾಳ – ಲೋಹದಿಂದ ಮಾಡಿದ ತಳಿಗೆ, ತಟ್ಟೆ

23. ಬೊಕ್ಕಬೆಳ್ಳಿ – ಶುದ್ಧವಾದ ಬೆಳ್ಳಿ; ಮುರಿಸು – ಚಿಲ್ಲರೆ ಮಾಡಿಸು;

24. ಕಾಲಕ್ಷೇಪ – ಕಾಲ ಕಳೆಯುವುದು.

25. ತ್ರಾಸು – ತಕ್ಕಡಿ

26. ದುಂದುಮಾಡು – ಅತಿಯಾಗಿ ಖರ್ಚುಮಾಡು; ಕೋಟಿ

- ಗೋದಾಮು, ಮಳಿಗೆ, ಕೋಠಿ, ರತ್ನಪಡಿ ವ್ಯಾಪಾರ - ರತ್ನಖಚಿತವಾದ ಒಡವೆಗಳ ವ್ಯಾಪಾರ; ನಗ - ಒಡವೆ

28. ಡಂಗುರ ಹಾಕು - ಸುದ್ದಿಯನ್ನು ಆಳುಗಳಿಂದ ಸಾರಿಸು; ವಿಸ್ಮಿತವಾಗು - ಆಶ್ಚರ್ಯವಾಗು

30. ಅಮೌಲ್ಯ - ಬೆಲೆ ಕಟ್ಟಲಾಗದ, ಅಮೂಲ್ಯವಾದ

31. ಸಮ್ಮುಖ - ಎದುರು

32. ತೀರುವಾನ - ತೀರ್ಮಾನ

33. ಸಜ್ಜೆ - ಮಲಗುವ ಮನೆ, ಶಯ್ಯಾಗಾರ;

34. ಕಟ್ಟಿಗೆಯವನು - ದೊರೆಯ ಓಲಗ ಸಾಲೆಯಲ್ಲಿ ದಂಡ ಹಿಡಿದು ಶಿಸ್ತು ಕಾಯುವವನು 35ಧಾರ್ಷ್ಟ್ಯ- ಉದ್ಧಟತನ, ದಿಟ್ಟತನ

36. ಕುಮಾರ್ತೆ - ಕುಮಾರಿ, ಮಗಳು; ರಾಜಕುಮಾರ್ತೆ - ರಾಜಕುಮಾರಿ

38. ಧ್ವಜಪಟ - ಬಾವುಟ; ಜಂಬುಖಾನೆ - ಜಮಖಾನೆ

41. ವಿವಾಹಪ್ರಸ್ತುತ - ಮದುವೆಯ ಮಂಗಳಕಾರ್ಯ; ಪರಿಜನ - ಸೇವೆ ಮಾಡುವವರು, ಪರಿವಾರ

42. ಮದವಣಿಗ - ಮದುವೆಯಾಗಲಿರುವ ಯುವಕ, ವರ; ಮದವಣಿಗಿತ್ತಿ -ಮದುವೆಯಾಗಲಿರುವ ಯುವತಿ, ವಧು

45. ಸುತರಾಂ - ಪೂರ್ತಿಯಾಗಿ, ಸರ್ವಥಾ

47. ತಾಳತಳ್ಯ - ಮಿರುಗು, ತಳತಳಿಸುವುದು; ರೂಮಾಲು - ರುಮಾಲು, ಪೇಟ; ತುರಾಯಿ - ಹೂವು ಅಥವಾ ಮುತ್ತಿನ ಅಲಂಕಾರದ ಕುಚ್ಚು , ಡಾಳು - ಚಂದ, ಸೊಗಸು

48. ಇದಿರುಗೊಳ್ಳು - ಸ್ವಾಗತಿಸು

49. ಜಾಲಂದರ - ಕಿಂಡಿಗಳ ಚೌಕಟ್ಟು; ಗವಾಕ್ಷ, ಓರಣವಾದ ಸಾಲು ವರಿಸೆ -

50. ಮಜ್ಜನ - ಸ್ನಾನ; ಕಡಿಯಾಣ - ಕಡಿವಾಣ; ಹಲ್ಲಣ - ಜೀನು

51. ಶ್ಲಾಘ್ಯವಾದ - ಹೊಗಳಲು ತಕ್ಕುದಾದ, ಉತ್ಕೃಷ್ಟವಾದ, ಪರಿಚಾರಿಕೆ - ಸೇವಕಿ; ಮೊಹರ - ಮುದ್ರೆಯೊತ್ತಿಹವುದು

52. ಮೇರೆ - ರೀತಿ, ಪ್ರಕಾರ

53. ತದನುಸಾರವಾಗಿ–ಅದಕ್ಕೆ ಅನುಗುಣವಾಗಿ ; ತಾಳಮೇಳ –ವಾದ್ಯವೃಂದ; ಸಮ್ಮುಖ – ರಾಜರಾಣಿಯರ ಎದುರಿನಲ್ಲಿರುವುದು, ಸನ್ನಿಧಿ

54. ಮನೆ ತುಂಬಿಸಿಕೊಳ್ಳು – ಮದುವೆಯಾದವಳನ್ನುಮೊದಲ ಸಲ ಆಕೆಯ ಗಂಡನ ಮನೆಗೆ ವಿಧಿಪೂರ್ವಕವಾಗಿ ಬರಮಾಡಿಕೊಳ್ಳುವುದು.

57. ಊಳಿಗದವರು – ಪರಿಚಾರಿಕೆಯವರು; ಉದಯಕಾಲ – ಸೂರ್ಯಹುಟ್ಟುವ ಹೊತ್ತು

58. ಪರಿಚಾರಿಣಿ – ಸೇವೆ ಸಲ್ಲಿಸುವವಳು; ಪ್ರಸ್ತುತ – ಮಂಗಳ ಕಾರ್ಯ

59. ಭಲ್ಲೆಯದವರು – ಈಟಿ ಹಿಡಿದವರು; ಇಲಾಲಿ – ಹಿಲಾಲು, ಬಟ್ಟೆಯನ್ನು ಎಣ್ಣೆಯಲ್ಲಿ ನೆನಸಿ ಮಾಡಿದ ದೀವಟಿಗೆ; ಅವ್ವೆಯರು – ರಾಜಾಂತಃಪುರದಲ್ಲಿ ಸೇವೆ ಗಾಗಿ ಇರುವ ಹೆಂಗಸರು; ಸಖಿಗಳು – ಗೆಳತಿಯರು;

60. ಪರಿಜನ – ಪರಿವಾರ; ತಳಿಗೆ – ಹರಿವಾಣ, ತಟ್ಟೆ; ಪಡಿಗ – ಪೀಕದಾನಿ, ಉಗುಳುವ ಪಾತ್ರೆ; ಕಾಳಂಜಿ – ಪನ್ನೀರಿನ ಪಾತ್ರೆ; ತೊಟ್ಟಿ – ಅಂಗಳ, ಅಂತಃಪುರ, ದರ್ಬಾರುಸ್ಥಳ; ದೇಶಾಚಾರ – ಆಯಾ ದೇಶದ ನಡೆವಳಿಕೆ

62. ಶಿರಸಾವಹಿಸು – ಅಪ್ಪಣೆಯನ್ನು ಅತ್ಯಂತ ವಿನಯದಿಂದ ಒಪ್ಪಿಕೊಳ್ಳು;

67. ಬೊಕ್ಕಸ – ಭಂಡಾರ; ದೀವಿಗೆ – ಲೋಹದ ದೀಪ; ಮಿರುಗು ಹಾಕು – ಗಿಲೀಟು ಮಾಡು, ಹೊಳಪುಕೊಡು; ಹೊತ್ತಿನಂತೆ – ಬೆಳಗಾಗುತ್ತಿದ್ದ ಹಾಗೆಯೇ

68. ದೊಂಬಿ – ಗುಂಪು, ಗದ್ದಲ

72. ಕೈಸೆರೆ ಹಿಡಿ – ಬಂಧಿಸು, ಕೈದು ಮಾಡು; ಕೈಕೋಳ – ಕೈಗೆ ತೊಡಿಸುವ ಬೇಡಿ, ಸಂಕೋಲೆ

73. ಬಾಧೆ – ತೊಂದರೆ, ಬಾಧಕ;

74. ಸಾಹಾಯ್ಯ – ಸಹಾಯ, ನೆರವು; ಅಪ್ರಾರ್ಥಿತವಾಗಿ – ಕೇಳಿಕೊಳ್ಳದೆಯೇ

75. ದಿಡ್ಡಿಯ ಬಾಗಿಲು – ಸಣ್ಣ ಬಾಗಿಲು, ಕಂಡಿ

76. ಅಗಲಿರು – ಬೇರೆಯಾಗಿ ಇರು; ಸಮಾಗಮಸುಖ – ಕೂಡಿಕೊಂಡ ಸಂತೋಷ; ಸುಖಾಸನ – ಅನುಕೂಲಕರವಾದ ಪೀಠ, ಆರಾಮಕುರ್ಚಿ

77. ಬಯಿತಿಟ್ಟುಕೊಳ್ಳು – ಬಚ್ಚಿಟ್ಟುಕೊಳ್ಳು; ತೋಡು – ಉಪಾಯ, ಹಂಚಿಕೆ, ತಂತ್ರ; ವಿನಿಮಯ – ಪರಸ್ಪರವಾಗಿ ಬದಲಾಯಿಸುಕೊಳ್ಳುವಿಕೆ.

78. ಗಂದಿಗ - ಔಷಧದ ನಾರುಬೇರುಗಳಂಥ ಮದ್ದುಗಳನ್ನು ಮಾರುವವನು;


79. ಅಸಹ್ಯ - ಜುಗುಪ್ಸೆ

80. ಚಾಚೂ ತಪ್ಪದೆ - ಕೊಂಚವೂ ತಪ್ಪದೆ

82. ತುಟಾರಿಸಿ ಆಡು - ದುಡುಕಿ ಮಾತಾಡು, ವಿಚಾರ ಮಾಡದೆ ಮಾತಾಡು

83. ಮಮ್ಮಕ್ಕಳು - ಮೊಮ್ಮಕ್ಕಳು; ಚಿರಕಾಲ - ಬಹುಕಾಲ.

* * * * *



‘ಅಲ್ಲಾವುದೀನ್ ಮತ್ತು ಅದ್ಭುತ ದೀಪ’ ಮಕ್ಕಳ ವಾಚನಾಭಿರುಚಿಗಾಗಿ ಸರಸವಾದ ಶೈಲಿಯಲ್ಲಿ ರಚಿತವಾದ, ಅಲ್ಲಲ್ಲಿ ಚಿತ್ರಗಳಿರುವ ಪುಸ್ತಕ.

ಈ ಪುಸ್ತಕ ಮೊದಲು ಪ್ರಕಟವಾದ ವರ್ಷ 1899. ಇದನ್ನು ಸಿದ್ಧಪಡಿಸಿದವರು ಆಗ್ಗೆ ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ಗ್ರಂಥಪಾಲರಾಗಿದ್ದ ಎಸ್.ಜಿ. ನರಸಿಂಹಾಚಾರ್ಯರು.

ಈ ನೂರ ಹತ್ತು ವರ್ಷಗಳಲ್ಲಿ ಭಾಷೆಯ ಗತಿಯಲ್ಲಿ ಉಂಟಾಗಿರುವ ಬದಲಾವಣೆಗಳಿಂದ ಈ ಪುಸ್ತಕದ ಭಾಷೆ ಸ್ವಲ್ಪ ಹಳತಾಗಿ ತೋರಬಹುದು. ಆದರೆ ಒಟ್ಟಿನಲ್ಲಿ ಸರಳವೂ ಸುಲಭವೂ ಆಗಿ ಓದಿಗೆ ಇಂದು ಸಹ ಈ ಪುಸ್ತಕ ಒಪ್ಪುವುದೆನ್ನಬೇಕು. ನಮ್ಮ ಕಾಲದ ಮಕ್ಕಳು, ಅವರ ಅಜ್ಜ ಮುತ್ತಜ್ಜಂದಿರು ತಮ್ಮ ಬಾಲ್ಯ ಕಾಲದಲ್ಲಿ ಓದಿ ಸಂತೋಷಪಟ್ಟ ಹಾಗೆಯೇ ತಾವು ಸಹ ಈ ಪುಸ್ತಕವನ್ನು ಓದಿ ಸಂತೋಷಪಡುವುದಗಲಿ ಎಂದು ಹಾರೈಸುತ್ತೇನೆ.

- ಟಿ. ... ಶಾಸ್ತ್ರೀ

ALLAVUDIN MATTU ADEH
RS 40.00
KAN 21287 8

**ವಸಂತ ಪ್ರಕಾಶನ**
ನಂ. 360, 10ನೇ ‘ಬಿ’ಮು...
ಜಯನಗರ, ಬೆಂಗಳೂರು ...
ದೂರವಾಣಿ: **22443996**
email: vasantha_prakashana@rediffmail.com

ವಸಂತ ಪ್ರಕಾಶನ

**ಬೆಲೆ ರೂ. 40/-**

Artfocus 98455 00709